ಸಂಪುಟ: 06 ಸಂಚಿಕೆ: 65 ಪುಟಗಳು: 08 ಮಂಗಳವಾರ 19 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಯಾವುದನ್ನು ಬಯಸಬೇಡಿ. ನಮ್ಮನ್ನು ದುಃಖಕ್ಕೊಳಪಡಿಸುವ ಎಲ್ಲಾ ಕಷ್ಟಗಳಿಗೂ ಆಸೆಯೇ ಕಾರಣ.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಎಸ್ ಐ ಆರ್ ಆತಂಕ: ಮತದಾನದ ಹಕ್ಕು ಬೇಕಾದರೆ ಜನರಲ್ಲಿ ಜಾಗೃತಿ ಇರಲಿ!

## ● ಕರ್ನಾಟಕದಲ್ಲೂ ಜಾರಿಗೆ ಬರಲಿರುವ ಎಸ್ ಐ ಆರ್ ಪ್ರಕ್ರಿಯೆಗೆ ವ್ಯಕ್ತವಾಗುತ್ತಿದೆ ಭಾರೀ ವಿರೋಧ

• ಉದಯವಾಹಿನಿ, ಬೆಂಗಳೂರು

ಪಶ್ಚಿಮ ಬಂಗಾಳದಲ್ಲಿ ಎಸ್ ಐ ಆರ್ ಜಾರಿಗೊಂಡ ರೀತಿಯಲ್ಲಿ ಕರ್ನಾಟಕದಲ್ಲಿ ಆಗಲು ಬಿಡುವುದಿಲ್ಲ ಎಂದು ಮಾಜಿ ಸಂಸದ ಡಿಕೆ ಸುರೇಶ್ ಹೇಳಿದರು. ಬೆಂಗಳೂರಿನಲ್ಲಿ ಸೋಮವಾರ ಮಾತನಾಡಿದ ಅವರು, ಎಸ್ಐ ಆರ್ ತಡೆಯಲು ಸಾಧ್ಯವಿಲ್ಲ, ಆದರೆ ಮತದಾನದ ಹಕ್ಕು ಬೇಕಾದವರು ಈ ಬಗ್ಗೆ ಜಾಗೃತಿ ವಹಿಸಬೇಕು ಎಂದು ಕರೆ ಕೊಟ್ಟರು.

ಎಸ್ ಐ ಆರ್ ಗೊಂದಲ ಆಗದ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಕೆಲಸ ಮಾಡುತ್ತೆ. ರಾಜ್ಯದಲ್ಲಿ ನಮ್ಮ ಮತದಾರರ ಹಕ್ಕನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ. ಕಾರ್ಯಕರ್ತರಿಗೆ ಸಭೆ ಮಾಡಿ, ಈ ಬಗ್ಗೆ ಎಚ್ಚರಿಕೆ ವಹಿಸುತ್ತಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ಎಸ್ ಐ ಆರ್ ತರ ಆಗದೇ ಇರುವ ಹಾಗೆ ನೋಡಿ ಕೊಳ್ಳುತ್ತೇವೆ ಎಂದರು. ಆದರೆ, ಚುನಾವಣಾ ಆಯೋಗ ಅವರ ಕೈಯಲ್ಲೇ ಇದೆ ಏನ್ ಮಾಡುತ್ತಾರೋ ಗೊತ್ತಿಲ್ಲ ಎಂದರು.

ಬಡತನಕ್ಕೆ ಜಾರುವ ಪ್ರಧಾನಿ ಆತಂಕದ ಮಾತಿನ ವಿಚಾರವಾಗಿ ಅವರು ಮಾತನಾಡಿ, ''ಮೋದಿ ವಿದೇಶಲ್ಲಿ ಮಾತನಾಡುವ ಸಂದರ್ಭದಲ್ಲಿ ನಾವು ಎಚ್ಚರಿಕೆ ವಹಿಸಿಲ್ಲ ಎಂದರೆ ಬಡತನಕ್ಕೆ ಹೋಗಬೇಕಾಗುತ್ತದೆ ಎಂದಿದ್ದಾರೆ. ಈ ಮಾತನ್ನು ಆ ದೇಶಕ್ಕೆ ಹೇಳಿದ್ದಾರಾ? ಅಥವಾ ಭಾರತಕ್ಕೆ ಹೇಳಿದ್ರಾ ಅಂತ ನೋಡಬೇಕು. ಮೋದಿ 12 ವರ್ಷದಿಂದ ಅಧಿಕಾರದಲ್ಲಿದ್ದಾರೆ. ಎರಡು ಉದ್ಯಮಗಳಿಗೆ ರಕ್ಷಣೆ ಕೊಡಲು ಜನರಿಗೆ ಹೊರೆ ಹಾಕಿದ್ದಾರೆ'' ಎಂದು ಆರೋಪಿಸಿದರು.

ಬಿಜೆಪಿಗರು ಏನೇ ಮಾಡಿದ್ರೂ ಅನಾಚಾರ ಆಗಲ್ಲ. ಕಾಂಗ್ರೆಸ್ ಪಕ್ಷದವರು ಏನಾದರು ಮಾಡಿದರೆ ಅನಾಚಾರ, ತಪ್ಪು. ಅವರ ಚಿನ್ನ ಪ್ಯೂರಿಟಿ ಜಾಸ್ತಿ. ಪಶ್ಚಿಮ ಬಂಗಾಳದ ಸಿಎಂ ಸುವೇಂದು ಅಧಿಕಾರಿ ಮೇಲೆ ಆರೋಪ, ಹೋರಾಟ ಮಾಡಿದ್ರು. ಈಗ ವಾಶಿಂಗ್ ಮಿಷಿನ್ ಗೆ ಹಾಕಿ ಕ್ಲೀನ್ ಮಾಡಿದ್ದಾರೆ ಎಂದು ವ್ಯಂಗ್ಯವಾಗಿ ತಿರುಗೇಟು ನೀಡಿದರು. ಒನ್ ನೇಷನ್ ಒನ್ ಇಲೆಕ್ಷನ್ ವಿಚಾರವಾಗಿ ಇದೇ ವೇಳೆ ಮಾತನಾಡಿದ ಅವರು, 'ಬೇರೆ ಬೇರೆ ಸಮಯದಲ್ಲಿ ಚುನಾವಣೆ ಆಗಿದೆ. ಯಾವ ರೀತಿ ಆಡಳಿತ ನ್ಯಾಯ ಕೊಡ್ತಿರಿ ಅಂತ ಹೇಳಬೇಕು. ಚುನಾವಣೆ ಸುಲಭದ ಮಾತು. ಆದ್ರೆ ಸರ್ಕಾರಗಳಿಗೆ ಇವರು ಸ್ಪಷ್ಟನೆ ನೀಡಬೇಕು. ಇಡೀ ದೇಶದಲ್ಲಿ ಒಂದೇ ಸಲಕ್ಕೆ ಎಲ್ಲರನ್ನು ಮುಗಿಸುವ ಪ್ರಯತ್ನ ಇದು. ವರ್ಷಕ್ಕೆ ದಂಡಯಾತ್ರೆ, ಹೋಗುವ ಬದಲು, ಒಂದೇ ಸಲಕ್ಕೆ ದಂಡಯಾತ್ರೆ, ಹೋಗುವ ಪ್ರಯತ್ನವಾಗಿದೆ' ಎಂದರು.

ನೀಟ್ ಪರೀಕ್ಷೆಯಲ್ಲಿ ಅಕ್ರಮ ವಿಚಾರವಾಗಿ ಪ್ರಧಾನಿ ಮೋದಿ ಮೌನಕ್ಕೆ ಕಿಡಿಕಾರಿದ ಅವರು, 'ಪ್ರಧಾನಿ ಮೋದಿ ಎಲ್ಲದಕ್ಕೂ ಮಾತಾಡ್ತಾರೆ. ಇದಕ್ಕೂ ಪ್ರಧಾನಿ ಬಂದು ಮಾತಾಡಬೇಕು' ಎಂದು ಡಿಕೆ ಸುರೇಶ್ ಒತ್ತಾಯಿಸಿದರು.



### ದೇಶದ ಮಾನ ಕಳೆಯುವ ಪ್ರಯತ್ನ

ಬಡತನದ ಸಂದೇಶ ನೀಡಿದ್ದು ತಲೆ ತಗ್ಗಿಸುವ ವಿಚಾರ. ಆರ್ಥಿಕ ವ್ಯವಸ್ಥೆ ಹಾಳಾಗಿದ್ದರೆ ಅದಕ್ಕೆ ಅವರೇ ಕಾರಣ. ಯಾವ ಅರ್ಥದಲ್ಲಿ ಹೇಳಿದ್ದಾರೆ ಎಂದು ಅವರೇ ಸ್ಪಷ್ಟನೆ ನೀಡಬೇಕು. ರಾಹುಲ್ ಗಾಂಧಿ ವಿದೇಶಕ್ಕೆ ಹೋಗಿ ದೇಶದ ಬಗ್ಗೆ ಮಾತಾಡಿದ್ರು ಅಂತಾರೆ. ಆದ್ರೆ ದೇಶ ಬಡತನದಲ್ಲಿದೆ ಎಂದು ದೇಶದ ಮಾನ ಕಳೆಯುವ ಪ್ರಯತ್ನ ಮಾಡಿದ್ದಾರೆ. ಅವರ ಸ್ನೇಹಿತರಿಗೆ ನಷ್ಟ ಆಗುತ್ತೆ ಎಂದು ಜನರ ಮೇಲೆ ಹೊರೆ ಹಾಕ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

# ಪತ್ನಿ, ಪುತ್ರನ ಭೇಟಿಗೆ ಅವಕಾಶ ನೀಡಲು ನಟ ದರ್ಶನ್ ಮನವಿ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. 'ಮೇ 19ರಂದು ವಿವಾಹ ವಾರ್ಷಿಕೋತ್ಸವವಿದ್ದು, ಪತ್ನಿ ಮತ್ತು ಪುತ್ರನ ಭೇಟಿಗೆ ಅವಕಾಶ ನೀಡಬೇಕು. ಕುಟುಂಬಸ್ಥರು ಭೇಟಿಗೆ ಬಂದರೂ ಸರಿಯಾಗಿ ಮಾತನಾಡಲು ಆಗುತ್ತಿಲ್ಲ. ಗ್ರಿಲ್ ಅಡ್ಡ ಬರುತ್ತಿದೆ. ಆದ್ದರಿಂದ ಈ ಬಾರಿ ಕೊಠಡಿ ಒಳಗೆ ಮಾತುಕತೆ ಮತ್ತು ಭೇಟಿಗೆ ಅವಕಾಶ ಮಾಡಿಕೊಡಿ' ಎಂದು ದರ್ಶನ್ ಮನವಿ ಮಾಡಿದ್ದಾರೆ. ದರ್ಶನ್ ಅವರನ್ನು ಮದುವೆಯಾಗಿ ಮೇ 19ಕ್ಕೆ 23 ವರ್ಷ ತುಂಬಲಿದೆ.

ಹೀಗಾಗಿ ಅವರನ್ನು ಹತ್ತಿರದಿಂದ ಭೇಟಿ ಮಾಡಲು ಅವಕಾಶ ನೀಡಬೇಕು. ಅವರು ಮಾನಸಿಕವಾಗಿ ಕುಗ್ಗಿದ್ದು, ಆತ್ಮಸ್ಥೈರ್ಯ ತುಂಬಬೇಕಿದೆ. ಅವರೊಂದಿಗೆ ಕೆಲ ಸಮಯ ಕಳೆಯಬೇಕಿದೆ. ಜೈಲಿನ ಕೈಪಿಡಿ ಅನ್ವಯ ಅವಕಾಶ ಮಾಡಿಕೊಡಿ ಎಂದು ವಿಜಯಲಕ್ಷ್ಮಿ ಅವರು ಅಲೋಕ್ ಕುಮಾರ್‌ಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ವಿಜಯಲಕ್ಷ್ಮಿ ಅವರು ಪತಿಯ ಭೇಟಿಗೆ ಅವಕಾಶ ನೀಡುವಂತೆ ಕೋರಿ ಪತ್ರ ಬರೆದಿದ್ದಾರೆ.

# ಸಂಚಾರಿ ಹೈಕೋರ್ಟ್ ಪೀಠ ನ್ಯಾಯಮೂರ್ತಿಗೆ ಸಿಎಂ ಪತ್ರ

• ಉದಯವಾಹಿನಿ, ಬೆಂಗಳೂರು

'ಕರಾವಳಿ ಭಾಗದ ಜನರಿಗೆ ತ್ವರಿತ ನ್ಯಾಯದಾನ ಕಲ್ಪಿಸಲು ಹಾಗೂ ಸರ್ವರಿಗೂ ನ್ಯಾಯದ ಲಭ್ಯತೆ ಖಚಿತಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕು' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ. ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆಯಿಂದ ನ್ಯಾಯದಾನದ ವಿಕೇಂದ್ರೀಕರಣ, ಸಕಾಲಿಕ ಹಾಗೂ ಕೈಗೆಟುಕುವ ನ್ಯಾಯದ ಸಾಂವಿಧಾನಿಕ ಭರವಸೆಯನ್ನು ಬಲಪಡಿಸಿದಂತಾಗಲಿದೆ' ಎಂದಿದ್ದಾರೆ. ಜೊತೆಗೆ, ಪ್ರಧಾನ ಪೀಠದ ಮೇಲಿನ ಬಾಕಿ ಪ್ರಕರಣಗಳ ಒತ್ತಡವು ಗಣನೀಯವಾಗಿ ತಗ್ಗಲಿದೆ.

ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯ ಸುಮಾರು 50 ಸಾವಿರ ಚದರ ಅಡಿ ವಿಸ್ತೀರ್ಣದ ಭೂಮಿ ಲಭ್ಯವಿದೆ. ಪೀಠವು ಸುಗಮವಾಗಿ ಕಾರ್ಯನಿರ್ವಹಿಸಲು ನಾಗರಿಕ, ಆಡಳಿತಾತ್ಮಕ ಮತ್ತು ಲಾಜಿಸ್ಟಿಕ್ ಮೂಲಸೌಕರ್ಯ ಒದಗಿಸಲು ಸರ್ಕಾರ ಸಿದ್ಧವಿದೆ ಎಂದೂ ತಮ್ಮ ಪತ್ರದ ಮೂಲಕ ಕೇಳಿದ್ದಾರೆ.

# ರಾಜ್ಯಕ್ಕೆ 1,122 ಹೆಚ್ಚುವರಿ ವೈದ್ಯಕೀಯ ಸೀಟುಗಳ ಹಂಚಿಕೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕಕ್ಕೆ ಹೆಚ್ಚುವರಿಯಾಗಿ 1,122 ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಲಾಗಿದೆ. ಇದರೊಂದಿಗೆ ಆರೋಗ್ಯ ವೃತ್ತಿಪರರಿಗೆ ಸುವರ್ಣಾವಕಾಶವನ್ನು ಒದಗಿಸಲಾಗಿದೆ ಎಂದು ಸಚಿವ ಶರಣ ಪ್ರಕಾಶ ಪಾಟೀಲ ಅವರು ತಿಳಿಸಿದ್ದಾರೆ. ವಿಧಾನಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಪಾಟೀಲ, 'ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಮುಂಚೂಣಿಯಲ್ಲಿ ಇದೆ. ಇದೀಗ ರಾಜ್ಯಕ್ಕೆ ಹಂಚಿಕೆ ಆಗಿರುವ ಹೆಚ್ಚುವರಿ ಸೀಟುಗಳು ಕೊಪ್ಪಳ, ಗದಗ, ಚಾಮರಾಜನಗರ, ಕಾರವಾರ, ಕಾವೇರಿ ಮತ್ತು ಇತರ ಜಿಲ್ಲೆಗಳಿಗೆ ಪ್ರಯೋಜನವನ್ನು ನೀಡಲಿವೆ' ಎಂದು ಹೇಳಿದ್ದಾರೆ.

ಪದವಿಪೂರ್ವ ಸೀಟುಗಳಿಗೆ ಕೇಂದ್ರ ಸರ್ಕಾರದ ಅನುದಾನ 495 ಕೋಟಿಗಳಾಗಿದ್ದು, ಸ್ನಾತಕೋತ್ತರ ವೈದ್ಯಕೀಯ ಸೀಟುಗಳಿಗೆ 541 ಕೋಟಿ ಅನುದಾನ ನೀಡಲಿದೆ ಎಂದು ಅವರು ತಿಳಿಸಿದ್ದಾರೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಮೇ 15ರಂದು ಅಂತಿಮ ಅನುಮೋದನೆ ನೀಡಿರುವುದಾಗಿ ಅವರು ತಿಳಿಸಿದ್ದಾರೆ. ಒಟ್ಟಾರೆಯಾಗಿ, ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ರಾಜ್ಯವು 1,090 ಕೋಟಿ ಪಡೆಯಲಿದೆ. ಒಂದೇ ರಾಜ್ಯಕ್ಕೆ 1,000ಕ್ಕೂ ಅಧಿಕ ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಿರುವುದು ಹೊಸ ದಾಖಲೆಯಾಗಿದೆ.

ಇದು ಕರ್ನಾಟಕದ ಸಾಧನೆ ಹಿಡಿದ ಕೈಗನ್ನಡಿ ಎಂದು ಪಾಟೀಲ್ ತಿಳಿಸಿದ್ದಾರೆ. 'ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಬಯಸುವವರಿಗೆ ಕರ್ನಾಟಕವು ಅತೀ ಹೆಚ್ಚಿನ ಅವಕಾಶ ನೀಡುತ್ತಿದೆ. ಇದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ.



# ಸಾರಿಗೆ ಮುಷ್ಕರ ಖಚಿತ ನೋ ಪೇ ನಿಶ್ಚಿತ

**ಮೇ 20ರಂದು ಸಾರಿಗೆ ನೌಕರರ ಮುಷ್ಕರ ಖಚಿತ ಎಂದ ಮುಖಂಡರು**

### ನಾವು ಯಾವುದಕ್ಕೂ ಹೆದರುವುದಿಲ್ಲ

ನಮ್ಮ ಬೇಡಿಕೆ ಈಡೇರಿಸಲೇಬೇಕು, ಸಾರಿಗೆ ಮುಷ್ಕರ ಶುರುವಾದ ಮೇಲೆ ಏನೇನು ಆಗುತ್ತೆ ನೋಡೋಣ. ಸಾರಿಗೆ ನೌಕರರನ್ನು ಅರೆಸ್ಟ್ ಮಾಡಿದ್ರೆ ಬಸ್ ಯಾರು ಓಡಿಸುತ್ತಾರೆ ಎಸ್ಮಾ ಜಾರಿಯಲ್ಲಿದೆ ಅಂತಾರೆ, ನಾವು ಯಾವುದಕ್ಕೂ ಹೆದರುವುದಿಲ್ಲ ಎಂದು ಬೆಂಗಳೂರಲ್ಲಿ ಸಾರಿಗೆ ನೌಕರರ ಮುಖಂಡ ವಿಜಯ್ ಭಾಸ್ಕರ್ ಹೇಳಿದ್ದಾರೆ.

## ಅಧಿಕಾರಿಗಳ ಎಚ್ಚರಿಕೆಗೂ ಡೋಂಟ್‌ಕೇರ್


• ಉದಯವಾಹಿನಿ, ಬೆಂಗಳೂರು

ಮೇ 20ರಂದು ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿರುವ ಸಂಬಂಧ ಈಗಾಗಲೇ ಕೆಎಸ್‌ಆರ್‌ಟಿಸಿ ಖಡಕ್ ಎಚ್ಚರಿಕೆ ರವಾನಿಸಿದೆ. ಬುಧವಾರ ಕೆಲಸಕ್ಕೆ ಹಾಜರಾಗದಿದ್ದರೆ 'ನೋ ವರ್ಕ್ ನೋ ಪೇ' ಎಂದು ಸಿಬ್ಬಂದಿಗೆ ತಿಳಿಸಲಾಗಿದ್ದು, ಮುಷ್ಕರದಲ್ಲಿ ಭಾಗಿಯಾಗದಂತೆ ಕೆಎಸ್‌ಆರ್‌ಟಿಸಿ ಎಂಡಿ ಅಕ್ರಂಪಾಷಾ ಆದೇಶಿಸಿದ್ದಾರೆ. ವಿಶೇಷ ಸೂಚನೆಯಡಿ ನೀಡಿರುವ ನಿರ್ದೇಶನದನ್ವಯ ಕರ್ತವ್ಯಕ್ಕೆ ಗೈರುಹಾಜರಾದ ನೌಕರರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಹೀಗಿದ್ದರೂ ಸಾರಿಗೆ ನೌಕರರು ಮಾತ್ರ ಪಟ್ಟು ಬಿಡಲು ನಿರಾಕರಿಸಿದ್ದು, ಮುಷ್ಕರ ನಡೆಸುವುದು ಖಚಿತ ಎಂದು ತಿಳಿಸಿದ್ದಾರೆ.

ಮುಷ್ಕರಕ್ಕೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೆಲಸ ಮಾಡದಿದ್ದರೆ ವೇತನವಿಲ್ಲ ಎಂದು ನೌಕರರಿಗೆ ಖಡಕ್ ಎಚ್ಚರಿಕೆ ನೀಡಿದೆ. ಮುಷ್ಕರದಲ್ಲಿ ಭಾಗವಹಿಸುವ ನೌಕರರ ವಿರುದ್ಧ ''ಕೆಲಸ ಮಾಡದಿದ್ದಾಗ ವೇತನವಿಲ್ಲ'' ತತ್ವದಡಿ ಕಠಿಣ ಶಿಸ್ತು ಕ್ರಮ ಜರುಗಿಸಲಾಗುವುದು ಜೊತೆಗೆ ಮುಷ್ಕರದಲ್ಲಿ ಪಾಲ್ಗೊಂಡರೆ ವೇತನ ಕಡಿತ ಮಾಡುವುದಾಗಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅಧಿಕೃತ ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕರಿಗೆ ಸಮರ್ಪಕ ಸಾರಿಗೆ ಒದಗಿಸುವುದು ನಿಗಮದ ಜವಾಬ್ದಾರಿಯಾಗಿದೆ. ಸರ್ಕಾರವು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸೇವೆಯನ್ನು ಅಗತ್ಯ ಸೇವೆಗಳ ಕಾಯ್ದೆ ಅಡಿ ಎಸ್ಮಾ ತಂದಿರುವುದರಿಂದ ನೌಕರರು ಮುಷ್ಕರ ಹೂಡುವಂತಿಲ್ಲ ಹಾಗೂ ಯಾರೂ ಇದಕ್ಕೆ ಪ್ರಚೋದನೆ ನೀಡುವಂತಿಲ್ಲ ಎಂದು ಸೂಚನೆ ನೀಡಿದ್ದಾರೆ. ಸರ್ಕಾರ ಸಾರಿಗೆ ನಿಗಮಗಳ ಸೇವೆಯನ್ನು ''ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆ'' ಎಂದು ಘೋಷಿಸಿದೆ. ಸದ್ಯ ಮುಷ್ಕರದ ನೋಟಿಸ್ ಕುರಿತಾದ ವಿವಾದ ಕಾರ್ಮಿಕ ಆಯುಕ್ತರ ಮುಂದೆ ರಾಜೀ ಸಂಧಾನದಲ್ಲಿರುವುದರಿಂದ, ನಿಯಮಗಳ ಪ್ರಕಾರ ಸಂಧಾನ ಪ್ರಕ್ರಿಯೆ ನಡೆಯುತ್ತಿರುವಾಗ ನೌಕರರು ಮುಷ್ಕರ ಮಾಡುವಂತಿಲ್ಲ ಎಂದು ತಿಳಿಸಿದ್ದಾರೆ. ಮೇ 20 ರಿಂದ ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ತಡೆಯಲು ನಿಗಮವು ಎಲ್ಲಾ ವಿಭಾಗೀಯ ಅಧಿಕಾರಿಗಳಿಗೆ ಈ ಕೆಳಗಿನ ನಿರ್ದೇಶನಗಳನ್ನು ನೀಡಿದೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

### ಮುಷ್ಕರಕ್ಕೆ ಕರೆ ನೀಡಿರುವುದು ಕಾನೂನು ಬಾಹಿರ




ಮತ್ತೊಂದೆಡೆ ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ, ಸಾರಿಗೆ ಸಿಬ್ಬಂದಿ ಮುಷ್ಕರಕ್ಕೆ ಕರೆ ನೀಡಿರುವುದು ಕಾನೂನು ಬಾಹಿರ ಎಂದಿದ್ದಾರೆ. ಈಗಾಗಲೇ 'ನೋ ವರ್ಕ್ ನೋ ಪೇ' ಆದೇಶ ಜಾರಿಮಾಡಲಾಗಿದ್ದು, ಸಾರಿಗೆ ಮುಷ್ಕರಕ್ಕೆ ಕರೆ ನೀಡಿದವರ ವಿರುದ್ಧ ಕಾನೂನು ಕ್ರಮ ನಿಶ್ಚಿತ. ಎಲ್ಲಾ ಜಿಲ್ಲೆಗಳ ಎಸ್‌ಪಿ, ಆರ್‌ಟಿಒಗಳ ಜೊತೆ ಚರ್ಚೆ ಮಾಡಿದ್ದೇವೆ. ಸರ್ಕಾರದ ಸಾಧನಾ ಸಮಾವೇಶಕ್ಕೆ 2,000 ಬಸ್ ಕಳುಹಿಸಲಾಗುತ್ತಿದೆ. ಮೇ 20ರಂದು ರಾಜ್ಯದ ಎಲ್ಲಾ ಡಿಪೋಗಳಿಗೆ ಭದ್ರತೆ ನೀಡಲಾಗುವುದು. ಪೊಲೀಸ್ ಇಲಾಖೆ ಜೊತೆ ಚರ್ಚಿಸಲಾಗಿದ್ದು ಭದ್ರತೆಗೆ ಸೂಚಿಸಲಾಗಿದೆ. ಮುಷ್ಕರದಲ್ಲಿ ಭಾಗಿಯಾಗಲ್ಲವೆಂದು ಸಾರಿಗೆ ಸಿಬ್ಬಂದಿಯಿಂದ ಮುಚ್ಚಳಿಕೆ ಬರೆಸಿಕೊಂಡಿರುವುದರಿಂದ ಸಾರಿಗೆ ಬಸ್ ಸಂಚಾರ ಇರುತ್ತೆ ಎಂದವರು ತಿಳಿಸಿದ್ದಾರೆ.

ಇದರ ಹೊರತಾಗಿಯೂ ಮುಷ್ಕರ ನಡೆದರೆ ನಮ್ಮಲ್ಲಿ 2,000 ತರಬೇತಿನಿರತರು ಇದ್ದಾರೆ. ಸಾರಿಗೆ ಇಲಾಖೆಯ 4 ನಿಗಮಗಳಲ್ಲಿ 5,000 ತರಬೇತಿ ಚಾಲಕರಿದ್ದಾರೆ. ಅವರನ್ನು ನಿಯೋಜಿಸುವ ಮೂಲಕ ಸಾರಿಗೆ ಬಸ್ ಸೇವೆ ನೀಡುತ್ತೇವೆ. ಜೊತೆಗೆ ಖಾಸಗಿ ಬಸ್‌ಗಳ ಮಾಲೀಕರ ಸಂಘದ ಜೊತೆಗೂ ಚರ್ಚೆ ಮಾಡಿದ್ದು, ಪ್ರಯಾಣಿಕರಿಗೆ ತೊಂದರೆ ಆಗದಂತೆ ಖಾಸಗಿ ಬಸ್‌ಗಳನ್ನು ಓಡಿಸ್ತೇವೆ. ನಮ್ಮ ಜೊತೆ ಚರ್ಚೆ ನಡೆಸಲು ಸಾರಿಗೆ ಸಿಬ್ಬಂದಿಗೆ ಮುಕ್ತ ಅವಕಾಶವಿದೆ ಎಂದರು.

### ವೇತನ ಕಡಿತ ಮತ್ತು ಶಿಸ್ತು ಕ್ರಮ

ಮುಷ್ಕರದ ಅವಧಿಯಲ್ಲಿ ಕೆಲಸಕ್ಕೆ ಗೈರುಹಾಜರಾಗುವ ನೌಕರರ ದಿನವಹಿ, ಘಟಕವಾರು ಪಟ್ಟಿಯನ್ನು ಸಿದ್ಧಪಡಿಸಿ, ಅಂದಿನ ವೇತನವನ್ನು ಕಡಿತಗೊಳಿಸಲಾಗುವುದು ಎಂದು ತಿಳಿಸಿದ್ದಾರೆ. ಉಚ್ಚ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠದ ಆದೇಶದ ಅನ್ವಯ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾಗುವ ನೌಕರರ ವೇತನ ಕಡಿತದ ಜೊತೆಗೆ ಅವರ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಜರುಗಿಸಲು ಆಡಳಿತ ಮಂಡಳಿಗೆ ಪೂರ್ಣ ಅಧಿಕಾರವಿರುತ್ತದೆ. ರಾಜ್ಯದ ಜನಸಾಮಾನ್ಯರ ಹಿತದೃಷ್ಟಿಯಿಂದ ನೌಕರರು ಯಾವುದೇ ಕಾರಣಕ್ಕೂ ಮುಷ್ಕರದಲ್ಲಿ ಭಾಗವಹಿಸದೆ, ತಮ್ಮ ದೈನಂದಿನ ಕರ್ತವ್ಯಕ್ಕೆ ಹಾಜರಾಗಬೇಕಾಗಿ ಕೆಎಸ್‌ಆರ್‌ಟಿಸಿ ಆಡಳಿತ ಮಂಡಳಿ ತಿಳಿಸಿದೆ.



### ರಜೆಗಳ ರದ್ದು

ಮೇ 20 ರಿಂದ ಜಾರಿಗೆ ಬರುವಂತೆ ಅತ್ಯಂತ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ನೌಕರರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದು. ಅವಶ್ಯಕತೆ ಬಿದ್ದಲ್ಲಿ ವಾರದ ರಜೆಯನ್ನೂ ರದ್ದುಗೊಳಿಸಿ ಕರ್ತವ್ಯಕ್ಕೆ ನಿಯೋಜಿಸಬಹುದು ಎಂದು ಹೇಳಿದ್ದಾರೆ.

### ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇದೇ 20 ರಿಂದ ಸಾರಿಗೆ ನೌಕರರ ಮುಷ್ಕರ ಹಿನ್ನೆಲೆ

- ನೌಕರರಿಗೆ .ಖಡಕ್ ಎಚ್ಚರಿಕೆ ನೀಡಿದ ಸಾರಿಗೆ ಸಂಸ್ಥೆ
- ಕೆಲಸ ಮಾಡದಿದ್ದಾಗ ವೇತನವಿಲ್ಲ ಖಡಕ್ ಸಂದೇಶ ರವಾನಿಸಿದ ಸರ್ಕಾರ
- ಮುಷ್ಕರದಲ್ಲಿ ಪಾಲ್ಗೊಂಡರೆ ವೇತನ ಕಡಿತದ ಎಚ್ಚರಿಕೆ
- ನ್ಯಾಯಾಲಯದ ಆದೇಶದ ಅನ್ವಯ ಕ್ರಮ
- ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ನೌಕರರಿಗೆ ಯಾವುದೇ ರೀತಿಯ ರಜೆ ಮಂಜೂರು ರದ್ದು
- ಸರ್ಕಾರ ಸಾರಿಗೆ ನಿಗಮಗಳ ಸೇವೆಯನ್ನು ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆ ಎಂದು ಘೋಷಣೆ

# ದುಬಾರೆ ಸಾಕಾನೆ ಶಿಬಿರದ ಘಟನೆ ಬೆನ್ನಲ್ಲೇ ಎಚ್ಚೆತ್ತುಕೊಂಡ ಅರಣ್ಯ ಇಲಾಖೆ

## ■ ಸಾಕಾನೆಗಳ ಕಾಳಗದ ನಡುವೆ ಸಿಕ್ಕಿ ಹಾಕೊಂಡ ಮಹಿಳೆಯೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ

• ಉದಯವಾಹಿನಿ, ಬೆಂಗಳೂರು

ದುಬಾರಿ ಸಾಕಾನೆ ಶಿಬಿರದಲ್ಲಿ ನಡೆದ ಘಟನೆಯಲ್ಲಿ ತಮಿಳುನಾಡಿನ ಮಹಿಳೆಯೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ.

ಈ ಘಟನೆಯ ಬೆನ್ನಲ್ಲೇ ಅರಣ್ಯ ಇಲಾಖೆ ಎಚ್ಚೆತ್ತುಕೊಂಡಿದೆ. ಇದೀಗ ಪ್ರವಾಸಿಗರ ಸುರಕ್ಷತೆಗಾಗಿ ಎಸ್ ಓ ಪಿಯನ್ನು ರಚನೆ ಮಾಡಲು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ.



ರಾಜ್ಯದಲ್ಲಿರುವ ಎಲ್ಲಾ ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್.ಓ.ಪಿ.) ರೂಪಿಸುವಂತೆ ಮತ್ತು 100 ಅಡಿ ದೂರದಲ್ಲಿ ನಿಂತು ಆನೆಗಳ ಸ್ನಾನ ವೀಕ್ಷಿಸಲು ಅವಕಾಶ ನೀಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಆದೇಶ ನೀಡಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಈ ಸಂಬಂಧ ಸೂಚನೆ ನೀಡಿರುವ ಅವರು, ದುಬಾರೆ ಸಾಕಾನೆ ಶಿಬಿರದಲ್ಲಿ ಎರಡು ಆನೆಗಳ ನಡುವೆ ನಡೆದ ಕಾದಾಟದ ವೇಳೆ ಮಹಿಳೆ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯ ಪ್ರತಿಪಾದಿಸಿದ್ದಾರೆ.

ಪರಿಸರ ಪ್ರವಾಸೋದ್ಯಮದ ಚಾರಣಪಥಗಳಲ್ಲಿ ಚಾರಣಿಗರ/ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್.ಓ.ಪಿ.) ರೂಪಿಸಲಾಗಿದ್ದು, ಈ ಎಸ್.ಓ.ಪಿ. ಜಾರಿ ಖಚಿತಪಡಿಸಿಕೊಳ್ಳುವವರೆಗೆ ಚಾರಣಪಥಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಈಗಾಗಲೇ ಸೂಚಿಸಲಾಗಿದೆ. ಅದೇ ಪ್ರಕಾರವಾಗಿ ಸಾಕಾನೆ ಶಿಬಿರಗಳಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಎಸ್.ಓ.ಪಿ. ರೂಪಿಸಲು ನಿರ್ದೇಶನ ನೀಡಿದ್ದಾರೆ.

ರಾಜ್ಯದಲ್ಲಿರುವ ಎಲ್ಲಾ ಸಾಕಾನೆ ಶಿಬಿರದಲ್ಲಿ ನಾಳೆಯಿಂದಲೇ ಪ್ರವಾಸಿಗರು ಆನೆಯ ಬಳಿ ಹೋಗದಂತೆ, ಕನಿಷ್ಠ 100 ಅಡಿ ದೂರದಲ್ಲಿ ನಿಂತು ಆನೆ ಮೈತೊಳೆಯುವುದನ್ನು ವೀಕ್ಷಿಸುವಂತೆ ಸೇರಿದಂತೆ ಮತ್ತು ಯಾವುದೇ ಕಾರಣಕ್ಕೂ ಆನೆಗಳ ಬಳಿ ಹೋಗಿ ಸೆಲ್ಫಿ, ಫೋಟೋ ತೆಗೆಸಿಕೊಳ್ಳಲು, ಮೈತೊಳೆಯಲು ಅವಕಾಶ ನೀಡದಂತೆ ಮತ್ತು ಬಾಳೆಹಣ್ಣು, ಬೆಲ್ಲ, ಕಬ್ಬು ಇತ್ಯಾದಿ ಯಾವುದೇ ಆಹಾರವನ್ನು ಪ್ರವಾಸಿಗರ ಕೈಯಿಂದ ತಿನ್ನಿಸದಂತೆ ಆದೇಶವನ್ನು ಹೊರಡಿಸಲೂ ಸೂಚಿಸಿದ್ದಾರೆ.

### ಏನಿದು ಘಟನೆ?

ದುಬಾರೆಯಲ್ಲಿ ಸಾಕಾನೆಗಳ ಶಿಬಿರಕ್ಕೆ ಚೆನ್ನೈ ಮೂಲದ ಕುಟುಂಬ ಪ್ರವಾಸಕ್ಕೆ ಬಂದಿತ್ತು. ಶಿಬಿರದಲ್ಲಿ ಸಾಕಾನೆಗಳ ನೀರಾಟ ವೀಕ್ಷಿಸಲು ಅವಕಾಶ ಕೊಡಲಾಗುತ್ತದೆ. ಇದೇ ಸಂದರ್ಭದಲ್ಲಿ ಶಿಬಿರದಲ್ಲಿ ಸಾಕಾನೆಗಳ ನಡುವೆ ಕಾಳಗ ನಡೆದಿದೆ. ಆಕಸ್ಮಿಕವಾಗಿ ಕೆಳಗೆ ಬಿದ್ದ ಮಹಿಳೆ ಕಾಳಗದ ನಡುವೆ ಸಿಕ್ಕಿ ಹಾಕೊಂಡು ತೀವ್ರ ಗಾಯಗೊಂಡಿದ್ದರು. ಜಿನ್ನು ಅವರನ್ನು ಆಸ್ಪತ್ರೆಗೆ ಸಾಗಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

**ಈ ದಿನದ ದರ** ಪೆಟ್ರೋಲ್: 106.21 ₹/L ಡೀಸೆಲ್ : 94.10 ₹/L ಬಂಗಾರ: ₹15,622/Gram24ct ₹14,320/Gram22ct ಬೆಳ್ಳಿ: ₹290.00/Gram

## ಭೇದಭಾವ ಮಾಡದೆ ಮಹಿಳೆಯರಿಗೆ ಸೇವೆ ಮಾಡಿ




• ಉದಯವಾಹಿನಿ, ಕೆ.ಆರ್.ಪುರ

ಸಖಿ ಶಕ್ತಿ ಸಂಘಟನಾ ಟ್ರಸ್ಟ್ ಸೇವಾ ಕಾರ್ಯಗಳು ಬಡ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರು ತಿಳಿಸಿದರು.ಮಹದೇವಪುರ ಕ್ಷೇತ್ರದ ಕಟ್ಟಂನಲ್ಲೂರಿನ ಸಂಭ್ರಮ ಪ್ಯಾಲೇಸ್‌ನಲ್ಲಿ ಸಖಿ ಶಕ್ತಿ ಸಂಘಟನಾ ಟ್ರಸ್ಟ್ ಮೊದಲ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿ ಮತನಾಡಿದ ಅವರು. ಯಾವುದೇ ಭೇದಭಾವ ಮಾಡದೆ ಮಹಿಳೆಯರಿಗೆ ಸೇವೆ ಮಾಡಿ, ಯಾವುದೇ ಮಹಿಳೆ ತೊಂದರೆಯಾಗಲು ನಾವು ಸಹ ಬಿಡುವುದಿಲ್ಲ. ಪಾಸಿಟಿವ್ ಲೈಪ್ ನಿಂದ ಉತ್ತಮ ಸೇವೆ ಸಾಧ್ಯ, ಆರೋಗ್ಯ ಸುಧಾರಣೆಗೆ ಮನೆ ಊಟವನ್ನು ಸೇವಿಸಿ ನಿಮ್ಮೊಂದಿಗೆ ಸದಾ ನಾವು ಇರುತ್ತವೆ ಎಂದರು.

ಟ್ರಸ್ಟ್ ಅಧ್ಯಕ್ಷರಾದ ರುಕ್ಮಿಣಿ ಎಸ್ ವಿ ಮತನಾಡಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕಿ ಮಂಜುಳಾ ಲಿಂಬಾವಳಿ ಅವರ ಮಾರ್ಗದರ್ಶನದಲ್ಲಿ ಜನಸೇವಾ ಕಾರ್ಯಗಳನ್ನು ನಮ್ಮ ಟ್ರಸ್ಟ್ ಪ್ರಾರಂಭಿಸಿದೆ. ಸಾಮಾಜಿಕ ನ್ಯಾಯ, ಕಾನೂನು, ಆರೋಗ್ಯ, ಶಿಕ್ಷಣ ಅರಿವು, ಬಡವರಿಗೆ ಸಹಾಯ ಹಸ್ತ ನೀಡುವ ಕೆಲಸಗಳನ್ನು ಮಾಡಲಾಗುತ್ತಿದೆ ಎಂದು ನುಡಿದರು.

ಇದೇವೇಳೆ ಫಲಾನುಭವಿಗಳಿಗೆ ಲ್ಯಾಪ್ ಟಾಪ್, ಹೊಲಿಗೆ ಯಂತ್ರಗಳನ್ನು ವಿತರಿಸಿ, ಸಾಧಕರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಅಭಿನಂದಿಸಿದರು. ಸಖಿ ಶಕ್ತಿ ಸಂಘಟನಾ ಟ್ರಸ್ಟ್ ಉಪಾಧ್ಯಕ್ಷೆ ಸುಜಾತ ಬಿ. ಎನ್, ಪ್ರಧಾನ ಕಾರ್ಯದರ್ಶಿ ಮಂಜುಳ ಶಿವಕುಮಾರ್, ಕಾರ್ಯದರ್ಶಿ ಸುಗುಣ ಮಂಜುನಾಥ, ಉಸ್ತುವಾರಿ ಅಯ್ಯಪ್ಪನಗರ ಸಂತೋಷ್, ಮುಖಂಡರಾದ ಅಯ್ಯಪ್ಪನಗರ ಕುಬೇರಣ್ಣ, ಅದೂರು ಮುನಿರಾಜು, ಬೊಮ್ಮನಹಳ್ಳಿ ಮುನಿರಾಜು, ಬೈರತಿ ಕುಮಾರ್, ಬೆಳ್ತೂರು ಪುರುಷೋತ್ತಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## 24ರಿಂದ ಜಲಮಂಡಳಿ ಗುತ್ತಿಗೆ ನೌಕರರ ಮುಷ್ಕರ

• ಉದಯವಾಹಿನಿ, ಬೆಂಗಳೂರು

ನೇರವಾಗಿ ವೇತನ ಪಾವತಿ, ಒಂದು ತಿಂಗಳ ಬೋನಸ್ ಸೇರಿ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬೆಂಗಳೂರು ಜಲಮಂಡಳಿಯ ಗುತ್ತಿಗೆ ನೌಕರರು ಮೇ 24ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಷ್ಕರ ಆರಂಭಿಸಲಿದ್ದಾರೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಸಮ್ಮುಖದಲ್ಲಿ ಕಾರ್ಮಿಕ ಇಲಾಖೆ, ಜಲಮಂಡಳಿ ಹಾಗೂ ನೌಕರರ ಸಂಘದವರ ಸಭೆ ನಡೆಸಿದಾಗ ಒಂದು ತಿಂಗಳ ಬೋನಸ್, ಕ್ಯಾಂಟೀನ್ ಸೌಲಭ್ಯವನ್ನು ಎಲ್ಲಾ ಗುತ್ತಿಗೆ ನೌಕರರಿಗೆ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆದರೆ, ಈವರೆಗೂ ಜಾರಿಯಾಗಿಲ್ಲ. ಇದರಿಂದ ಮುಷ್ಕರ ನಡೆಸುವುದು ಅನಿವಾರ್ಯವಾಗಿದೆ ಎಂದು ಜಲಮಂಡಳಿ ಗುತ್ತಿಗೆ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಎಸ್. ಬಾಲನ್ ತಿಳಿಸಿದ್ದಾರೆ.

ಕೆಳ ಹಂತದಲ್ಲಿ ನಾಲ್ಕು ಸಾವಿರ ಮಂದಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದು, ಇವರ ವೇತನವನ್ನು ಏಜೆನ್ಸಿ ಮೂಲಕ ನೀಡಲಾಗುತ್ತಿದೆ. ಮೊದಲು ಶೇ 11ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು. ಈಗ ಶೇ 5ಕ್ಕೆ ಇಳಿಕೆ ಮಾಡಲಾಗಿದೆ. ಇದನ್ನು ಸಂಪೂರ್ಣ ರದ್ದು ಮಾಡಿ ನೇರವಾಗಿ ಜಲಮಂಡಳಿಯಿಂದಲೇ ಪಾವತಿ ಮಾಡಬೇಕು. ಮನೆ ಬಾಡಿಗೆ ಭತ್ಯೆ, ಗ್ರಾಚ್ಯುಟಿ ಸೌಲಭ್ಯ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

## ಬಿಸಿಲಿನ ತಾಪ: ಹಾಲಿನ ಉತ್ಪಾದನೆ ಕುಸಿತ: ರೈತರ ಮೇಲೆ ಹೊರೆ

• ಉದಯವಾಹಿನಿ, ದಾಬಸ್ ಪೇಟೆ

ನೆಲಮಂಗಲ ತಾಲ್ಲೂಕಿನ ಗ್ರಾಮೀಣ ಭಾಗದ ನೂರಾರು ಕುಟುಂಬಗಳ ಜೀವನೋಪಾಯಕ್ಕೆ ಆಧಾರವಾಗಿದ್ದ ಹೈನುಗಾರಿಕೆ ಮೇಲೆ ಮಳೆ ಕೊರತೆ ಹಾಗೂ ಬಿಸಿಲಿನ ಝಳ ಗಂಭೀರ ಪರಿಣಾಮ ಬೀರಿದ್ದು, ರೈತರನ್ನು ಸಂಕಷ್ಟಕ್ಕೆ ದೂಡಿದೆ. ಹಾಲು ಉತ್ಪಾದನೆ ಕುಸಿದಿದೆ. ಈಗ ಬರುತ್ತಿರುವ ಆದಾಯ ರಾಸುಗಳ ನಿರ್ವಹಣೆಯ ಖರ್ಚಿಗೆ ಸಾಕಾಗುತ್ತಿದೆ. ರೈತರ ಮೇಲೆ ಹೊರೆ ಹೆಚ್ಚಾಗುತ್ತಿದೆ. ಬೇಸಿಗೆಯಲ್ಲಿ ನಿತ್ಯ ಹಸುಗಳ ಮೈ ತೊಳೆದು, ಹೊಟ್ಟೆ ತುಂಬ ಮೇವು ಹಾಕಿ ಹೊರಗಿನ ಆಹಾರ ಕೊಟ್ಟರೆ ಉತ್ತಮ ಹಾಲು ಸಿಗುತ್ತದೆ. ಬಿಸಿಲಿನ ತಾಪ, ನೀರಿನ ಕೊರತೆಯಿಂದ ರಾಸುಗಳ ಆರೈಕೆ ಹೇಗೆ ಎಂಬುದೇ ಚಿಂತೆಯಾಗಿದೆ' ಎಂದು ರೈತ ಮಹಿಳೆ ಲೀಲಾ ಬೇಸರ ವ್ಯಕ್ತಪಡಿಸಿದರು.

ಡೇರಿಗೆ ಬರುತ್ತಿರುವ ಹಾಲಿನಲ್ಲಿ ಕೊಬ್ಬಿನ ಅಂಶ ಕಡಿಮೆಯಾಗಿದೆ. ಹಾಲಿನ ಗುಣಮಟ್ಟವು ಕುಸಿದಿದೆ. ರೈತರಿಗೆ ಹಾಗೂ ಸಂಘಕ್ಕೆ ಇದರಿಂದ ಆದಾಯ ಕುಂಠಿತವಾಗುತ್ತಿದೆ ಎಂದು ನಿಜಗಲ್ ಕೆಂಪೋಹಳ್ಳಿ ಡೇರಿ ಕಾರ್ಯನಿರ್ವಾಹಕ ಅಧಿಕಾರಿ ನಟರಾಜ್ ತಿಳಿಸಿದರು. ಮಳೆಗಾಲದಲ್ಲಿ ನಿತ್ಯ ಸುಮಾರು 1.20 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಬೇಸಿಗೆಯಲ್ಲಿ ಅದು 1 ಲಕ್ಷಕ್ಕೆ ಕುಸಿದಿದೆ. ಹಾಲಿನಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗಿದೆ. ಇದು ರೈತರಿಗೆ ಹಾಗೂ ಡೇರಿಗೂ ನಷ್ಟ ಎನ್ನುತ್ತಾರೆ ನೆಲಮಂಗಲ ತಾಲ್ಲೂಕು ಶಿಬಿರದ ಅಧಿಕಾರಿ ಒಬ್ಬರು.

## ನಾಲ್ವರು ವಿದೇಶಿ ಮಹಿಳೆಯರು ಪರಾರಿ

• ಉದಯವಾಹಿನಿ, ಬೆಂಗಳೂರು

ನಗರದ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ನಿರಾಶ್ರಿತರ ಕೇಂದ್ರದಿಂದ ನಾಲ್ವರು ವಿದೇಶಿ ಮಹಿಳೆಯರು ಪರಾರಿಯಾಗಿದ್ದಾರೆ. ಬೆಳಗಿನ ಜಾವ ಈ ಘಟನೆ ನಡೆದಿದ್ದು, ಕಟ್ಟಡದ ಎರಡನೇ ಅಂತಸ್ತಿನ ಕಿಟಕಿಯ ಸರಳು ಮುರಿದು ಉಗಾಂಡದ ಟೋಪಿಸ್ಟಾ, ನಾಗವಾ, ಸಫೈನಾ ಹಾಗೂ ಬುರುಂಡಿಯ ಫಿಟಿನಾ ಎಂಬುವರು ಪಾರಾರಿಯಾಗಿದ್ದಾರೆ.

ಈ ಸಂಬಂಧ ಕೇಂದ್ರದ ವ್ಯವಸ್ಥಾಪಕ ಎನ್. ಶ್ರೀನಿವಾಸ್ ಎಂಬವರು ದೂರು ನೀಡಿದ್ದು, ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಮಾದಕ ವಸ್ತು ಮಾರಾಟ ಹಾಗೂ ಅಕ್ರಮ ವಾಸ ಆರೋಪದ ಮೇರೆಗೆ ಸ್ಥಳೀಯ ಪೊಲೀಸರು ಆರೋಪಿಗಳನ್ನು ಬಂಧಿಸಿ, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ ಅಧಿಕಾರಿಗಳ ಸೂಚನೆ ಮೇರೆಗೆ ದೊಡ್ಡಗುಬ್ಬಿಯಲ್ಲಿರುವ ನಿರಾಶ್ರಿತರ ಕೇಂದ್ರದಲ್ಲಿ ಇರಿಸಲಾಗಿತ್ತು.

ಆರೋಪಿಗಳ ಪೈಕಿ ಟೋಪಿಸ್ಟಾ ಮತ್ತು ನಾಗವಾ ಅವರನ್ನು ಹೆಣ್ಣೂರು ಠಾಣೆ ಮತ್ತು ಸಫೈನಾ ಎಂಬಾಕೆಯನ್ನು ಪರಪ್ಪನ ಅಗ್ರಹಾರ ಠಾಣೆ ಹಾಗೂ ಫಿಟಿನಾ ಎಂಬಾಕೆಯನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಿಟ್ಟು ಹೋಗಿದ್ದರು. ಆದರೆ, ಆರೋಪಿಗಳು ಮುಂಜಾನೆ 3ರಿಂದ 6 ಗಂಟೆ ಅವಧಿಯಲ್ಲಿ ಕಟ್ಟಡದ 2ನೇ ಮಹಡಿಯಲ್ಲಿರುವ ಕೋಣೆಯ ಕಿಟಕಿಯ ಗ್ರಿಲ್ ಮುರಿದು ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ.

ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ. ಜತೆಗೆ ಆರೋಪಿಗಳನ್ನು ಬಂಧಿಸಿ, ಕರೆ ತಂದಿದ್ದ ಸಂಬಂಧಿಸಿದ ಪೊಲೀಸ್ ಠಾಣೆ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು. ಈ ಸಂಬಂಧ ಕೊತ್ತನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಸಿದ್ದು ಸರ್ಕಾರಕ್ಕೆ 3 ವರ್ಷ: ಸಾಧನೆಗಳೇನು, ವೈಫಲ್ಯಗಳೇನು? ಇನ್ನೆರಡು ವರ್ಷ ಮಾಡಬೇಕಾಗಿದ್ದೇನು

# ಸಾಧನಾ ಸಮಾವೇಶ ನಡೆಸುವಷ್ಟು ಸಾಧನೆಗಳನ್ನು ಸರ್ಕಾರ ಮಾಡಿದ್ಯಾ?

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಮೇ 20ಕ್ಕೆ 3 ವರ್ಷಗಳನ್ನು ಪೂರೈಸಲಿದೆ. ಭರ್ಜರಿ ಬಹುಮತದೊಂದಿದೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ಮೇಲೆ ನಿರೀಕ್ಷೆಗಳು ಬೆಟ್ಟದಷ್ಟಿದ್ದವು. ಅದರೆ, ಸರ್ಕಾರ 3 ವರ್ಷ ಪೂರೈಸಿದರೂ ನಿರೀಕ್ಷಿತ ಸಾಧನೆ ಮಾಡಿಲ್ಲ ಎಂಬ ಅಭಿಪ್ರಾಯವೂ ಇದೆ. ರಾಜ್ಯ ಸರ್ಕಾರ ತನ್ನ ಮೂರು ವರ್ಷದ ಆಡಳಿತವನ್ನು 'ಸಾರ್ಥಕ ಪಯಣ' ಎಂದು ಬಣ್ಣಿಸುತ್ತಿದೆ. ಆದರೆ, ವಾಸ್ತವದಲ್ಲಿ ಸಿದ್ದರಾಮಯ್ಯ ಸರ್ಕಾರದ ಸಾಧನೆಗಳು ಗಮನ ಸೆಳೆಯುವಂತದ್ದೇ? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಹಾಗಾದರೆ ರಾಜ್ಯ ಸರ್ಕಾರದ ಮೂರು ವರ್ಷಗಳ ಸಾಧನೆಗಳೇನು? ವೈಫಲ್ಯಗಳೇನು? ಇಲ್ಲಿದೆ ವರದಿ.


### ಸಿದ್ದರಾಮಯ್ಯ ಸರ್ಕಾರದ ಪ್ರಮುಖ ಸಾಧನೆಗಳು

**1 - ಪಂಚ ಗ್ಯಾರಂಟಿಗಳ ಅನುಷ್ಠಾನ, 6 ನೇ ಗ್ಯಾರಂಟಿ ಸೇರ್ಪಡೆ:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪ್ರಮುಖ ಸಾಧನೆಗಳಲ್ಲಿ ಪಂಚ ಗ್ಯಾರಂಟಿಗಳ ಅನುಷ್ಠಾನ ಒಂದಾಗಿದೆ. ಇದೀಗ ಭೂ ಗ್ಯಾರಂಟಿ ಎಂದು ಮತ್ತೊಂದು ಗ್ಯಾರಂಟಿ ಯೋಜನೆಯನ್ನು ಅದಕ್ಕೆ ಸೇರ್ಪಡೆ ಮಾಡಲಾಗಿದೆ. ಸರ್ಕಾರಕ್ಕೆ ಪಂಚ ಗ್ಯಾರಂಟಿಗಳಿಂದ ಆರ್ಥಿಕವಾಗಿ ಹಿನ್ನಡೆ ಉಂಟಾಗಿದ್ದರೂ ಈ ಯೋಜನೆಯನ್ನು ರದ್ದು ಮಾಡುವ ಸಾಧ್ಯತೆ ಇಲ್ಲ.ಇದೀಗ ಬೇರೆ ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಯನ್ನು ಅನುಕರಣೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಗ್ಯಾರಂಟಿ ಬಲ ಸಿಕ್ಕಂತಾಗಿದೆ. ಗೃಹ ಲಕ್ಷ್ಮೀ, ಅನ್ನಭಾಗ್ಯ, ಗೃಹ ಜ್ಯೋತಿ, ಯುವನಿಧಿ, ಶಕ್ತಿ ಯೋಜನಗಳಿಂದಾಗಿ ಗ್ರಾಮೀಣ ಭಾಗದಲ್ಲಿ ಜನರಿಗೆ ಅನುಕೂಲ ಉಂಟಾಗಿದೆ. ಬೆಂಗಳೂರಿನ ಜನರಿಗೆ ಖಾತಾ ಗೊಂದಲದಿಂದ ಬಿಡುಗಡೆ ನೀಡುವ ನಿಟ್ಟಿನಲ್ಲಿ ಇದೀಗ ಆರನೇ ಗ್ಯಾರಂಟಿ ಘೋಷಣೆ ಮಾಡಲಾಗಿದೆ.

**2 - ಬ್ರ್ಯಾಂಡ್ ಬೆಂಗಳೂರು, ನಮ್ಮ ಮೆಟ್ರೋ ವಿಸ್ತರಣೆ:** ಬೆಂಗಳೂರು ಬ್ರ್ಯಾಂಡ್ ಹೆಸರಿನಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಚಾಲನೆ ನೀಡಲು ಕೆಲವೊಂದು ಪ್ರಯತ್ನಗಳು ನಡೆದಿವೆ. ಅಲ್ಲದೆ, ರಾಜ್ಯ ರಾಜಧಾನಿಯ ಸಂಚಾರ ದಟ್ಟಣೆ ನಿಯಂತ್ರಿಸಲು ಪ್ರಯತ್ನ ನಡೆಸಲಾಗಿದೆ. ಆದರೆ ಇದರಲ್ಲಿ ಯಶಸ್ವಿ ಆಗಿಲ್ಲ ಎಂಬುವುದು ಗಮನಾರ್ಹವಾಗಿದೆ. ಇದರ ಜೊತೆಗೆ ರಸ್ತೆ ಗುಂಡಿಗಳಿಗೆ ಮುಕ್ತಿ ಕೊಡಿಸುವ ಪ್ರಯತ್ನ ಮಾಡಲಾಗಿದೆ. ಟ್ರಾಫಿಕ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ.ಬೆಂಗಳೂರು ಮೆಟ್ರೋದ 2ನೇ ಮತ್ತು 3ನೇ ಹಂತದ ಕಾಮಗಾರಿಗಳನ್ನು ವೇಗಗೊಳಿಸಿ, ಹೊಸ ಮಾರ್ಗಗಳನ್ನು ಸಾರ್ವಜನಿಕ ಮುಕ್ತಗೊಳಿಸಲಾಗಿದೆ.ಇಷ್ಟೇ ಅಲ್ಲದೆ, ಫ್ಲೈಓವರ್ ಮತ್ತು ವೈಟ್ ಟಾಪಿಂಗ್ ಕೆಲಸ ಕಾರ್ಯಗಳು ನಡೆದಿವೆ. ಸಿಗ್ನಲ್ ಮುಕ್ತ ಸಂಚಾರಕ್ಕೆ ಹೊಸ ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ ಎಂಬುವುದು ಗಮನಾರ್ಹ.

**3 - ಕರ್ನಾಟಕಕ್ಕೆ ಹರಿದು ಬಂದ ಹೂಡಿಕೆ:** ವಿದೇಶಿ ಹೂಡಿಕೆಯಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ 2 ಆಗಿದೆ. ವಿದ್ಯುತ್, ಸಾರಿಕೆ, ಅಗತ್ಯ ಮೂಲಸೌಕರ್ಯ ಒದಗಿಸುವ ಜೊತೆಗೆ ಉದ್ಯಮ ಸ್ಥಾಪನೆಗೆ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಪೂರಕ ವಾತಾವರಣ ನಿರ್ಮಾಣ ಮಾಡಿದೆ ಎಂದು ಸಿಎಂ ಸಿದ್ದರಾಮಯ್ಯ ಆದಿಯಾಗಿ ಸಚಿವರು ಹೇಳಿಕೆ ನೀಡುತ್ತಾ ಬಂದಿದ್ದಾರೆ.ರಾಜ್ಯದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಜೊತೆಗೆ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲಾಗಿದೆ ಎಂಬುವುದು ಸರ್ಕಾರದ ವಾದವಾಗಿದೆ. ವಿದೇಶಿ ಹೂಡಿಕೆಯಲ್ಲಿ ಕರ್ನಾಟಕ 50,107 ಕೋಟಿ ಬಂಡವಾಳವನ್ನು ಆಕರ್ಷಿಸಿದೆ.

### ವೈಫಲ್ಯಗಳ ಪಟ್ಟಿಗಳೇನು?



**1 - ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಹಿನ್ನಡೆ:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಬಿಟ್ಟು ಉಳಿದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಒತ್ತು ನೀಡುತ್ತಿಲ್ಲ ಎಂಬುವುದು ಆರೋಪವಾಗಿದೆ. ಬೆಂಗಳೂರಿನಲ್ಲಿ ಮೂಲಸೌಕರ್ಯಕ್ಕೆ ಒಂದಿಷ್ಟು ಆದ್ಯತೆ ನೀಡಿದರೂ, ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಹಿನ್ನಡೆ ಉಂಟಾಗಿದೆ. ಶಾಸಕರು ಅನುದಾನ ಸಿಗುತ್ತಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ.

ವಿರೋಧ ಪಕ್ಷಗಳು ಮಾತ್ರವಲ್ಲ, ಆಡಳಿತ ಪಕ್ಷದ ಶಾಸಕರಿಗೂ ನಿರೀಕ್ಷಿತ ಅನುದಾನ ಸಿಗುತ್ತಿಲ್ಲ. ಇವೆಲ್ಲವೂ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ತೊಂದರೆ ಉಂಟು ಮಾಡಿದೆ. ರಾಜ್ಯ ಸರ್ಕಾರ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ. ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬ ಆರೋಪ ಮಾಡಲಾಗುತ್ತಿದೆ.

**2 - ಸರ್ಕಾರಿ ಹುದ್ದೆಗಳ ನೇಮಕಾತಿ ವಿಳಂಬ:** ರಾಜ್ಯದಲ್ಲಿ 2,84,881 ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಆಗಿಲ್ಲ. ಪಶುಸಂಗೋಪನೆ ಇಲಾಖೆಯಲ್ಲಿ 11,020,ಕಂದಾಯ ಇಲಾಖೆಯಲ್ಲಿ 10,867, ಕೃಷಿ ಇಲಾಖೆಯಲ್ಲಿ 6,876, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 8,525, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ 6,190, ಆರ್ಥಿಕ ಇಲಾಖೆಯಲ್ಲಿ 7,668,ಆಹಾರ , ನಾಗರೀಕ ಪೂರೈಕೆ ಇಲಾಖೆಯಲ್ಲಿ 1,442, ಮೀನುಗಾರಿಕೆ ಇಲಾಖೆಯಲ್ಲಿ 838, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 37,572 ಸೇರಿದಂತೆ ಪ್ರತಿ ಇಲಾಖೆಯಲ್ಲೂ ನೇಮಕಾತಿ ಬಾಕಿ ಇದೆ. ಧಾರವಾಡದಲ್ಲಿ ನಡೆದ ಹೋರಾಟದ ಹಿನ್ನೆಲೆಯಲ್ಲಿ ಸುಮಾರು 56,000 ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ಮಾಡಿದೆ. ಆದರೆ ಈ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

**3: ಜಾತಿ ಗಣತಿ ಜಾರಿಗೆ ಹಿಂದೇಟು:** ರಾಜ್ಯದಲ್ಲಿ ಜಾತಿ ಗಣತಿಗೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಕೊಟ್ಟ ಭರವಸೆಯನ್ನು ಈಡೇರಿಸುತ್ತಿಲ್ಲ. ಜಾತಿ ಗಣತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ವರದಿಯನ್ನು ಸ್ವೀಕಾರ ಮಾಡಲಾಗಿದೆಯಾದರೂ ಅದನ್ನು ಜಾರಿಗೆ ತರಲು ಹಿಂದೇಟು ಹಾಕಲಾಗುತ್ತಿದೆ. ಜಾತಿ ಗಣತಿ ವರದಿ ಜಾರಿಗೊಳ್ಳದೆ ಇರುವುದರಿಂದ ಹಿಂದುಳಿಗ ವರ್ಗಗಳಿಗೆ ಹಿನ್ನಡೆ ಉಂಟಾಗಿದೆ. ರಾಜಕೀಯ ಒತ್ತಡ ಹಾಗೂ ಪ್ರಬಲ ಜಾತಿಗಳ ಒತ್ತಡದ ಪರಿಣಾಮವಾಗಿ ಸಿದ್ದರಾಮಯ್ಯ ಸರ್ಕಾರ ಜಾತಿಗಣತಿ ವರದಿಯನ್ನು ಜಾರಿಗೊಳಿಸಲು ಹಿಂದೇಟು ಹಾಕುತ್ತಿದೆ. ಈ ಮೂಲಕ ಕೊಟ್ಟ ಭರವಸೆಯನ್ನು ಈಡೇರಿಸುತ್ತಿಲ್ಲ ಎಂಬ ಆರೋಪವೂ ಇದೆ.

**4 - ಕೆಲವು ಸಚಿವರು ನಿಷ್ಕ್ರೀಯತೆ:** ಸಿದ್ದರಾಮಯ್ಯ ಸರ್ಕಾರದ ಸಚಿವರ ಕಾರ್ಯವೈಖರಿಯ ಬಗ್ಗೆ ವ್ಯಾಪಕ ಅಸಮಾಧಾನವೂ ಇದೆ. ಕೆಲವು ಸಚಿವರು ಸಂಪೂರ್ಣ ನಿಷ್ಕ್ರಿಯರಾಗಿದ್ದಾರೆ ಎಂಬ ಆರೋಪ ಇದೆ. ಶಾಸಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂಬ ಆರೋಪವನ್ನು ಸ್ವತಃ ಸಚಿವರು ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆಯಲ್ಲೂ ಈ ಬಗ್ಗೆ ಚರ್ಚೆ ಆಗಿದೆ. ಸಂಪುಟ ಪುನಾರಚನೆ ಬಗ್ಗೆ ಮಾತುಗಳು ಕೇಳಿಬರುತ್ತಿದ್ದರೂ ಅದು ಚಾಲ್ತಿಗೆ ಬರುತ್ತಿಲ್ಲ. ಇದು ಸರ್ಕಾರದ ಬಗ್ಗೆ ಜನಾಭಿಪ್ರಾಯ ರೂಪಿತಗೊಳ್ಳಲು ಒಂದು ಕಾರಣವಾಗುತ್ತಿದೆ.

**ಕಾನೂನು ಸುವ್ಯವಸ್ಥೆ ತಕ್ಕ ಮಟ್ಟಿಗೆ ನಿಯಂತ್ರಣ**

**ರಾಜ್ಯದಲ್ಲಿ ಕಾನೂನು ಸುವ್ಯಸ್ಥೆಗೆ ಸಂಬಂಧಿಸಿದಂತೆ ತಕ್ಕಮಟ್ಟಿನಲ್ಲಿ ನಿಯಂತ್ರಣ ಹೇರಲಾಗಿದೆ. ಕರಾವಳಿ ಭಾಗದಲ್ಲಿ ಕೋಮು ಸಂಘರ್ಷಕ್ಕೆ ಕೊಂಚ ತಡೆ ಬಿದ್ದಿದೆ. ಜಿಲ್ಲೆಗೆ ಖಡಕ್ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿ ಕಾನೂನು ಸುವ್ಯವಸ್ಥೆ ಬಲಪಡಿಸಲಾಗಿದೆ. ರಾಜ್ಯದ ಬಾಗಲಕೋಟೆ, ಮಂಡ್ಯ ಜಿಲ್ಲೆಯಲ್ಲಿ ಕೆಲವೊಂದು ಪ್ರಕರಣಗಳು ನಡೆದಿದ್ದರೂ ಅದನ್ನು ನಿಯಂತ್ರಣಕ್ಕೆ ತರಲಾಗಿದೆ. ಕಳೆದ ಅವಧಿಗೆ ಹೋಲಿಕೆ ಮಾಡಿದರೆ ಅಂಕಿ- ಅಂಶಗಳಲ್ಲಿ ಕೊಂಚ ಬದಲಾವಣೆ ಕಾಣಿಸುತ್ತಿದೆ. ಕೊಲೆ, ಸುಲಿಗೆ, ಅತ್ಯಾಚಾರ ಪ್ರಕರಣಗಳಲ್ಲಿ ಗಮನಿಸಿದಾಗ ಇದು ಸ್ಪಷ್ಟಗೊಳ್ಳುತ್ತದೆ.**

**ನಾಯಕತ್ವ ಗೊಂದಲ**

**ಇದರ ಜೊತೆಗೆ ನಾಯಕತ್ವ ಬದಲಾವಣೆ ಗೊಂದಲವೂ ಸರ್ಕಾರಕ್ಕೆ ಹಿನ್ನಡೆ ಉಂಟು ಮಾಡಿದೆ. ಸಿಎಂ ಸ್ಥಾನ ಬದಲಾವಣೆ ಆಗಲಿದೆ ಎಂದು ಹೇಳಲಾಗುತ್ತಿದೆ. ಆದರೆ ಒಂದು ಬಣ ಇದಕ್ಕೆ ಅಸಮ್ಮತಿ ಸೂಚಿಸುತ್ತಾ ಬರುತ್ತಿದೆ. ಹೀಗಾಗಿ ಗೊಂದಲ ಮುಂದುವರಿದಿದೆ. ನಾಯಕತ್ವ ಗೊಂದಲದಿಂದ ಅಧಿಕಾರಿ ವರ್ಗ ಇಷ್ಟ ಬಂದಂತೆ ನಡೆದುಕೊಳ್ಳುತ್ತಿದೆ ಎಂಬ ಮಾತಿದೆ. ಹೀಗಾಗಿ ಹೈಕಮಾಂಡ್ ಸಮಸ್ಯೆ ಬಗೆಹರಿಸುವವರೆಗೂ ಇದು ಸರ್ಕಾರಕ್ಕೆ ಡ್ಯಾಮೇಜ್ ಮಾಡುತ್ತಾ ಬರಲಿದೆ ಎಂಬುವುದು ಸ್ಪಷ್ಟ.**

## ವಿಜಯೇಂದ್ರ ಮೆಟ್ರೋ ಹತ್ತಲು ಯಾರು ಕಾರಣ..?

• ಉದಯವಾಹಿನಿ, ಬೆಂಗಳೂರು



ವಿಜಯೇಂದ್ರ ಮೆಟ್ರೋ ಹತ್ತಿರುವ ಬಗ್ಗೆ ಮಾಧ್ಯಮಗಳು ಪದೇ ಪದೇ ಸುದ್ದಿ ಬಿತ್ತರಿಸುತ್ತಿವೆ. ಆದರೆ, ಈ ಪರಿಸ್ಥಿತಿಗೆ ಯಾರು ಕಾರಣ ಎಂದು ಯಾಕೆ ಕೇಳುತ್ತಿಲ್ಲ? ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು. ಮಾಡಬೂಳ ಗ್ರಾಮದ ಬಳಿ ನಿರ್ಮಾಣವಾಗಿರುವ ನೂತನ ಮೃಗಾಲಯ ಉದ್ಘಾಟನೆ ನೆರವೇರಿಸಿದ ನಂತರದ ಮಾಧ್ಯಮದ ಪ್ರತಿನಿಧಿಗಳೊಂದಿಗೆ ಅವರು ಮಾತನಾಡುತ್ತಿದ್ದರು.

ಮೋದಿ ವಿದೇಶದಿಂದ ತಂದ ಪ್ರಾಣಿಗಳು ಸತ್ತು ಹೋದವು. ಈಗ ನಾವು ತರುವ ಪ್ರಾಣಿಗಳನ್ನು ಸರಿಯಾಗಿ ನಿರ್ವಹಣೆ ಮಾಡಿ ಸಂರಕ್ಷಿಸಲಾಗುವುದು ಎಂದು ಪ್ರಿಯಾಂಕ್ ಹೇಳಿದರು. ದೇಶ ಕಷ್ಟದ ಸ್ಥಿತಿಯಲ್ಲಿದ್ದಾಗ ಮೋದಿ ವಿದೇಶಕ್ಕೆ ಹೋಗುತ್ತಾರೆ. ಆರ್ಥಿಕ ಸ್ಥಿತಿಗತಿ, ಪೆಟ್ರೋಲಿಯಂ ಬೆಲೆ ಏರಿಕೆ ಬಗ್ಗೆ ಸಂಸತ್ತಿನಲ್ಲೇ ಹೇಳಬೇಕಿತ್ತು. ನೆದರ್ ಲ್ಯಾಂಡ್ಸ್‌ಗೆ ಯಾಕೆ ಹೋಗಬೇಕಿತ್ತು ಎಂದು ಖರ್ಗೆ ಕುಟುಕಿದರು. ಬೆಲೆ ಏರಿಕೆ ವಿಷಯ ಮರೆಮಾಚಲು ಮೋದಿ ಚಿನ್ನ ಖರೀದಿ ಮಾಡಬೇಡಿ ಎಂದು ಜನರಿಗೆ ಕರೆ ಕೊಡುತ್ತಾರೆ. ನೀಟ್ ಅಕ್ರಮ ಬಗ್ಗೆ ಮೋದಿ ಯಾಕೆ ಮಾತನಾಡುವುದಿಲ್ಲ ರೂ. 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ಇದಕ್ಕೆ ಯಾರು ಕಾರಣ? ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನ ಇನ್ನೂ ಸಚಿವರಾಗಿ ಮುಂದುವರೆಸಿದ್ದಾರೆ ಯಾಕೆ? ಎಂದು ಎಂದು ಜೊತೆ ಅಲ್ಲಿದ್ದ ಅರಣ್ಯ ಸಚಿವರು ಪ್ರಶ್ನಿಸಿದರು.

## ಸಾರಿಗೆ ನೌಕರರಿಗೆ ಸರ್ಕಾರದಿಂದ 'ನೋ ವರ್ಕ್ ನೋ ಪೇ' ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು



ತಮ್ಮ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಸಾರಿಗೆ ಇಲಾಖೆಯ ನಾಲ್ಕು ನಿಗಮಗಳ ನೌಕರರು ಬುಧವಾರದಿಂದ ಅನಿರ್ಧಿಷ್ಟಾವಧಿಗೆ ನಡೆಸಲು ಉದ್ದೇಶಿಸಿದ್ದ ಮುಷ್ಕರಕ್ಕೆ ರಾಜ್ಯಸರ್ಕಾರ ತಣ್ಣೀರೆರಚಿದೆ. ಒಂದು ವೇಳೆ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ನೌಕರರು ಮುಷ್ಕರದಲ್ಲಿ ಭಾಗಿಯಾದರೆ ನೋ ವರ್ಕ್ ನೋ ಪೇ, ಅಂತವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕಾಗುತ್ತದೆ ಎಂದು ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂಪಾಷ ಎಚ್ಚರಿಕೆ ನೀಡಿದ್ದಾರೆ.


ಅಲ್ಲದೆ ಅಂದು ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವುದು ಇಲ್ಲವೇ ಮುಷ್ಕರದಲ್ಲಿ ಪಾಲ್ಗೊಂಡರೆ ಕೆಲಸ ಮಾಡದಿದ್ದಾಗ ವೇತನವಿಲ್ಲ ಎಂಬ ನಿಯಮವನ್ನು ಜಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಸಂಬಂಧ ಸಾರಿಗೆ ಇಲಾಖೆಯ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕಾರ್ಯ ವ್ಯವಸ್ಥಾಪಕರು ಸೇರಿದಂತೆ ಮತ್ತಿತರ ಅಧಿಕಾರಿಗಳಿಗೆ ಪತ್ರ ಬರೆದಿದ್ದು, ನೌಕರರಿಗೆ ರಜೆ ಮಂಜೂರು ಮಾಡದಂತೆ ಸೂಚನೆ ಕೊಟ್ಟಿದ್ದಾರೆ. ಸಾರಿಗೆ ಇಲಾಖೆಯು ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ (ಎಸಾ) 2013ರಡಿ ವ್ಯಾಪ್ತಿಗೆ ಬರಲಿದೆ ಜೊತೆಗೆ ಸಾರಿಗೆ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ. ಅಲ್ಲದೆ ಸಂಘ ಸಂಸ್ಥೆ ವ್ಯಕ್ತಿಗಳ ಜೊತೆ ಗುರುತಿಸಿಕೊಂಡು ಪ್ರಚೋದಿಸುವುದು ಇಲ್ಲವೇ ಮುಷ್ಕರಕ್ಕೆ ಬೆಂಬಲವನ್ನು ವ್ಯಕ್ತಪಡಿಸುವಂತಿಲ್ಲ ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಇದೊಂದು ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆ ಆಗಿರುವುದರಿಂದ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯವರು ಆಡಳಿತ ವರ್ಗಕ್ಕೆ ನೀಡಿರುವ ಮುಷ್ಕರದ ನೋಟೀಸ್ ಕಾರ್ಮಿಕ ಆಯುಕ್ತರ ಮುಂದೆ ರಾಜಿ ಸಂಧಾನದಲ್ಲಿದೆ.

ಕೈಗಾರಿಕಾ ವಿವಾದಗಳ ಕಾಯ್ದೆ 1947 ಮತ್ತು ನಿಯಮಗಳನ್ವಯ ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆಯ ನೌಕರರ ನೋಟೀಸ್ ರಾಜಿ ಸಂಧಾನದಲ್ಲಿರುವಾಗ ಮುಷ್ಕರ ಮಾಡಬಾರದು ಎಂದು ಎಚ್ಚರಿಕೆ ಕೊಡಲಾಗಿದೆ. . ಗೈರು ಹಾಜರಾದ ನೌಕರರ ವೇತನವನ್ನು ಕಡಿತಗೊಳಿಸಲಾಗುವುದು. ಸರ್ಕಾರದ ನಿಯಮಗಳನ್ನು ಪಾಲನೆ ಮಾಡಿ ನೌಕರರು ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿ ಸಾರ್ವಜನಿಕರ ಸೇವೆಯಲ್ಲಿ ತೊಡಗಬೇಕೆಂದು ಸುತ್ತೋಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ನಿರ್ದೇಶನ ನೀಡಿದ್ದಾರೆ.

# ಠಾಣೆಯಲ್ಲಿನ ದೌರ್ಜನ್ಯ ತಡೆಗೆ ಕಟ್ಟುನಿಟ್ಟಿನ ಆದೇಶ

• ಉದಯವಾಹಿನಿ, ಬೆಂಗಳೂರು



ಪೊಲೀಸ್ ವಶದಲ್ಲಿದ್ದಾಗ ಸಂಭವಿಸುವ ಸಾವುಗಳ ವಿಚಾರಣೆ ಹಾಗೂ ಅದಕ್ಕೆ ಸಂಬಂಧಿಸಿದಂತಹ ಪ್ರಕ್ರಿಯೆಗಳ ಕುರಿತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಪ್ರಮಾಣಿತ ಕಾರ್ಯವಿಧಾನ ಸ್ಥಾಯಿ ಆದೇಶ ಹೊರಡಿಸಿದ್ದಾರೆ. ಬಂಧನದಲ್ಲಿನ ಹಿಂಸೆ ಹಾಗೂ ಬಂಧನದಲ್ಲಿನ ಸಾವು ಸೇರಿದಂತೆ ಪ್ರತ್ಯೇಕ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳು ಮತ್ತು ಸಿಐಡಿ ತನಿಖಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗ ಸೂಚಿಗಳನ್ನು ಎಲ್ಲಾ ಪೊಲೀಸ್ ಆಯುಕ್ತರಿಗೆ, ವಿಭಾಗವಾರು ಐಜಿಗಳು, ಡಿಐಜಿಗಳು ಹಾಗೂ ಎಸ್ಪಿಗಳಿಗೆ ರವಾನಿಸಲಾಗಿದೆ.

ಬಂಧನದಲ್ಲಿನ ಹಿಂಸೆ ಅಥವಾ ಸಾವಿನ ಪ್ರಕರಣಗಳಲ್ಲಿ ಏಕರೂಪವಾದ ತನಿಖಾ ವಿಧಾನ ಅನುಸರಿಸುತ್ತಿಲ್ಲ. ಎಫ್‌ಐಆರ್ ದಾಖಲಿಸಲು ವಿಳಂಬವಾಗುತ್ತಿದೆ. ಪ್ರಮುಖ ಭೌತಿಕ ಹಾಗೂ ಡಿಜಿಟಲ್ ಸಾಕ್ಷ್ಯ ಸಂಗ್ರಹಣೆಯಲ್ಲಿ ಲೋಪಗಳು ಕಂಡು ಬರುತ್ತಿವೆ ಎಂದು ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಮ್ ತಿಳಿಸಿದ್ದಾರೆ.

ಸಿಐಡಿ ಅಧಿಕಾರಿಗಳು ತನಿಖೆ ವಹಿಸಿಕೊಳ್ಳುವ ವೇಳೆಗೆ ತಾಂತ್ರಿಕ ಲೋಪಗಳು ಉಂಟಾಗಿ ಪ್ರಮುಖ ಸಾಕ್ಷ್ಯಗಳು ಹಾಳಾಗುವ ಸಾಧ್ಯತೆ ಇದೆ. ಇದು ತನಿಖೆಯ ಗುಣಮಟ್ಟ ಹಾಗೂ ನ್ಯಾಯಾಂಗ ಪ್ರಕ್ರಿಯೆಗೆ ಹಾನಿಯುಂಟು ಮಾಡಲಿದೆ. ಇನ್ನು ಮುಂದೆ ಎಲ್ಲಾ ಪೊಲೀಸ್ ಅಧಿಕಾರಿಗಳು ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ)ಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಿದ್ದಾರೆ. ಘಟನೆ ನಡೆದ ತಕ್ಷಣವೇ ಠಾಣಾಧಿಕಾರಿ ಪೀಡಿತನ, ಪೀಡಿತ ವ್ಯಕ್ತಿಯ ಬಂಧುಗಳು ಅಥವಾ ಇತರೆ ವ್ಯಕ್ತಿಗಳ ದೂರಿನ ಆಧಾರದ ಮೇಲೆ ಅಥವಾ ಸ್ವಯಂ ಪ್ರೇರಿತವಾಗಿ ವಿಳಂಬವಿಲ್ಲದಂತೆ ಪ್ರಕರಣ ದಾಖಲಿಸಬೇಕು. ತಕ್ಷಣವೇ ಎಫ್‌ಐಆರ್ ಪ್ರತಿಯೊಂದಿಗೆ ತುರ್ತು ವರದಿಯನ್ನು ಘಟಕದ ಮುಖ್ಯಸ್ಥರಿಗೆ ಹಾಗೂ ಮುಖ್ಯ ಕಚೇರಿಗೆ ಸರಿಯಾದ ಮಾರ್ಗದಲ್ಲಿ ಕಳುಹಿಸಬೇಕು ಎಂದು ಸೂಚಿಸಲಾಗಿದೆ. ಸಿಐಡಿ ಹಸ್ತಾಂತರಿಸುವವರೆಗೂ ಘಟಕದ ಹಿರಿಯ ಅಧಿಕಾರಿಯಿಂದ ನಿಷ್ಪಕ್ಷಪಾತ ತನಿಖೆ ನಡೆಯುವಂತೆ ನೋಡಿಕೊಳ್ಳಬೇಕು. ಭಾರತೀಯ ನಾಗರಿಕಾ ಸುರಕ್ಷಾ ಸಂಹಿತೆ ಪ್ರಕಾರ ಡಿವೈಎಸ್ಪಿ ಅಥವಾ ಅದಕ್ಕಿಂತ ಮೇಲಿನ ಹುದ್ದೆಯ ಅಧಿಕಾರಿಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಬೇಕೆಂದು ಸೂಚಿಸಲಾಗಿದೆ.

ಬಂಧನದಲ್ಲಿನ ಹಿಂಸೆ ಪ್ರಕರಣದಲ್ಲಿ ಸ್ಥಳೀಯ ಅಧಿಕಾರಿಗಳು ತಕ್ಷಣವೇ ಸ್ಥಳ ಮಹಜರು ನಡೆಸಬೇಕು. ಭೌತಿಕ ಹಾಗೂ ಪರಿಸ್ಥಿತಿ ಜನ್ಯ ಸಾಕ್ಷ್ಯಗಳನ್ನು ಆಡಿಯೋ, ವಿಡಿಯೋ ಮಾದರಿಯಲ್ಲಿ ಸಂಗ್ರಹಿಸಬೇಕು. ಠಾಣೆಯ ಸಿಸಿಟಿವಿ ದೃಶ್ಯಾವಳಿಗಳನ್ನು ಕಾನೂನು ಬದ್ಧವಾಗಿ ವಶಪಡಿಸಿಕೊಳ್ಳಬೇಕು. ಪೀಡಿತರ ಹೇಳಿಕೆಯನ್ನು ದಾಖಲಿಸಬೇಕು ಮತ್ತು ವೈದ್ಯಕೀಯ ಪರೀಕ್ಷಾ ವರದಿಗಳನ್ನು ಸಂಗ್ರಹಿಸಬೇಕು. ಸಿಐಡಿ ತನಿಖೆ ಆರಂಭಿಸುವವರೆಗೂ ತನಿಖೆ ಮುಂದು ವರಿಸಬೇಕೆಂದು ಸೂಚಿಸಲಾಗಿದೆ.

## ರಾಜಧಾನಿಯೊಳಗೆ ಬಾರದು ಬೆಂಗಳೂರು-ಮುಂಬೈ ರೈಲು

• ಉದಯವಾಹಿನಿ, ಬೆಂಗಳೂರು



ಹಲವು ವರ್ಷಗಳ ಬೇಡಿಕೆಯಾಗಿದ್ದ ಬೆಂಗಳೂರು-ಮುಂಬೈ ಎಕ್ಸ್‌ಪ್ರೆಸ್ ರೈಲು ಆರಂಭಗೊಳ್ಳುತ್ತಿದೆ. ಈ ರೈಲು ಪ್ರಯಾಣಕ್ಕೆ 24 ತಾಸು ತೆಗೆದುಕೊಳ್ಳುತ್ತಿರುವುದು ಮತ್ತು ಬೆಂಗಳೂರು ನಗರದ ಒಳಗೆ ಬಾರದೇ ಇರುವುದರಿಂದ ನಗರದ ಜನರಿಗೆ ಹೆಚ್ಚು ಪ್ರಯೋಜನವಾಗದು ಎಂದು ರೈಲ್ವೆ ಯಾತ್ರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈಯ ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವೆ ವಾರಕ್ಕೆರಡು ದಿನ ಹೊಸ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸುವ, ಬೆಂಗಳೂರು, ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಮಹಾರಾಷ್ಟ್ರದ ಪುಣೆ, ಮುಂಬೈ ನಗರಗಳ ನಡುವೆ ಸಂಪರ್ಕವನ್ನು ಸುಧಾರಿಸುವ ಈ ರೈಲಿಗೆ ಚಾಲನೆ ದೊರೆತಿದೆ. ನಿಯಮಿತ ರೈಲುಗಳು ಮೇ 23ಕ್ಕೆ ಎಸ್‌ಎಂವಿಟಿಯಿಂದ, ಮೇ 24ಕ್ಕೆ ಎಲ್‌ಟಿಟಿ ಮುಂಬಯಿಂದ ಆರಂಭಗೊಳ್ಳಲಿದೆ. ಪ್ರತಿ ಮಂಗಳವಾರ ಮತ್ತು ಎಸ್‌ಎಂವಿಟಿಯಿಂದ ರಾತ್ರಿ 8.35ಕ್ಕೆ ಹೊರಟು ಮರುದಿನ ರಾತ್ರಿ 8.40ಕ್ಕೆ ಮುಂಬೈ ತಲುಪಲಿದೆ. ಪ್ರತಿ ಬುಧವಾರ ಮತ್ತು ಭಾನುವಾರ ಮುಂಬೈಯ ಎಲ್‌ಟಿಟಿಯಿಂದ ರಾತ್ರಿ 11.15ಕ್ಕೆ ಹೊರಟು ಮರುದಿನ ರಾತ್ರಿ 10.30ಕ್ಕೆ ಎಸ್‌ಎಂವಿಟಿ ತಲುಪಲಿದೆ.

ರೈಲುಗಳು ತುಮಕೂರು, ದಾವಣಗೆರೆ, ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೀರಜ್ ಜಂಕ್ಷನ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿವೆ.

**ಸೂಪರ್ ಫಾಸ್ಟ್ ಎಲ್ಲಿದೆ:** ನಮಗೆ ಬೇಕಿರುವುದು ಸೂಪರ್ ಫಾಸ್ಟ್ ರೈಲು. ಬೆಂಗಳೂರಿನಿಂದ ಹೊರಟರೆ 20 ತಾಸುಗಳ ಒಳಗೆ ಮುಂಬೈ ತಲುಪಬೇಕು. ಆದರೆ, ರೈಲ್ವೆ ಮಂಡಳಿಯು ಸೂಪರ್ ಫಾಸ್ಟ್ ರೈಲು ನೀಡುವುದಾಗಿ ಹೇಳಿ ಸೂಪರ್ ಸ್ಲೋ ರೈಲು ನೀಡಿದೆ. ಸಂಚಾರ ಅವಧಿಯನ್ನು ಕಡಿಮೆ ಮಾಡದೇ ಇದ್ದರೆ ಪ್ರಯೋಜನವಿಲ್ಲ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಪ್ರತಿಕ್ರಿಯಿಸಿದ್ದಾರೆ.ಸೂಪರ್ ಫಾಸ್ಟ್ ರೈಲು ಆಗಿದ್ದರೆ ನಿಗದಿಪಡಿಸಿದ ನಿಲುಗಡೆ ಹೊರತುಪಡಿಸಿ ಹೆಚ್ಚುವರಿಯಾಗಿ ನಿಲುಗಡೆಯನ್ನು ಯಾರೂ ಕೇಳುವುದಿಲ್ಲ. ಈಗ ಈ ಎಕ್ಸ್‌ಪ್ರೆಸ್ ರೈಲಿಗೆ ರಾಯಭಾಗ, ಗೋಕಾಕ, ಚಿಂಚೋಳಿ ಸಹಿತ ಹಲವು ಕಡೆಗಳಲ್ಲಿ ನಿಲುಗಡೆ ನೀಡಬೇಕು ಎಂಬ ಕೂಗು ಎದ್ದಿದೆ' ಎಂದು ಹೇಳಿದರು.

## ರಾಮೋಹಳ್ಳಿ ರೈಲ್ವೆ ಕೆಳ ಸೇತುವೆ ಕಾಮಗಾರಿ ಶೀಘ್ರ ಮುಕ್ತಾಯ

• ಉದಯವಾಹಿನಿ, ಬೆಂಗಳೂರು



ರಾಮೋಹಳ್ಳಿ ರೈಲ್ವೆಗೇಟ್ ಲೆವೆಲ್ ಕ್ರಾಸಿಂಗ್ ತೆರವು ಗೊಳಿಸಲು ನಿರ್ಮಿಸುತ್ತಿರುವ ರೈಲ್ವೆ ಕೆಳಸೇತುವೆ ಕಾಮಗಾರಿ ಶೀಘ್ರ ಮುಕ್ತಾಯವಾಗಲಿದ್ದು, ಜೂನ್ 30ಕ್ಕೆ ಉದ್ಘಾಟಿಸಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು. ರೈಲ್ವೆ, ಜಿಬಿಎ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಲಕ್ಷಾಂತರ ಜನರು ಸಂಚರಿಸುವ ಈ ಮಾರ್ಗದಲ್ಲಿ ಲೆವೆಲ್ ಕ್ರಾಸಿಂಗ್ ಅನ್ನು ತೆರವುಗೊಳಿಸಲು ಕೆಳ ಸೇತುವೆ ನಿರ್ಮಿಸಲಾಗುತ್ತಿದೆ. ಇದರಿಂದಾಗಿ ಆರೇಳು ತಿಂಗಳಿನಿಂದ ಸಂಚಾರಕ್ಕೆ ತೊಡಕಾಗಿತ್ತು ಈಗ ಅಂತಿಮ ಹಂತಕ್ಕೆ ಬಂದಿದೆ. ಮುಂದಿನ ತಿಂಗಳು ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತ ಗೊಳಿಸಲಾಗುವುದು ಎಂದು ಹೇಳಿದರು.

ಗುಬ್ಬಿ ಬಳಿಕ ಬಿಳಿಪಾಳ್ಯ ಗೇಟ್, ಭೀಮಸಂದ್ರ ರೈಲ್ವೆ ಕೆಳಸೇತುವೆ, ಬಂಡಿಹಳ್ಳಿ ಸಂಪರ್ಕರಸ್ತೆ ಕಾಮಗಾರಿಗಳು ಕೂಡ ಎರಡು ಮೂರು ತಿಂಗಳ ಒಳಗೆ ಪೂರ್ಣಗೊಳ್ಳಲಿವೆ. ಸಹಕಾರನಗರದ ಸಬ್‌ವೇ ಈ ವರ್ಷ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ವಿವರ ನೀಡಿದರು.

ನಗರದ ಕೆಲವು ಕಡೆಗಳಲ್ಲಿ ಜಿಬಿಎ ಸಹಕಾರ ಬೇಕಾಗುತ್ತದೆ. ಇದೇ ರೀತಿ ಯಾವ ಯಾವ ಇಲಾಖೆಯ ಸಹಕಾರ ಬೇಕು ಎಂದು ನೋಡಿ ಪ್ರತಿ ಮೂರು ತಿಂಗಳಿಗೆ ಒಮ್ಮೆ ಆ ಇಲಾಖೆಗಳ ಅಧಿಕಾರಿಗಳು ಮತ್ತು ರೈಲ್ವೆ ಅಧಿಕಾರಿಗಳ ಸಭೆ ನಡೆಸಿ ಸಮನ್ವಯದೊಂದಿಗೆ ಕೆಲಸ ಮಾಡಲಾಗುವುದು' ಎಂದರು.

### ವಿದ್ಯಾರ್ಥಿಗಳನ್ನು ಸಾಮರ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಶಾಲೆಗೆ ಸೇರ್ಪಡೆ ಮಾಡದಂತೆ ಶಾಲೆ ಮುಂಭಾಗ ನೋಟೀಸ್ ಅಂಟಿಸಿದ ಶಾಲಾ ಶಿಕ್ಷಣ ಇಲಾಖೆ

# ಶಾಲೆ ಮಾನ್ಯತೆ ರದ್ದು; ಪ್ರವೇಶ ಪಡೆಯದಿರಲು ಶಾಲಾ ಶಿಕ್ಷಣ ಇಲಾಖೆ ನೋಟೀಸ್

• ಉದಯವಾಹಿನಿ, ಬೆಂಗಳೂರು



**ಕೊನೆಗೂ ಅಂತಿಮ ಮುದ್ರೆ**

ಧಣಿಸಂದ್ರದ ಸಾಮರ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್‌ಗೆ ಮಾನ್ಯತೆ ರದ್ದಾಗಿರುವ ಕಾರಣ ಶಾಲೆಯನ್ನು ಮುಚ್ಚಿದ್ದು, ಸದರಿ ಶಾಲೆಗೆ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡದಂತೆ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ವಿದ್ಯುಕ್ತವಾಗಿ ಶಾಲಾ ಮುಂಭಾಗ ನೋಟಿಸ್ ಅಂಟಿಸಿದೆ. ವ್ಯಾಪಕ ಪೊಲೀಸ್ ಬಂದೋಬಸ್ತ್ ಒದಗಿಸಿದ್ದು, ಈ ಮೂಲಕ ಶಾಲೆ ಮುಚ್ಚಿರುವುದನ್ನು ಸಾರ್ವಜನಿಕವಾಗಿ ಪ್ರಕಟಿಸಿ ಕೊನೆಗೂ ಅಂತಿಮ ಮುದ್ರೆ ಒತ್ತಿದೆ. ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರ ಸೂಚನೆ ಮೇರೆಗೆ ಈ ವರ್ಷದ ಏಪ್ರಿಲ್ 10 ರಂದು ಹೊರಡಿಸಿದ ಆದೇಶ ಹಾಗೂ 2025 ರ ಮೇ 30 ರಂದು ಹೈಕೋರ್ಟ್ ಆದೇಶ ಸೇರಿ ವಿವಿಧ ತೀರ್ಪುಗಳು, ಸುತ್ತೋಲೆ, ಆದೇಶಗಳನ್ನು ಉಲ್ಲೇಖಿಸಿ ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡಿದೆ. ಸಾಮರ್ ಇಂಟರ್ನ್ಯಾಷನಲ್ ಇಸ್ಲಾಮಿಕ್ ಶಾಲೆಯ 1 ರಿಂದ 10ನೆಯ ತರಗತಿಗಳ ಮಾನ್ಯತೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಸೆಕ್ಷನ್-39 ರಂತೆ ಹಿಂಪಡೆದು ಸೆಕ್ಷನ್-34 ರಂತೆ ನೋಂದಣಿಯನ್ನು ರದ್ದುಪಡಿಸಿದೆ. ಈ ಕಾರಣದಿಂದ ಸದರಿ ಶಾಲೆಯನ್ನು ಇಲಾಖೆಯು ಮುಚ್ಚಿಸಿದ್ದು ಮಕ್ಕಳನ್ನು 2026-27ರ ಸಾಲಿಗೆ ದಾಖಲು ಮಾಡಬಾರದು ಎಂದು ಸ್ಪಷ್ಟವಾಗಿ ಹೇಳಿದೆ. ಮೇ ತಿಂಗಳ 13 ರಂದು ಶಾಲಾ ಶಿಕ್ಷಣ ಇಲಾಖೆ ಅಂತಿಮ ಆದೇಶ ಹೊರಡಿಸಿತ್ತು. ಅದರಂತೆ ದಾಖಲಾತಿ ಮಾಡಿಕೊಳ್ಳದಂತೆ ಆಡಳಿತ ಮಂಡಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಆನ್ ಲೈನ್ ಮೂಲಕ ವರ್ಗಾವಣೆಗೊಳ್ಳುವ ಶಾಲೆಗಳಿಗೆ ವರ್ಗಾವಣೆ ಮಾಡಬೇಕು. ಈ ಕುರಿತ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಒದಗಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಆದೇಶಿಸಿದ್ದರು. ಶಿಕ್ಷಣ ಇಲಾಖೆಯ ಆದೇಶದನ್ವಯ ಪೊಲೀಸ್ ಬಂದೋಬಸ್ತ್ ಮೂಲಕ ದೊಡ್ಡ ಮಟ್ಟದಲ್ಲಿ ಪೋಷಕರ ಸಭೆ ನಡೆಸಿ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ತಿಳಿವಳಿಕೆ ನೀಡಲಾಗಿತ್ತು. ವಿದ್ಯಾರ್ಥಿಗಳ ಮುಂದಿನ ಹಂತದ ಶಿಕ್ಷಣಕ್ಕೆ ಧಕ್ಕೆಯಾಗದಂತೆ ಉನ್ನತ ಅಧಿಕಾರಿಗಳ ನೇತೃತ್ವದಲ್ಲಿ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

**ಸಾಮರ ಇಂಟರ್ ನ್ಯಾಷನಲ್**

**ಇಸ್ಲಾಮಿಕ್ ಶಾಲೆ ಹಲವು ನಕಲಿ ಹೆಸರುಗಳಿಂದ ನಡೆಯುತ್ತಿತ್ತು. ಜಾಮಿಯಾ ಮುಹಮ್ಮದಿಯಾ ಮನ್ಸೂರ ಮದರಸಾ-ಮುಂಬೈ, ಅಲ್-ಜಾಮಿಯಾ ಮುಹಮ್ಮದಿಯಾ ಎಜುಕೇಶನ್ ಸೊಸೈಟಿ ಮುಂಬೈ, ಜಾಮಿಯಾ ಮುಹಮ್ಮದಿಯಾ ಎಜುಕೇಶನ್ ಸೊಸೈಟಿ ಮುಂಬೈ, ಅಲ್-ಜಾಮಿಯಾ ಮುಹಮ್ಮದಿಯಾ ಮನ್ಸೂರ ಎಜುಕೇಶನ್ ಸೊಸೈಟಿ ಮುಂಬೈ ಹಾಗೂ ಸಾಮರ್ ಇಂಟರ್ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್-ಮುಂಬೈ ಎಂಬ ಹೆಸರುಗಳಿಂದ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿರುವುದಾಗಿ ಆಡಳಿತ ಮಂಡಳಿ ಹೇಳಿತ್ತು. ಹೈಕೋರ್ಟ್ ಮತ್ತು ಶಿಕ್ಷಣ ಇಲಾಖೆಯು ಘೋಷಿಸಿದಂತೆ ಮೇಲೆ ತಿಳಿಸಲಾದ ಸಂಘಗಳು ಕಾನೂನುಬಾಹಿರವಾಗಿವೆ.**

## ಮ್ಯಾಗ್ನೆಟ್ ಶಾಲೆ ಕಡ್ಡಾಯ ಪ್ರವೇಶಕ್ಕೆ ಆಕ್ರೋಶ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಮ್ಯಾಗ್ನೆಟ್ ಶಾಲೆಗಳಿಗೆ ಕಡ್ಡಾಯವಾಗಿ ಮಕ್ಕಳನ್ನು ಸೇರಿಸಬೇಕೆಂದು ಒತ್ತಾಯಪೂರ್ವಕವಾಗಿ ಪೋಷಕರ ಸಹಿಗಳನ್ನು ಪಡೆಯಲಾಗುತ್ತಿದೆ. ಗ್ರಾಮಮಟ್ಟದ ಶಾಲೆಗಳಿಗೆ ಶಿಕ್ಷಣ ಇಲಾಖೆಯೇ ಬೀಗ ಹಾಕುತ್ತಿದೆ ಎಂದು ಆರೋಪಿಸಿ, ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಭಾನುವಾರ ಸ್ಥಳೀಯರು ಪ್ರತಿಭಟನೆ ನಡೆಸಿದರು. ನೆಲಮಲೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೋಟಾಹಳ್ಳಿ, ಅಮ್ಮನಪುರ, ಪಾಲಬೋವಿದೊಡ್ಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಉಳಿವಿಗಾಗಿ ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತ್ಯೇಕವಾಗಿ ಸಭೆ ಹಾಗೂ ಪ್ರತಿಭಟನೆ ನಡೆಯಿತು. ಶಾಲೆಗಳ ವಿದ್ಯಾರ್ಥಿಗಳು ಹಾಗೂ ಪೋಷಕರು ಸಹ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಹಳ್ಳಿ ಶಾಲೆಗಳನ್ನು ನಿರ್ಮೂಲನೆ ಮಾಡುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನಾ ಫಲಕಗಳನ್ನು ಪ್ರದರ್ಶಿಸಿದರು. ಹಳ್ಳಿ ಮಕ್ಕಳ ಶಿಕ್ಷಣದ ಹಕ್ಕು ಕಸಿಯುವ ಮ್ಯಾಗ್ನೆಟ್ ಯೋಜನೆಯಡಿ ಸರ್ಕಾರ ಯಾವುದೇ ಶಾಲೆಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿದರು.

ಸಂಘಟನೆ ರಾಜ್ಯ ಕಾರ್ಯಕಾರಿ ಸದಸ್ಯ ಕಲ್ಯಾಣ ಕುಮಾರ್ ಮಾತನಾಡಿ, 'ಶಿಕ್ಷಕರು, ಮುಖ್ಯ ಶಿಕ್ಷಕರು, ಸಿಆರ್‌ಪಿ, ಬಿಇಒ, ಡಿಡಿಪಿಐಗಳಷ್ಟೇ ಅಲ್ಲದೆ ಶಾಸಕರಿಂದಲೂ ಪೋಷಕರ ಮೇಲೆ ತೀವ್ರ ಒತ್ತಡ ಹೇರಲಾಗುತ್ತಿದೆ. ಎಷ್ಟೋ ಕಾಡಂಚಿನ ಗ್ರಾಮಗಳಿಗೆ ಕನಿಷ್ಠ ಬಸ್ ಸೌಕರ್ಯವೇ ಇಲ್ಲದಿರುವಾಗ, ಮ್ಯಾಗ್ನೆಟ್ ಶಾಲೆಗೆ ಹೋಗುವ ಮಕ್ಕಳಿಗೆ ಉಚಿತ ಬಸ್ ಒದಗಿಸಲು ಹೇಗೆ ಸಾಧ್ಯ?' ಎಂದು ಪ್ರಶ್ನಿಸಿದರು. ಕರ್ನಾಟಕದ ಮೊದಲ ಪ್ರಾಯೋಗಿಕ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಾದ ಹೊಂಗನೂರು ಶಾಲೆಯೇ ದೊಡ್ಡ ವೈಫಲ್ಯಕ್ಕೆ ಸಾಕ್ಷಿಯಾಗಿರುವಾಗ. ಈ ಯೋಜನೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಇದು ರೈತರು ಮತ್ತು ಕಾರ್ಮಿಕರ ಮಕ್ಕಳಿಂದ ಸಾರ್ವಜನಿಕ ಶಿಕ್ಷಣವನ್ನು ಶಾಶ್ವತವಾಗಿ ಕಸಿದುಕೊಳ್ಳುವ ಯೋಜನೆಯಾಗಿದೆ ಎಂದು ದೂರಿದರು. ಸಂಘಟನೆಯ ಬೆಂಗಳೂರು ದಕ್ಷಿಣ ಜಿಲ್ಲಾ ಸಂಚಾಲಕ ರೋಹಿತ್ ಮಾತನಾಡಿ, ಈಗಾಗಲೇ ಪ್ರತಿ ಹಳ್ಳಿಗಳಲ್ಲಿ ಪೋಷಕರು-ಗ್ರಾಮಸ್ಥರು ಕಳೆದ ಒಂದು ತಿಂಗಳಿಂದ ಹೋರಾಡುತ್ತಾ ಮನವಿ ಪತ್ರಗಳನ್ನು ಸಲ್ಲಿಸಿದ್ದಾರೆ. ಆದರೂ, ಸರ್ಕಾರ ತನ್ನ ಮೊಂಡುತನ ಬಿಟ್ಟಿಲ್ಲ. ಆದ್ದರಿಂದ, ಈ ಜನವಿರೋಧಿ ಯೋಜನೆಯ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕಿದೆ. ಹಳ್ಳಿಗಳ ಸರ್ಕಾರಿ ಶಾಲೆಗಳನ್ನು ಉಳಿಸಬೇಕಿದೆ' ಎಂದರು.

**ಸಮಿತಿ ರಚನೆ:** ಪ್ರತಿಭಟನಾ ಸಭೆಯಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಬಲಪಡಿಸಲು ಪೋಷಕರು ಹಾಗೂ ಗ್ರಾಮಸ್ಥರು ಸೇರಿದಂತೆ ನೆಲಮಲೆ, ಕೋಟಾಹಳ್ಳಿ, ಅಮ್ಮನಪುರ ಹಾಗೂ ಪಾಲಬೋವಿದೊಡ್ಡಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಲಾಯಿತು.

### ಗಾಂಜಾ ಮಾರಾಟ ಜಾಲಕ್ಕೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಮುಂದಾಗಲಿ

# ಕುಂದುಕೊರತೆ ಸಭೆಯಲ್ಲಿ ಮುಖಂಡರ ಆಗ್ರಹ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದಲ್ಲಿ ಗಾಂಜಾ ಮಾರಾಟ ಅವ್ಯಾಹತವಾಗಿ ನಡೆಯುತ್ತಿದ್ದು, ಯುವ ಸಮೂಹ, ವಿದ್ಯಾರ್ಥಿಗಳು ಚಟಕ್ಕೆ ಬಿದ್ದು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವವ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಎಸ್ಸಿ, ಎಸ್ಟಿ ಸಮುದಾಯದ ಮುಖಂಡರು ಒತ್ತಾಯಿಸಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಡಿವೈಎಸ್ಪಿ ಸ್ನೇಹಾರಾಜ್ ನೇತೃತ್ವದಲ್ಲಿ ನಡೆದ ಚಾಮರಾಜನಗರ ಜಿಲ್ಲಾ ಪೊಲೀಸ್, ಚಾಮರಾಜನಗರ ನಗರ ಉಪ ವಿಭಾಗ ಮಟ್ಟದ ಪರಿಶಿಷ್ಟ ಜಾತಿ-ಪಂಗಡದ ಕುಂದುಕೊರತೆ ಸಭೆಯಲ್ಲಿ ಅಸಮಾಧಾನ ಹೊರ ಹಾಕಿದ ಮುಖಂಡರು, ಪಟ್ಟಣದ ನಾಯಕರ ಬೀದಿಯಲ್ಲಿ ಅರಳಿಕಟ್ಟೆ ಆಸುಪಾಸಿನಲ್ಲಿ ಗಾಂಜಾ ವ್ಯಸನಿಗಳ ಸಂಖ್ಯೆ ಹೆಚ್ಚಿದ್ದು, 16 ವರ್ಷದ ಬಾಲಕರು ಮತ್ತು ವಿದ್ಯಾರ್ಥಿಗಳು ಗಾಂಜಾ ಸೇವನೆ ಮಾಡಿ ನಶೆಯಲ್ಲಿರುತ್ತಾರೆ. ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ ಎಂದು ಜಾರಕಿ ಹೊಳಿ ಬ್ರಿಗೇಡ್ ಗೋವಿನಾಯಕ್ ದೂರಿದರು.

ಕರವೇ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ವಿ.ನಾಯಕ ಮಾತನಾಡಿ, ಕೇರಳ ರಸ್ತೆಯಲ್ಲಿರುವ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಮುಂಭಾಗದ ರಸ್ತೆಯಲ್ಲಿ ಗ್ರೀಸ್ ಹೊಡೆಯುವವರು 40, 100 ರೂ.ಗೆ ಪೊಟ್ಟಣ ತಯಾರಿಸ ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಜೊತೆಗೆ ಮಾನಸ ಶಾಲೆ ಆಸುಪಾಸು, ಡಿಗ್ರಿ ಕಾಲೇಜು, ಜಾಕೀರ್ ಹುಸೇನ್ ನಗರ ಹೊಸ ಲೇಔಟ್‌ಗಳು, ಕೆಲ ಟೀ ಅಂಗಡಿಗಳಲ್ಲಿ ಗಾಂಜಾ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಈ ಬಗ್ಗೆ ಮಾಹಿತಿ ಇದ್ದರೂ ಕೂಡ ಅಬಕಾರಿ ಮತ್ತು ಪೊಲೀಸ್ ಇಲಾಖೆಯವರು ಕ್ರಮಕ್ಕೆ ಮುಂದಾಗಿಲ್ಲ ಎಂದು ಕೆಲವು ಮಂದಿ ಮುಖಂಡರು ಧ್ವನಿ ಗೂಡಿಸಿದರು. ಗಾಂಜಾ ಪ್ರಕರಣ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದರು ಪೊಲೀಸ್ ಇಲಾಖೆಯವರಿಗೆ

**ಅಕ್ರಮ ಗಾಂಜಾ ಮಾರಾಟ**


ಉದಯವಾಹಿನಿ ಚಿತ್ರ

> **ನವೀನ್ ಎಂಬುವವರ ಜ್ಯುಯಲರಿ ಶಾಪ್ ಆರಂಭಿಸಿ ಎಸ್ಸಿ, ಎಸ್ಟಿ ಸಮುದಾಯದ 40ಕ್ಕೂ ಹೆಚ್ಚು ಮಂದಿಯ ಚಿನ್ನ ಗಿರವಿ ಇಟ್ಟು ಮೋಸ ಮಾಡಿದ್ದಾನೆ. ದೂರು ನೀಡಿದರು ಆತನ ವಿರುದ್ಧ ಕ್ರಮ ವಹಿಸಿಲ್ಲ. ಕೂಡಲೇ ಇದರ ವಿರುದ್ಧ ಕ್ರಮ ವಹಿಸಬೇಕು. ಜೊತೆಗೆ ಬೇಗೂರು ಭಾಗದ ರಸ್ತೆಯಲ್ಲಿ ಟಿಪ್ಪರ್ ಗಳ ಹಾವಳಿ ಹೆಚ್ಚಿದ್ದು ಕ್ರಮ ವಹಿಸಬೇಕು.**
>
> **-ಯಡವನಹಳ್ಳಿ ಸಿದ್ದರಾಜು, ರೈತ ಮುಖಂಡ**

ಮಾಹಿತಿ ಇಲ್ಲವೇ. ಹೀಗಿದ್ದಲ್ಲಿ ನಿಮ್ಮ ಕರ್ತವ್ಯವೇನು ಎಂದು ಹಸಗೂಲಿ ಸಿದ್ದಯ್ಯ ಪ್ರಶ್ನಿಸಿದರು.

ಜಾರಕಿ ಹೊಳಿ ಬ್ರಿಗೇಡ್ ರಮೇಶ್ ಮಾತನಾಡಿ, ಚೆಕ್ ಬೌನ್ಸ್ ಕೇಸ್‌ನಲ್ಲಿ ಆರೋಪಿಯನ್ನು ವರ್ಷವಾದರೂ ಬಂಧಿಸಿಲ್ಲ. ಕೂಡಲೇ ಇದರ ವಿರುದ್ಧ ಕ್ರಮವಾಗಬೇಕು ಎಂದು ಆಗ್ರಹಿಸಿದರು. ಮೂಖಹಳ್ಳಿ ಸುರೇಶ್ ಮಾತನಾಡಿ, ಮೂಖಹಳ್ಳಿಯಿಂದ ಹೊಂಗಹಳ್ಳಿಗೆ ಹೋಗುವ ರಸ್ತೆಯಲ್ಲಿ ಬಾರ್ ಇದೆ. ಇದರಿಂದ ಸಂಜೆ ವೇಳೆ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವುದನ್ನು ತಪ್ಪಿಸಬೇಕೆಂದು ಮನವಿ ಮಾಡಿದರು. ಹೊನ್ನಶೆಟ್ಟರಹುಂಡಿ ದೇವರಾಜು ಮಾತನಾಡಿ, ತಾಲ್ಲೂಕಿನಲ್ಲಿ ಟಿಪ್ಪರ್ ಹಾವಳಿ ಹೆಚ್ಚಿದ್ದು, ಲಾರಿ ಚಾಲಕರು ಕುಡಿದು ವಾಹನ ಚಾಲನೆ ಮಾಡುತ್ತಿದ್ದಾರೆ. ಇದರಿಂದ ಅಪಘಾತ ಪ್ರಕರಣಗಳು ಹೆಚ್ಚುತ್ತಿದೆ. ಕೂಡಲೇ ಇದಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ನಾಯಕ ಸಮುದಾಯದ ಮುಖಂಡ ನಾಗೇಂದ್ರ

> **ಪ್ರತಿ ತಿಂಗಳ ಕೊನೆ ಭಾನುವಾರ ಕಡ್ಡಾಯವಾಗಿ ಎಸ್ಸಿ, ಎಸ್ಟಿ ಸಭೆ ಕರೆಯಬೇಕು. ಅದರಲ್ಲಿ ತಪ್ಪದೇ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿರಬೇಕು. ಜೊತೆಗೆ ಸಭೆ ನಡೆಯುವ ಮಾಹಿತಿಯನ್ನು ಎಲ್ಲರಿಗೂ ತಿಳಿಸಬೇಕು. ಬಹುಮುಖ್ಯವಾಗಿ ಅಟ್ರಾಸಿಟಿ ಪ್ರಕರಣ ಸಂಬಂಧ ಡಿ.ಸಿ.ಆರ್.ಇ ಪೊಲೀಸರು ಹಾಜರಾಗಿ, ಎಷ್ಟು ಮಂದಿ ದಸ್ತಗಿರಿ ಮಾಡಲಾಗಿದೆ ಎಂದು ಮಾಹಿತಿ ನೀಡಬೇಕು.**
>
> **- ರಂಗಸ್ವಾಮಿ, ದಸಂಸ ಮುಖಂಡ ಮಾಡ್ರಹಳ್ಳಿ**

ಮಾತನಾಡಿ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ. ಸಣ್ಣಪುಟ್ಟ ವಿಚಾರಕ್ಕು ಕೇಸ್‌ಗಳನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗುತ್ತಿದೆ. ಜೊತೆಗೆ ಅಂಬುಲೆನ್ಸ್ ಸಮಸ್ಯೆ ಇದೆ ಎಂದು ದೂರಿದರು. ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಮಂಜುನಾಥ್ ಪ್ರತಿಕ್ರಿಯೆ ನೀಡಿ, ಆರೋಗ್ಯದ ಬಗ್ಗೆ ರಿಸ್ಕ್ ತಗೊಳೋಕೆ ಆಗಲ್ಲ. ಅದಕ್ಕಾಗಿ ಪ್ರಕರಣಗಳನ್ನು ರವಾನೆ ಮಾಡಲಾಗುತ್ತಿದೆ ಎಂದು ಹಾರಿಕೆ ಉತ್ತರ ನೀಡಿದರು. ಇದಕ್ಕೆ ಮುಖಂಡರು ಗರಂ ಆದರು.

ಡಿವೈಎಸ್‌ಪಿ ಸ್ನೇಹಾರಾಜ್ ಎಸ್ಸಿ, ಎಸ್ಟಿ ಸಮುದಾಯದ ಮುಖಂಡರು ದೂರು ಆಲಿಸಿ ಮಾತನಾಡಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 782 ಟಿಪ್ಪರ್ ಕೇಸ್ ಹಾಕಲಾಗಿದೆ. ಸಭೆಗೆ ಗೈರಾದ ತಹಶೀಲ್ದಾರ್, ಅಬಕಾರಿ, ಡಿ.ಸಿ.ಆರ್.ಇ, ಪುರಸಭೆ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಈ ವೇಳೆ ಪೊಲೀಸ್ ಇನ್ಸ್‌ಪೆಕ್ಟರ್ ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ನರೇಶ್ ಕುಮಾರ್, ತೆರಕಣಾಂಬಿ ಠಾಣೆ ಪಿಎಸ್.ಐ ಮಹೇಶ್, ಬೇಗೂರು ಪಿಎಸ್.ಐ. ನವೀನ್, ಎಸ್ಸಿ, ಎಸ್ಟಿ ಸಮುದಾಯದ ಮುಖಂಡರಾದ ಸೇರಿದಂತೆ ಠಾಣಾ ಸಿಬ್ಬಂದಿ ಆರ್.ಡಿ.ಉಲ್ಲಾಸ್, ಶ್ರೀನಿವಾಸ ನಾಯಕ, ರಂಗಪ್ಪ ನಾಯಕ, ಮುತ್ತಣ್ಣ ಸೇರಿದಂತೆ ಇತರರು ಹಾಜರಿದ್ದರು.

## ಮಿನಿ ನ್ಯೂಸ್

### ಬ್ಯಾಂಕ್ ರೈತ ಪರ ಕಾರ್ಯನಿರ್ವಹಿಸಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಕರ್ನಾಟಕ ಗ್ರಾಮೀಣ ಬ್ಯಾಂಕಿನ ಮೈಸೂರು ವಲಯ ಕಚೇರಿಯಲ್ಲಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಸದಸ್ಯರೊಂದಿಗೆ ಬ್ಯಾಂಕ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಸತ್ಯಪ್ರಸಾದ್ ಸಭೆ ನಡೆಸಿ ಅಹವಾಲು ಸ್ವೀಕರಿಸಿದರು. ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, 'ಒಟಿಎಸ್ ಸಾಲ ತಿರುವಳಿಯಲ್ಲಿ ರೈತರಿಗೆ ಸಹಕಾರ ನೀಡುತ್ತಿಲ್ಲ. ಸರ್ಕಾರದ ಯೋಜನೆಗಳ ಹಣ, ಹಾಲು, ಸರಬರಾಜು ಹಣ ಬಂದಾಗ ಸಾಲಕ್ಕೆ ಜಮಾ ಮಾಡಿಕೊಳ್ಳಲಾಗುತ್ತಿದೆ. ರೈತರ ಮಕ್ಕಳಿಗೆ ಶಿಕ್ಷಣ ಸಾಲ ಸರಿಯಾಗಿ ಸಿಗುತ್ತಿಲ್ಲ. ರೈತರು ತುರ್ತು ಅಗತ್ಯಗಳಿಗೆ ಚಿನ್ನ ಗಿರವಿ ಇಡಲು ಸಮಸ್ಯೆ ಆಗುತ್ತಿದೆ ಹಾಗೂ ಎಚ್.ಡಿ ಕೋಟೆ, ತಿ. ನರಸೀಪುರ ಮತ್ತು ಮೈಸೂರು ತಾಲ್ಲೂಕಿನ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಶಾಖೆಗಳನ್ನು ಚಾಮರಾಜನಗರ ವಲಯಕ್ಕೆ ಸೇರಿರುವುದರಿಂದ ಸಮಸ್ಯೆಯಾಗಿದೆ' ಎಂದು ತಿಳಿಸಿದರು.

ಸತ್ಯ ಪ್ರಸಾದ್ ಮಾತನಾಡಿ, 'ರಾಜ್ಯದಲ್ಲಿ 1,800 ಗ್ರಾಮೀಣ ಬ್ಯಾಂಕಿನ ಶಾಖೆಗಳಿವೆ. ನಾವು 54 ಸಾವಿರ ಕೋಟಿ ಸಾಲ ನೀಡುತ್ತಿದ್ದು, ಇದರಲ್ಲಿ 43 ಸಾವಿರ ಕೋಟಿಯನ್ನು ರೈತರಿಗೆ ಸಾಲ ನೀಡಿದ್ದೇವೆ. ನಮ್ಮ ಬ್ಯಾಂಕಿನಲ್ಲಿ ಒಟಿಎಸ್ ಸಾಲ ತಿರುವಳಿ ಮಾಡಿದ ರೈತರಿಗೆ ತಕ್ಷಣವೇ ಪುನಃಶ್ವೇತನ ಸಾಲ ನೀಡುತ್ತೇವೆ. ಸಾಲ ಮರುಪಾವತಿ ಸಕಾಲಕ್ಕೆ ಮಾಡಿದರೆ ಶೇ 4 ಬಡ್ಡಿ ವಿಧಿಸಲಾಗುತ್ತದೆ. ಚಿನ್ನದ ಸಾಲಕ್ಕೆ ಯಾವುದೇ ಮಿತಿ ಇಲ್ಲ' ಎಂದರು. 'ಮೈಸೂರು, ಚಾಮರಾಜನಗರ ಜಿಲ್ಲೆಯ ಐವತ್ತಕ್ಕೂ ಹೆಚ್ಚು ರೈತರ ಸಾಲವನ್ನು ಒಟಿಎಸ್ ಪದ್ಧತಿಯಲ್ಲಿ ಮುಕ್ತಾಯಗೊಳಿಸುತ್ತೇವೆ' ಎಂದರು.

### ಕಾಡುಪ್ರಾಣಿ ಬೇಟೆಗೆ ಯತ್ನ ಮೂವರ ಬಂಧನ

• ಉದಯವಾಹಿನಿ, ಕನಕಪುರ

ಕಾಡು ಪ್ರಾಣಿಗಳನ್ನು ಬೇಟೆಯಾಡಲು ಹೊಂಚು ಹಾಕಿ ಕಾಯುತ್ತಿದ್ದಾಗ ಅರಣ್ಯ ಅಧಿಕಾರಿಗಳು ದಾಳಿ ನಡೆಸಿ ಮೂವರನ್ನು ಬಂಧಿಸಿದ್ದು, ಒಬ್ಬ ಪರಾರಿಯಾಗಿದ್ದಾನೆ. ತಾಲ್ಲೂಕಿನ ಕೋಡಿಹಳ್ಳಿ ಹೋಬಳಿ ಅಲ್ಲುಕ್ಕಿ ಗ್ರಾಮದ ಶಿವಸ್ವಾಮಿ, ಪ್ರದೀಪ್ ಕುಮಾರ್, ಜಗದೀಶ್‌ಬಂಧಿತ ಆರೋಪಿಗಳಾಗಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿ, ಅಲ್ಲುಕ್ಕಿ ಮಹದೇವನಾಯ್ಕನಿಗಾಗಿ ಶೋಧಕಾರ್ಯ ಕೈಗೊಂಡಿದ್ದಾರೆ.

ಮುಂಜಾನೆ ಮುನ್ನೂರು ವನ್ಯಜೀವಿ ವಲಯದ ಅಲ್ಲುಕ್ಕಿ ಗಸ್ತಿನ ವ್ಯಾಪ್ತಿಗೆ ಬರುವ ಜಮೀನೀನಲ್ಲಿ ನಾಡಬಂದೂಕಿನಿಂದ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಹೊಂಚು ಹಾಕುತ್ತಿದ್ದ ಖಚಿತ ಮಾಹಿತಿ ಮೇರೆಗೆ ಮುಗ್ಗೂರು ಆರ್‌ಎಫ್‌ಒ ರಾಜೇಂದ್ರ ಸ್ವಾಮಿ, ಡಿಆರ್‌ಎಫ್‌ಒ ಸುನಿಲ್, ಬೀಟ್ ಫಾರೆಸ್ಟ್ ಶಿವು , ಸಿಬ್ಬಂದಿ ದಾಳಿ ನಡೆಸಿದ್ದಾರೆ. ದಾಳಿ ಸಂದರ್ಭದಲ್ಲಿ ಮೂವರು ಆರೋಪಿಗಳು ಹಾಗೂ ಒಂದು ನಾಡ ಬಂದೂಕು ಮತ್ತು ಮದ್ದು ಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ನಾಡ ಬಂದೂಕು ಬಳಕೆ ಮಾಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿ ಆರೋಪಿಗಳನ್ನು ಕೋಡಿಹಳ್ಳಿ ಪೊಲೀಸರಿಗೆ ಒಪ್ಪಿಸಿದ್ದಾರೆ.

### ಡೆಂಗಿ ನಿರ್ಮೂಲನೆ ಜಾಗೃತಿ ಜಾಥಾ

• ಉದಯವಾಹಿನಿ. ಬಾಗೇಪಲ್ಲಿ

ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಮಾಡಿಕೊಂಡು ಸೊಳ್ಳೆಗಳ ನಿಯಂತ್ರಣ ಮಾಡಿದ್ದಲ್ಲಿ, ಡೆಂಗಿಜ್ವರ ಹತೋಟಿಗೆ ಬರಲಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಿ.ಎನ್. ಸತ್ಯನಾರಾಯಣರೆಡ್ಡಿ ತಿಳಿಸಿದರು. ಪಟ್ಟಣದ ಡಿವಿಜಿ ಮುಖ್ಯರಸ್ತೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಡೆಂಗಿ ನಿರ್ಮೂಲನೆ ದಿನದ ಪ್ರಯುಕ್ತ ಜನಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ಡೆಂಗಿಜ್ವರ ಸೇರಿದಂತೆ ಅನೇಕ ರೋಗಗಳು ಬರುವ ಮುನ್ನ ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮ ಅನುಸರಿಸಬೇಕು. ಡೆಂಗಿಜ್ವರ ವೈರಸ್‌ನಿಂದ ರೋಗ ಹರಡಲಿದೆ. ಸೊಳ್ಳೆ ಕಡಿತದಿಂದ ಜ್ವರದ ಲಕ್ಷಣ ಹೆಚ್ಚಾಗಲಿದೆ. ಈ ಜ್ವರಕ್ಕೆ ಲಸಿಕೆ ಇಲ್ಲದಿರುವುದರಿಂದ ಎಚ್ಚರ ವಹಿಸಬೇಕು. ತಲೆನೋವು, ಕಣ್ಣು, ಕಿವಿ, ಮತ್ತು ಮಾಂಸಖಂಡಗಳಲ್ಲಿ ವಿಪರೀತ ನೋವು ಕಂಡುಬರಲಿದೆ. ಬಾಯಿ, ಮೂಗು, ವಸಡುಗಳಲ್ಲಿ ರಕ್ತಸ್ರಾವ ಉಂಟಾಗಲಿದೆ. ರೋಗದ ಲಕ್ಷಣಗಳು ಕಂಡುಬಂದರೆ ಕೂಡಲೇ ಆಸ್ಪತ್ರೆಯಲ್ಲಿ ತುರ್ತುಚಿಕಿತ್ಸೆ ಪಡೆಯಬೇಕು. ಇಲ್ಲವಾದರೆ ಅಮೂಲ್ಯವಾದ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ ಎಂದರು.

ಸೊಳ್ಳೆಗಳು ಕಚ್ಚದಂತೆ ಸೊಳ್ಳೆಪರದೆ, ಗುಡ್‌ನೈಟ್ ಬಳಸಬೇಕು. ಮನೆ, ಚರಂಡಿಗಳು ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಮಾಡಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

## ಬ್ರಾಹ್ಮಣರು ಧಾರ್ಮಿಕ ಆಚರಣೆಗೆ ಆಸಕ್ತಿವಹಿಸಿ : ಅಧ್ಯಕ್ಷ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಬ್ರಾಹ್ಮಣರು ಧಾರ್ಮಿಕ ಅಚರಣೆಗಳಿಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಮುಂದಿನ ಪೀಳಿಗೆಗೂ ನಮ್ಮ ಸನಾತನ ಧರ್ಮ ಉಳಿಸಿ ಬೆಳೆಸಬೇಕು ಎಂದು ತಾಲ್ಲೂಕು ಬ್ರಾಹ್ಮಣ ಸಭಾದ ಅಧ್ಯಕ್ಷ ಕೆ.ವಿ.ಗೋಪಾಲ ಕೃಷ್ಣಭಟ್ಟರು ಕಿವಿಮಾತು ಹೇಳಿದರು.

ಪಟ್ಟಣದ ಶ್ರೀರಾಮ ಮಂದಿರದ ಸಭಾಂಗಣದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬ್ರಾಹ್ಮಣ ಸಭಾ ಹಾಗೂ ಕೌಂಡಿಣ್ಯ ವಿಪ್ರ ಬಳಗ, ಶಾರದ ಸತ್ಸಂಗ ಸಮಾಜ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಆಚಾರ್ಯತ್ರಯರ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಪ್ರ ಸಮಾಜದ ಪ್ರತಿಯೊಬ್ಬರು ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಸಾಧನೆಗೆ ಬೆನ್ನೆಲುಬಾಗಿ ನಿಲ್ಲಬೇಕು ಎಂದು ತಿಳಿಸಿದರು.

ಬ್ರಾಹ್ಮಣ ಸಮುದಾಯ ಪ್ರತಿಭೆಯಿಂದಲೇ ಸಮಾಜದಲ್ಲಿ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದೆ. ಭವಿಷ್ಯದಲ್ಲೂ ಅದನ್ನು ಮುಂದುವರೆಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಸರಕಾರದ ಮಟ್ಟದಲ್ಲಿ ನಮ್ಮ ಬ್ರಾಹ್ಮಣ ಸಮುದಾಯ ಕಣ್ಣ್ಮರೆ ಅಗಿದೆ ಎಂದರೇ ತಪ್ಪಾಗಲಾರದು. ಆದ್ದರಿಂದ ಎಲ್ಲರೂ ಒಗ್ಗೂಡಿ ಸಂಘಟನೆ ಸಹಕಾರ ನೀಡಬೇಕು. ಆಳುವ ಸರ್ಕಾರಗಳಿಗೆ ನಮ್ಮ ಸಮುದಾಯದ ಶಕ್ತಿ ಏನೆಂದು ತಿಳಿಸುವ ಮೂಲಕ ಅನ್ಯಾಯ ಸರಿಪಡಿಸಿಕೊಳ್ಳಬೇಕು ಎಂದು ಹೇಳಿದರು.

ಬ್ರಾಹ್ಮಣ ಜನಾಂಗದ ಯುವಕರು ವಿವಾಹವಾಗಲು ಹೆಣ್ಣು ಮಕ್ಕಳು ಸಿಗದಿರುವ ಕಾರಣ ಅವಿವಾಹಿತರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೇ ಸಂತತಿಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕೌಂಡಿನ್ಯ ವಿಪ್ರಬಳಗದ ಅಧ್ಯಕ್ಷ ಆನಂದಕುಮಾರ್, ವಿಪ್ರ ಮಹಿಳಾ ಬಳಗದ ಅಧ್ಯಕ್ಷೆ ಮಹಾಲಕ್ಷ್ಮೀ ನಾಗರಾಜು, ಶಾರದ ಸತ್ಸಂಗದ ಅಧ್ಯಕ್ಷೆ ಗಾಯತ್ರಿ ಅನಂತು, ಸಂಘದ ಉಪಾಧ್ಯಕ್ಷ ಎಚ್.ವಿ.ರವಿಕಾಂತ್, ಮಂಜುನಾಥ್, ಸೂರ್ಯ ನಾರಾಯಣ್, ಶ್ರೀರಾಮ ಮಂದಿರಂ ಟ್ರಸ್ಟ್ ಕಾರ್ಯದರ್ಶಿ ಸತೀಶ್ ಕುಮಾರ್, ಬಾಲಸುಬ್ರಹ್ಮಣ್ಯಂ, ತಾಲ್ಲೂಕು ಬ್ರಾಹ್ಮಣ ಸಭಾದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಮೇಶ್ ಮೇಷ್ಟ್ರು, ಎಸ್. ಗೋವಿಂದ ರಾಜನ್ ಇತರರು ಹಾಜರಿದ್ದರು.

## ರಸ್ತೆ ಅಭಿವೃದ್ಧಿಗೆ ಆಗ್ರಹ

• ಉದಯವಾಹಿನಿ, ತುಮಕೂರು



ಉದಯವಾಹಿನಿ ಚಿತ್ರ

ರಸ್ತೆ ದುರಸ್ತಿ, ವಿದ್ಯುತ್ ದೀಪ ಅಳವಡಿಕೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ನಗರ ಹೊರವಲಯದ ಅಂತರಸನಹಳ್ಳಿ ಸೇತುವೆ ಬಳಿ ಸಂಜೆ ಪ್ರತಿಭಟನೆ ನಡೆಸಲಾಯಿತು. 'ಮಧುಗಿರಿ- ಪಾವಗಡ ರಸ್ತೆಯಲ್ಲಿ ನಿರಂತರವಾಗಿ ಅಪಘಾತಗಳು ಸಂಭವಿಸುತ್ತಿವೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ವಿದ್ಯುತ್ ದೀಪ, ಸೂಚನಾ ಫಲಕ ಅಳವಡಿಸಿಲ್ಲ. ರಸ್ತೆ ಗುಂಡಿಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ' ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಉಮೇಶ್ ಹೇಳಿದರು.

ಮುಖಂಡ ಯಲ್ಲಪ್ಪ, 'ರಸ್ತೆ ದೀಪಗಳ ಕೊರತೆಯಿಂದ ರಾತ್ರಿ ಸಮಯದಲ್ಲಿ ಕತ್ತಲು ಆವರಿಸುತ್ತಿದೆ. ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಸಿದರು. ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, 'ರಸ್ತೆ ಉಬ್ಬುಗಳಿಗೆ ರೇಡಿಯಂ ಸ್ಟಿಕ್ಕರ್ ಅಳವಡಿಸಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಜಂಟಿ ಸಭೆ ನಡೆಸಿ ವೈಜ್ಞಾನಿಕ ರೀತಿಯಲ್ಲಿ ರಸ್ತೆ ದುರಸ್ತಿ ಪಡಿಸಬೇಕು. ಬಸ್ ನಿಲ್ದಾಣ, ಮೂಲಸೌಕರ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

## ಸ್ವಾತಂತ್ರ್ಯ ಪೂರ್ವದ ನಾಲೆಗಳ ಅಭಿವೃದ್ಧಿ: ಶಾಸಕ

• ಉದಯವಾಹಿನಿ, ಮದ್ದೂರು


ಉದಯವಾಹಿನಿ ಚಿತ್ರ

ಸ್ವಾತಂತ್ರ್ಯ ಪೂರ್ವ ಸೇರಿದಂತೆ ಕೆ.ಆರ್.ಎಸ್ ಅಣೆಕಟ್ಟು ನಿರ್ಮಾಣವಾದಾಗ ನಿರ್ಮಿಸಿದ್ದ ದುಃಸ್ಥಿತಿಯಲ್ಲಿದ್ದ ನಾಲೆಗಳ ಅಭಿವೃದ್ಧಿಗೆ ಕ್ರಮವಹಿಸಲಾಗಿದೆ' ಎಂದು ಶಾಸಕ ಕೆ, ಎಂ ಉದಯ್ ತಿಳಿಸಿದರು.

ತಾಲ್ಲೂಕಿನ ಪಣ್ಣೆದೊಡ್ಡಿ ಗ್ರಾಮದಲ್ಲಿ 3.50 ಕೋಟಿ ವೆಚ್ಚದ ನಾಲಾ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. 'ಬೆಸಗರಹಳ್ಳಿ ಬಳಿಯ ಪಣ್ಣೆದೊಡ್ಡಿ ಗ್ರಾಮದ ವ್ಯಾಪ್ತಿಯಲ್ಲಿರುವ ಕಾವೇರಿ ನೀರಾವರಿ ನಿಗಮದ 24ನೇ ವಿತರಣಾ ನಾಲೆಯು ಹಲವು ದಶಕಗಳಿಂದ ಯಾವುದೇ ಅಭಿವೃದ್ಧಿಯನ್ನು ಕಂಡಿಲ್ಲದೇ ದುಃಸ್ಥಿತಿಯಲ್ಲಿತ್ತು. ಇದರಿಂದಾಗಿ ಈ ಭಾಗದ ರೈತರ ಜಮೀನುಗಳಿಗೆ ನೀರು ಹರಿಯಲು ತೊಂದರೆಯಾಗುತ್ತಿತ್ತು. ಈ ಬಗ್ಗೆ ಎಷ್ಟೋ ಬಾರಿ ಗ್ರಾಮಸ್ಥರು ನನ್ನ ಗಮನಕ್ಕೆ ತಂದಿದ್ದರು. ಇದರಿಂದ ನಾಲೆಯ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ' ಎಂದರು.

'ಈ ಗ್ರಾಮದ ರಸ್ತೆ ಅಭಿವೃದ್ಧಿ ಸೇರಿದಂತೆ ಹಲವು ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಾಕಷ್ಟು ಅನುದಾನ ನೀಡುವ ಮೂಲಕ ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಈಗಾಗಲೇ ಮಾಡಲಾಗಿದೆ' ಎಂದರು.

## ಟೌನ್‌ಶಿಪ್‌ಗೆ ಭೂ ಸ್ವಾಧೀನ ಕೈ ಬಿಡಲು ಒತ್ತಾಯ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಫಲವತ್ತಾದ ಭೂಮಿಯ ಸ್ವಾಧೀನ ಕೈ ಬಿಡಬೇಕು ಎಂದು ಒತ್ತಾಯಿಸಿ, ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಮಿತಿ ಪ್ರತಿನಿಧಿಗಳು, ರೈತರ ನಿಯೋಗವು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದೆ. ಬೆಂಗಳೂರಿನಲ್ಲಿ ಭಾನುವಾರ ಉಪ ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ನಿಯೋಗವು, ಯೋಜನೆಗಾಗಿ ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆ ರದ್ದುಪಡಿಸಬೇಕು. ಆ ಮೂಲಕ, ಈ ಭಾಗದ ರೈತರ ಹಿತಾಸಕ್ತಿ ಕಾಪಾಡಬೇಕು ಎಂದು ಮನವಿ ಮಾಡಿದರು.

**ಮನವಿಯಲ್ಲಿ ಏನಿದೆ?:** ಯೋಜನೆಗಾಗಿ 2025ರ ಮಾರ್ಚ್ 13ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಇದೀಗ ಅಂತಿಮ ಅಧಿಸೂಚನೆ ಹೊರಡಿಸುವುದಕ್ಕೆ ತಯಾರಿ ಮಾಡಿಕೊಳ್ಳಲಾಗಿದೆ. ಯೋಜನೆ ವಿರೋಧಿಸಿ ಆರಂಭದಿಂದಲೇ ರೈತರ ಭೂ ಹಿತರಕ್ಷಣಾ ಸಮಿತಿಯಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದ್ದು, ಭಾನುವಾರಕ್ಕೆ 428ನೇ ದಿನಕ್ಕೆ ಕಾಲಿಟ್ಟಿದೆ.

ಉಪನಗರಕ್ಕೆ ಗುರುತಿಸಿರುವ ಭೈರಮಂಗಲ ಗ್ರಾ.ಪಂ. ವ್ಯಾಪ್ತಿಯ 10 ಗ್ರಾಮಗಳು ಹಾಗೂ ಕಂಚುಗಾರನಹಳ್ಳಿ ಗ್ರಾ.ಪಂ.ನ 16 ಗ್ರಾಮಗಳು ಕೃಷಿ ಮತ್ತು ತೋಟಗಾರಿಕೆಯ ಫಲವತ್ತಾದ ಭೂಮಿ ಹೊಂದಿವೆ. ಬಹು ವಾರ್ಷಿಕ ಬೆಳೆಗಳು ಸೇರಿದಂತೆ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜೊತೆಗೆ ಈ ಪ್ರದೇಶದ ರೈತರು ತಮ್ಮ ಬದುಕಿಗಾಗಿ ಹೈನುಗಾರಿಕೆ ನೆಚ್ಚಿಕೊಂಡಿದ್ದಾರೆ.

**ವಿರೋಧ:** ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗಲೇ ಯೋಜನಾ ವ್ಯಾಪ್ತಿಯ 3,500 ರೈತರು ಯೋಜನೆಗೆ ವಿರೋಧ ಇದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ತಹಶೀಲ್ದಾರ್ ಕಚೇರಿ ಸೇರಿದಂತೆ ವಿವಿಧೆಡೆ ಪ್ರತಿಭಟನೆ ನಡೆಸಿದ್ದೇವೆ. ಹಲವರಿಗೆ ಮನವಿ ಸಲ್ಲಿಸಿದ್ದೇವೆ. ರೈತರ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ತಾವು ಭೂ ಸ್ವಾಧೀನ ಕೈ ಬಿಡಬೇಕು ಎಂದು ರೈತರ ನಿಯೋಗವು ಡಿಸಿಎಂ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಒತ್ತಾಯಿಸಿದೆ.

## ವಾಹನ ಸವಾರರು, ಪಾದಚಾರಿಗಳಿಗೆ ದುರ್ಬಲ ಮರಗಳ ಆತಂಕ

• ಉದಯವಾಹಿನಿ, ಮೈಸೂರು

ನಗರದ ಪ್ರಮುಖ ಬಡಾವಣೆ ಹಾಗೂ ಹೊರವಲಯಗಳಲ್ಲಿರುವ ದುರ್ಬಲ ಹಾಗೂ ಶಿಥಿಲ ಮರಗಳನ್ನು ಗುರುತಿಸಿ ರೆಂಬೆಕೊಂಬೆಗಳನ್ನು ತೆರವುಗೊಳಿಸುವ ಕಾರ್ಯವನ್ನು ಮೈಸೂರು ಮಹಾನಗರ ಪಾಲಿಕೆ, ಅರಣ್ಯ ಇಲಾಖೆ ಆರಂಭಿಸದ ಪರಿಣಾಮ ಶುಕ್ರವಾರ ತಡರಾತ್ರಿ ಕಾಣಿಸಿಕೊಂಡ ಸಿಡಿಲು, ಗುಡುಗು ಹಾಗೂ ಬಿರುಗಾಳಿ ಮಳೆಗೆ ನಗರದಲ್ಲಿ100ಕ್ಕೂ ಮರಗಳು ಧರೆಗುರುಳಿವೆ. ಇದೀಗ ಜನರಿಗೆ ದುರ್ಬಲ ಮರಗಳದ್ದೇ ಆತಂಕ ಕಾಡುತ್ತಿದೆ. ಮೈಸೂರಿನಲ್ಲಿ ಪೂರ್ವ ಮುಂಗಾರು ಶುರುವಾಗಿದೆ. ಪ್ರತಿವರ್ಷ ನಗರ ಪಾಲಿಕೆ ವತಿಯಿಂದ ಮಳೆಗಾಲಕ್ಕೂ ಮುನ್ನ ವಯಸ್ಸಾದ ಮರ, ಕೊಂಬೆಗಳನ್ನು ಗುರುತಿಸಿ ತೆರವುಗೊಳಿಸಲಾಗುತ್ತಿತ್ತು. ಆದರೆ, ಈ ವರ್ಷ ದುರ್ಬಲ ಮರಗಳನ್ನು ಗುರುತಿಸುವ ಕೆಲಸವಾಗಿಲ್ಲ. ಈ ಸಂಬಂಧ ಅರಣ್ಯ ಇಲಾಖೆ ಹಾಗೂ ನಗರ ಪಾಲಿಕೆ ನಡುವೆ ಸಮಾಲೋಚನ ಸಭೆ ನಡೆದಿದ್ದು ಬಿಟ್ಟರೆ ಕಾರ್ಯಾಚರಣೆ ಇನ್ನೂ ಕುಂಟುತ್ತಲೇ ಸಾಗುತ್ತಿದೆ.

**ಧರೆಗುರುಳಿದ ಮರಗಳು:** ಸಾಮಾನ್ಯವಾಗಿ ನಗರಪಾಲಿಕೆ ಅಧಿಕಾರಿಗಳು ನಗರದಲ್ಲಿರುವ ದುರ್ಬಲ ಮರಗಳನ್ನು ಗುರುತಿಸಿ ಕಟಾವು ಮಾಡಲು, ಇಲ್ಲವೆ ರೆಂಬೆ ಕೊಂಬೆಗಳನ್ನು ಟ್ರಿಮ್ ಮಾಡಲು ಅನುಮತಿ ನೀಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸುತ್ತಾರೆ.

ಆದರೆ, ಪಾಲಿಕೆ ಅಧಿಕಾರಿಗಳು ಈ ವರ್ಷ ಇನ್ನೂ ಸರ್ವೆ ಕಾರ್ಯವನ್ನೇ ಆರಂಭಿಸಿಲ್ಲ. ಹೀಗಾಗಿ ಮೊನ್ನೆ ಬಿದ್ದ ಒಂದೇ ಮಳೆಗೆ 100ಕ್ಕೂ ಹೆಚ್ಚು ಮರಗಳ ರೆಂಬೆಕೊಂಬೆಗಳು ಧರೆಗುರುಳಿವೆ. ನಗರಪಾಲಿಕೆ ಅಭಯ ತಂಡ ಹಾಗೂ ಸೆಸ್ಕ್ ಸಿಬ್ಬಂದಿ ತೆರವು



ಕಾರ್ಯಾಚರಣೆ ನಡೆಸುತ್ತಿದ್ದರೂ ಪೂರ್ಣಗೊಂಡಿಲ್ಲ. ಅರಣ್ಯ ಇಲಾಖೆ, ಮುಡಾ ಈ ಕಾರ್ಯಕ್ಕೆ ಕೈಜೋಡಿಸಿಲ್ಲ. ಇಲಾಖೆಗಳ ಸಮನ್ವಯತೆ ಕೊರತೆಯಿಂದ ಬಿದ್ದ ಮರಗಳನ್ನು ತೆರವುಗೊಳಿಸುವ ಕಾರ್ಯ ಪೂರ್ಣಗೊಳ್ಳದೆ ಸುಗಮ ಸಂಚಾರಕ್ಕೆ ತೊಂದರೆ ಉಂಟಾಗಿದೆ.

**ಒಣಗಿದ ರೆಂಬೆ-ಕೊಂಬೆಗಳಿಂದ ಅಪಾಯ:** ಈ ವರ್ಷ ಹೆಚ್ಚಿನ ಬಿಸಿಲಿನ ತಾಪಮಾನದಿಂದ ನಗರದ ವಿವಿಧೆಡೆ ಮರಗಳೆ ಲ್ಲಒಣಗಿವೆ. ತೇವಾಂಶ ಇಲ್ಲದೆ ರೆಂಬೆಕೊಂಬೆಗಳು ಮುರಿದು ಬೀಳುವ ಸ್ಥಿತಿ ತಲುಪಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ನಗರ ಪಾಲಿಕೆ, ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ಜನರು ಭಯದಲ್ಲೇ ಬದುಕುವಂತಾಗಿದೆ. ದುರ್ಬಲ ಮರಗಳ ರೆಂಬೆಕೊಂಬೆ ಆಟೋ, ಬಸ್, ಕಾರುಗಳ ಮೇಲೆ ಬಿದ್ದು ಸಾಕಷ್ಟು ಅವಾಂತರ ಸೃಷ್ಟಿಸಿವೆ. ಅದೃಷ್ಟವಶಾತ್ ಯಾವುದೇ ಜೀವಹಾನಿ ಸಂಭವಿಸಿಲ್ಲ. ''ನಗರ ವ್ಯಾಪ್ತಿಯಲ್ಲಿ ಯಾವುದೇ ಸಣ್ಣಮರ ಕಡಿಯಬೇಕಾದರೂ ಅರಣ್ಯ ಇಲಾಖೆಯ ಅನುಮತಿ ಅವಶ್ಯ. ಮುಂಜಾಗ್ರತಾ ದೃಷ್ಟಿಯಿಂದ ಯಾವುದೇ ಕೊಂಬೆ ತೆರವುಗೊಳಿಸಿದರೂ ಪ್ರಕರಣ ದಾಖಲಿಸುತ್ತಾರೆ,'' ಎಂಬುದು ಪಾಲಿಕೆ ಅಧಿಕಾರಿಗಳ ದೂರು.

**ಅವೈಜ್ಞಾನಿಕ ಅರಣ್ಯೀಕರಣ:** ಮೈಸೂರಿನ ಬಹುತೇಕ ರಸ್ತೆಗಳಲ್ಲಿ ಗುಲ್ ಮೊಹರ್ ಮರಗಳು ಬೆಳೆದು ನಿಂತಿವೆ. ಈ ಮರಗಳ ಬೇರು ಅತ್ಯಂತ ಪೊಳ್ಳಾಗಿದ್ದು, ಸಣ್ಣಗಾಳಿ ಬೀಸಿದರೂ ಬೀಳುತ್ತವೆ. ಇಂತಹ ಮರಗಳನ್ನು ಸ್ವತಃ ಅರಣ್ಯ ಇಲಾಖೆಯೇ ರಸ್ತೆಬದಿಯಲ್ಲಿ ಅರಣ್ಯೀಕರಣ ಮಾಡುವುದಿಲ್ಲ. ಆದರೆ, ಹಿಂದೆ ನಗರ ಸುಂದರವಾಗಿ ಕಾಣಲಿ ಎಂಬ ಕಾರಣಕ್ಕೆ ರಸ್ತೆ ಬದಿಯಲ್ಲಿಈ ಗಿಡಗಳನ್ನು ನೆಡಲಾಗಿದೆ. ಈ ರೀತಿಯ ಮರಗಳನ್ನು ಉದ್ಯಾನದಲ್ಲಿ, ಇಲ್ಲವೆ ಜನರ ಸಂಚಾರವಿಲ್ಲದ ಜಾಗದಲ್ಲಿ ನೆಡುವುದು ಸೂಕ್ತ,'' ಎಂಬುದು ಪರಿಸರ ಆಸಕ್ತರ ಅಭಿಪ್ರಾಯ.

# ಬ್ರಾಹ್ಮಣ ಸಮಾಜದ ಯುವ ಸಬಲೀಕರಣಕ್ಕೆ ಹೊಸ ದಿಕ್ಸೂಚಿ

## ಮಂಡ್ಯದಲ್ಲಿ ಅದ್ದೂರಿ ವಿಪ್ರೋತ್ಸವ 2026 : ಸಮಾಜದ ಏಕತೆ, ಸಂಸ್ಕೃತಿ, ಯುವ ಸಬಲೀಕರಣಕ್ಕೆ ಒತ್ತು

• ಉದಯವಾಹಿನಿ, ಮಂಡ್ಯ

ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘ , ಮಂಡ್ಯ ಜಿಲ್ಲೆ ಇವರ ವತಿಯಿಂದ ಮಂಡ್ಯ ಜಿಲ್ಲಾ ಗಾಯತ್ರಿ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ ''ವಿಪ್ರೋತ್ಸವ-2026'' ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ಹಾಗೂ ಯಶಸ್ವಿಯಾಗಿ ನೆರವೇರಿತು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ವಿಪ್ರ ಬಂಧುಗಳು, ಮಹಿಳೆಯರು, ಯುವಕರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.

### ಬ್ರಹ್ಮ ಉದ್ಯೋಗ ಯೋಜನೆಗಳ ವಿವರಣೆ

**ಯುವಕರ ಸಬಲೀಕರಣಕ್ಕಾಗಿ ಆಯೋಜಿಸಲಾಗುತ್ತಿರುವ ಸ್ಟಾರ್ಟ್‌ಅಪ್ ಸಮಾವೇಶ, ಉದ್ಯೋಗ ಮೇಳ ಹಾಗೂ ಬ್ರಹ್ಮ ಉದ್ಯೋಗ ಯೋಜನೆಗಳ ಕುರಿತು ವಿವರಿಸಿದರು. ಯುವಜನತೆಗೆ ಉದ್ಯೋಗಾವಕಾಶಗಳು, ಸ್ವಯಂ ಉದ್ಯಮ, ವೃತ್ತಿ ಮಾರ್ಗದರ್ಶನ ಒದಗಿಸುವ ನಿಟ್ಟಿನಲ್ಲಿ ಸಂಘವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.**

ಕಾರ್ಯಕ್ರಮವನ್ನು ABBMS ರಾಜ್ಯಾಧ್ಯಕ್ಷರಾದ ಜಿ.ಆರ್. ಪ್ರದೀಪ್ ಅವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.


ಉದಯವಾಹಿನಿ ಚಿತ್ರ

ಬಳಿಕ ಮಾತನಾಡಿದ ಅವರು, ಬ್ರಾಹ್ಮಣ ಸಮಾಜವು ಸಂಘಟಿತವಾಗಿ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಇನ್ನಷ್ಟು ಬಲಿಷ್ಠವಾಗಬೇಕಾಗಿದೆ ಎಂದು ತಿಳಿಸಿದರು. ಯುವಪೀಳಿಗೆಯಲ್ಲಿ ಸಂಸ್ಕಾರ, ವೇದಪಾರಂಪರ್ಯ ಹಾಗೂ ಭಾರತೀಯ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಸಮಾಜದ ಏಕತೆ, ಸಹಕಾರ ಮತ್ತು ಸೇವಾಭಾವದ ಮೂಲಕ ಸಂಘಟನೆಯನ್ನು ಇನ್ನಷ್ಟು ವಿಸ್ತರಿಸುವ ಗುರಿಯನ್ನು ABBMS ಹೊಂದಿದೆ ಎಂದು ತಿಳಿಸಿದರು. ABBMS ಮಂಡ್ಯ ಜಿಲ್ಲಾಧ್ಯಕ್ಷರಾದ ಶ್ರೀಪತಿ ಭಾರಧ್ವಾಜ್ ಮಾತನಾಡಿದ ಅವರು ಪ್ರಾಸ್ತಾವಿಕ ಭಾಷಣ ಮಾಡಿ, ಸಂಘದ ವಿವಿಧ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದರು.

### ಬ್ರಾಹ್ಮಣರಿಂದ ಬ್ರಾಹ್ಮಣರಿಗಾಗಿ ಬ್ರಾಹ್ಮಣರಿಗೋಸ್ಕರ

**ಬ್ರಾಹ್ಮಣರಿಂದ ಬ್ರಾಹ್ಮಣರಿಗಾಗಿ ಬ್ರಾಹ್ಮಣರಿಗೋಸ್ಕರ ಎಂಬ ಧ್ಯೇಯದೊಂದಿಗೆ ನಡೆದ ಈ ವಿಶೇಷ ಕಾರ್ಯಕ್ರಮದಲ್ಲಿ ವೇ.ಬ್ರ. ಶ್ರೀ ಅನಂತನಾರಾಯಣ ಶಾಸ್ತ್ರಿ, ಶ್ರೀಮತಿ ಪ್ರೇಮ ರಾಮಚಂದ್ರ ಹಂದೆ ಅವರಿಗೆ ಭಾರ್ಗವ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಧಾರ್ಮಿಕ, ಸಾಮಾಜಿಕ ಹಾಗೂ ಉದ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಸಭಿಕರು ಭಾರೀ ಕರತಾಡನದ ಮೂಲಕ ಗೌರವ ಸೂಚಿಸಿದರು.**

ಬ್ರಾಹ್ಮಣ ಸಮಾಜದ ಏಕತೆ, ಯುವಕರ ಭಾಗವಹಿಸುವಿಕೆ, ಮಹಿಳಾ ಸಬಲೀಕರಣ, ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ಸಂಘವು ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸಮಾಜದ ಹಿತ, ಅಭಿವೃದ್ಧಿಗಾಗಿ ಎಲ್ಲರೂ ಒಂದಾಗಿ ಕೈಜೋಡಿಸುವ ಅಗತ್ಯವಿದೆ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬೆಳ್ಳೂರು ಶಿವರಾಂ, ಸದಾಶಿವ ಭಟ್ ಹಾಗೂ ಮಮತಾ ರಮೇಶ್ ಅವರು ಸಮಾಜದಲ್ಲಿ ಪರಸ್ಪರ ಸಹಕಾರ, ಧಾರ್ಮಿಕ ಮೌಲ್ಯಗಳ ಉಳಿವು, ಮಹಿಳಾ ಸಬಲೀಕರಣ ಹಾಗೂ ಭಾರತೀಯ ಸಂಸ್ಕೃತಿಯ ಸಂರಕ್ಷಣೆ ಕುರಿತು ಮಾತನಾಡಿದರು. ರಾಷ್ಟ್ರೀಯ ಮಟ್ಟದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ABBMS ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿಶ್ವನಾಥ ಜೋಶಿ ಅವರು ಸಂಘದ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ದೇಶದ 22 ರಾಜ್ಯಗಳಲ್ಲಿ ಸಂಘಟನೆಯ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಸಮಾಜದ ಏಕತೆ ಮತ್ತು ಅಭಿವೃದ್ಧಿಗೆ ಸಂಘಟನೆ ನಿರಂತರವಾಗಿ ಶ್ರಮಿಸುತ್ತಿದೆ ಎಂದು ಹೇಳಿದರು.

## ಅಂತರಾಳದಿಂದ.. EDITORIAL

# ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ: ಜನಸಾಮಾನ್ಯರ ಬದುಕಿಗೆ ಹೊರೆ



ಇಂಧನ ಬಳಕೆ ಕಡಿಮೆ ಮಾಡುವುದು ಸೇರಿದಂತೆ ಮಿತವ್ಯಯದ ವಿವಿಧ ಕ್ರಮಗಳನ್ನು ಪಾಲಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶವಾಸಿಗಳಿಗೆ ಕರೆ ನೀಡಿದ ಕೆಲವೇ ದಿನಗಳಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ಬೆಲೆ ಹೆಚ್ಚಿಸಲಾಗಿದೆ. ಪೆಟ್ರೋಲ್ ಹಾಗೂ ಡೀಸೆಲ್‌ನ ಮಾರಾಟ ಬೆಲೆಯಲ್ಲಿ ಲೀಟರ್‌ಗೆ ತಲಾ 3ರಷ್ಟು ಹೆಚ್ಚಳವಾಗಿದೆ. ಇದರೊಂದಿಗೆ, ನಾಲ್ಕು ವರ್ಷಗಳ ನಂತರದಲ್ಲಿ ಇದೇ ಮೊದಲ ಬಾರಿಗೆ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಆಗಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ಕಚ್ಚಾತೈಲದ ಬೆಲೆಯಲ್ಲಿ ಆಗಿರುವ ಹೆಚ್ಚಳದ ಹೊರೆಯನ್ನು ಸರಿದೂಗಿಸಿಕೊಳ್ಳಲು ದೇಶದ ಮಾರುಕಟ್ಟೆಯಲ್ಲಿ ಈ ಏರಿಕೆ ಮಾಡಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಕಚ್ಚಾತೈಲದ ಬೆಲೆ ಏರಿಕೆಯಿಂದ ಆಗುವ ನಷ್ಟವನ್ನು ತುಸುಮಟ್ಟಿಗೆ ತಗ್ಗಿಸುವ ಉದ್ದೇಶದಿಂದ ಪೆಟ್ರೋಲ್, ಡೀಸೆಲ್ ಮೇಲಿನ ವಿಶೇಷ ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರವು ಮಾರ್ಚ್‌ನಲ್ಲಿ 10ರಷ್ಟು ತಗ್ಗಿಸಿದೆ. ಈ ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುವುದು ಅನಿವಾರ್ಯವಾಗಿತ್ತು ಎನ್ನುವಂತೆ ಕಾಣಿಸುತ್ತಿದ್ದರೂ, ಪಶ್ಚಿಮ ಬಂಗಾಳ ಹಾಗೂ ಇತರ ಕೆಲವು ವಿಧಾನಸಭೆಗಳಿಗೆ ನಡೆದ ಚುನಾವಣೆಯು ಬೆಲೆ ಹೆಚ್ಚಳವನ್ನು ಮುಂದೂಡುವಂತೆ ಮಾಡಿತ್ತು ಎನ್ನುವುದನ್ನು ಗಮನಿಸಬೇಕು. ಅಂದರೆ, ಬೆಲೆ ಏರಿಕೆಯು ಹಣಕಾಸಿಗೆ ಎಷ್ಟರಮಟ್ಟಿಗೆ ಸಂಬಂಧಿಸಿದೆಯೋ ಅಷ್ಟೇ ಪ್ರಮಾಣದಲ್ಲಿ ರಾಜಕಾರಣದ ಜೊತೆಗೂ ಬೆಸೆದುಕೊಂಡಿದೆ. ಇಂಧನ ಬೆಲೆ ಏರಿಕೆಯಿಂದ ಆಗುವ ಆರ್ಥಿಕ ಆಘಾತದ ಪರಿಣಾಮ ಕಡಿಮೆ ಇರಬೇಕು ಎಂದಾದರೆ, ಬೆಲೆ ಹೆಚ್ಚಳವು ಸರಿಯಾದ ಸಮಯಕ್ಕೆ ಆಗಬೇಕು; ನಿರ್ಧಾರಗಳು ಪಾರದರ್ಶಕವಾಗಿ ಆಗಬೇಕು.


> **ಇಂಧನ ಬೆಲೆ ಏರಿಕೆಯ ಪರಿಣಾಮವು ದೇಶದ ಅರ್ಥ ವ್ಯವಸ್ಥೆಯ ಎಲ್ಲ ಕ್ಷೇತ್ರಗಳನ್ನೂ ಪ್ರಭಾವಿಸಲಿದೆ, ಇದುವರೆಗೆ ನಿಯಂತ್ರಣದಲ್ಲಿ ಇದ್ದ ಹಣದುಬ್ಬರ ಪ್ರಮಾಣ ಹೆಚ್ಚಾಗುವುದಕ್ಕೆ ಕಾರಣವಾಗಲಿದೆ.**

ಕಂಪನಿಗಳಿಗೆ ಆಗುತ್ತಿರುವ ನಷ್ಟವು ಬೆಲೆ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಲಾಗಿದೆ. ಕಚ್ಚಾತೈಲದ ಬೆಲೆಯು ಬ್ಯಾರಲ್ ಒಂದಕ್ಕೆ 100 ಡಾಲರ್ ಮಟ್ಟದಲ್ಲಿ ಇದ್ದಾಗ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪ್ರತಿನಿತ್ಯ ಒಟ್ಟು 1,000 ಕೋಟಿ ನಷ್ಟ ಅನುಭವಿಸುತ್ತಿದ್ದವು ಎಂದು ಅಂದಾಜಿಸಲಾಗಿತ್ತು. ಈಗ ಆಗಿರುವ ಏರಿಕೆಯು ಕಂಪನಿಗಳಿಗೆ ಆಗುತ್ತಿರುವ ನಷ್ಟವನ್ನು ಪೂರ್ತಿಯಾಗಿ ಭರಿಸುವುದಿಲ್ಲ ಎನ್ನಲಾಗಿದೆ. ಅಂದರೆ, ಮುಂದಿನ ದಿನಗಳಲ್ಲಿ ಇಂಧನ ಬೆಲೆಯಲ್ಲಿ ಇನ್ನಷ್ಟು ಏರಿಕೆ ಆಗಲೂಬಹುದು. ಯುದ್ಧವು ತಕ್ಷಣಕ್ಕೆ ಕೊನೆಗೊಂಡರೂ, ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ಪೂರೈಕೆ ವ್ಯವಸ್ಥೆಯು ಮುಂದಿನ ಕೆಲವು ತಿಂಗಳುಗಳವರೆಗೆ ಅಸ್ಥಿರವಾಗಿರುವ ಸಾಧ್ಯತೆ ಇದೆ. ಹೀಗಾಗಿ ಇಂಧನ ಬೆಲೆಯು ಈ ವರ್ಷದುದ್ದಕ್ಕೂ ಹೆಚ್ಚಿನ ಮಟ್ಟದಲ್ಲಿ ಉಳಿಯಬಹುದು. ರಷ್ಯಾದಿಂದ ಭಾರತವು ಇಂಧನ ಆಮದು ಮಾಡಿಕೊಳ್ಳುವ ಸಾಧ್ಯತೆ ಈಗ ಅಮೆರಿಕ ರೂಪಿಸುವ ನೀತಿಗಳು, ಅದು ಹೇರುವ ಒತ್ತಡವನ್ನು ಆಧರಿಸಿದೆ. ಹಾಗಾಗಿ, ಅಲ್ಲಿಂದ ಇಂಧನ ಸಿಗುವ ಬಗ್ಗೆ ಖಾತರಿ ಇಲ್ಲ.

ಇಂಧನ ಬೆಲೆ ಏರಿಕೆಯ ಪರಿಣಾಮವು ದೇಶದ ಅರ್ಥ ವ್ಯವಸ್ಥೆಯ ಎಲ್ಲಾ ಕ್ಷೇತ್ರಗಳನ್ನೂ ಪ್ರಭಾವಿಸಲಿದೆ, ಇದುವರೆಗೆ ನಿಯಂತ್ರಣದಲ್ಲಿ ಇದ್ದ ಹಣದುಬ್ಬರ ಪ್ರಮಾಣ ಹೆಚ್ಚಾಗುವುದಕ್ಕೆ ಕಾರಣವಾಗಲಿದೆ. ಹಾಗೆ ನೋಡಿದರೆ, ಇಂಧನ ಬೆಲೆ ಏರಿಕೆಯ ಪರಿಣಾಮವು ಈಗಾಗಲೇ ಕಾಣಿಸಿಕೊಂಡಿದೆ. ಎಲ್ಲ ವಲಯಗಳಲ್ಲಿಯೂ ತಯಾರಿಕಾ ವೆಚ್ಚವು ಜಾಸ್ತಿ ಆಗಿದೆ.

ವಿವಿಧೆಡೆ ಸಾರಿಗೆ ಕ್ಷೇತ್ರಗಳ ಕಂಪನಿಗಳು ಪ್ರಯಾಣ ವೆಚ್ಚವನ್ನು ಹೆಚ್ಚು ಮಾಡಿವೆ. ಹಲವು ಉದ್ಯಮಗಳು ಬೆಲೆ ಹೆಚ್ಚಳದ ಪರಿಣಾಮವನ್ನು ಗ್ರಾಹಕರ ಮೇಲೆ ವರ್ಗಾಯಿಸಲು ಆರಂಭಿಸಿವೆ. ಗ್ರಾಹಕ ಬೆಲೆ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರ ಲೆಕ್ಕ ಹಾಕುವಾಗ ಇಂಧನಕ್ಕೆ ಗಣನೀಯ ಪ್ರಾತಿನಿಧ್ಯ ಇರುತ್ತದೆಯಾದ ಕಾರಣದಿಂದಾಗಿ, ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಜಾಸ್ತಿ ಆಗಬಹುದು. ವಾರ್ಷಿಕ ಹಣದುಬ್ಬರ ಪ್ರಮಾಣವು ಇಂಧನ ಬೆಲೆ ಏರಿಕೆಯ ಕಾರಣದಿಂದಾಗಿ ಶೇ 0.25ರಷ್ಟು ಹೆಚ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಆ ರೀತಿ ಆದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟಕ್ಕಿಂತ ಜಾಸ್ತಿ ಆಗಬಹುದು. ಆಗ ಆರ್‌ಬಿಐ ಬಡ್ಡಿ ದರವನ್ನು ಹೆಚ್ಚಿಸಲೂಬಹುದು. ಅಂಕಿ-ಅಂಶಗಳನ್ನು ಬದಿಗಿರಿಸಿ ನೋಡಿದರೂ, ಬೆಲೆ ಏರಿಕೆಯು ಜನಸಾಮಾನ್ಯರ ನಿತ್ಯದ ವೆಚ್ಚಗಳ ಮೇಲೆ ಪರಿಣಾಮ ಬೀರುವುದು ಖಚಿತ.

# ರಾಮಾಯಣ



**ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು ವಾಪಸಾದದು**

## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

ಅದೆಂದಿಗೂ ನಿಜವಾಗದು. ಇದ್ದದ್ದನ್ನು ತಿಂದು ಬದುಕಬೇಕೇ ಹೊರತು ಇಲ್ಲದುದನ್ನು ತಿಂದು ಬಾಳಿದವರುಂಟೇ? ಆದ್ದರಿಂದ ವನಿತಾಶಿರೋಮಣಿಯೇ, ನನ್ನ ಮಾತಿಗೆ ಒಪ್ಪಿಗೆಯಿತ್ತು ಮನ್ಮಥೋತ್ಸವದಿಂದ ಆನಂದಗೊಳಿಸಿ ನಿರಾಳವಾಗಿ ಬದುಕು'' ಎಂದು ಬಾಯಿಗೆ ಬಂದುದನ್ನು ಹೇಳುತ್ತ ರಾವಣನು ಜಾನಕಿಯ ಮನವೊಲಿಸಲು ಶತಪ್ರಯತ್ನ ನಡೆಸಿದ.

ಮಂದಮತಿಯಾದ ರಕ್ಕಸರೊಡೆಯನು ಆಡಿದ ಮಾತುಗಳನ್ನು ಕೇಳುತ್ತ ಕೋಪದಿಂದ ಕಣ್ಣುಗಳಲ್ಲಿ ಕಾಲಾಗ್ನಿಯಂತೆ ಕಿಡಿಗಳನ್ನುಗುಳುತ್ತ. ನಿಟ್ಟುಸಿರು ಬಿಡುತ್ತ, ದೇವವಂದಿತೆಯಾದ ಧರಾಜಾತೆಯು ಕೈಯಲ್ಲಿ ಒಂದು ಹುಲ್ಲುಕಡ್ಡಿಯನ್ನು ಹಿಡಿದುಕೊಂಡು ಆ ಅಲ್ಪಾಯುಷಿಯೊಡನೆ ಪತಿವ್ರತೆಯರ ಧೃತಿ ಮತಿ ನಿರ್ಭೀತಿಗಳಿಂದ ಹೀಗೆ ನುಡಿದಳು: ''ನಿಜವಾಗಿ ರಾಜನೆನ್ನಿಸಿಕೊಳ್ಳುವವನಲ್ಲಿ ಇಂದ್ರ ಮೊದಲಾದ ದಿಕ್ಪಾಲಕರ ಅಂಶವು ಸೇರಿರುತ್ತದೆ, ಸಕಲಧರ್ಮಸ್ಥಿತಿಯೂ ಅಳವಟ್ಟಿರುತ್ತದೆ; ಅಂತಹವನು ಧರ್ಮಪರಿಮಾಡುತ್ತ, ಪಾತಕವನ್ನು ತೊಡೆದು ಸತ್ಕೀರ್ತಿ ಹಾಗೂ ಪರಗತಿಯನ್ನು ಸಂಪಾದಿಸಬೇಕು. ತನ್ನ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುತ್ತ, ಸೂಕ್ಷ್ಮಮತಿಯಿಂದ ಧರ್ಮವು ಹೆಚ್ಚುವಂತೆ ಪೊರೆಯುತ್ತ, ಘನಚಾರಿತ್ರನೆನಿಸಿದ ರಾಜನು ಅತ್ಯುನ್ನತವಾದ ಕೀರ್ತಿಯನ್ನು ಗಳಿಸುತ್ತಾನೆ. ಸಪ್ತವ್ಯಸನಗಳಿಂದ ಕೂಡಿ, ಕೆಟ್ಟವರ ಸಹವಾಸದಲ್ಲಿರುತ್ತ, ಲೋಲುಪನಾಗಿ, ಹಿರಿಯರು ಕೋಪಗೊಳ್ಳುವಂತೆ ಆಳುವವನ ಆಯುಸ್ಸು ಕೀರ್ತಿ ಬಲ ಸಂಪತ್ತುಗಳೆಲ್ಲ ಕುಸಿದುಹೋಗುತ್ತವೆ, ಅಂತಹವನಿಂದ ಲೇಸು ಉಂಟಾದೀತೇ? ಈ ಸಿರಿಯನ್ನು, ಬಲ ಆಯುಸ್ಸು ಕೀರ್ತಿಗಳನ್ನು ಗಳಿಸಲು ನೀನು ಎಂಥ ತಪಸ್ಸು ಮಾಡಿದೆಯೋ, ಇಂದ್ರಾದಿಗಳ ಮಾನ್ಯತೆಯನ್ನು ಎಷ್ಟು ಸಂಪಾದಿಸಿದೆಯೋ; ಆದರೆ ಈ ಪರಿಯ ಪರಸ್ತ್ರೀವ್ಯಾಮೋಹದಿಂದ ಇಂತಹ ಮಾತುಗಳನ್ನಾಡಿ ನೀನು ಅವನ್ನೆಲ್ಲ ಕಳೆದುಕೊಳ್ಳಲು ಬಯಸುತ್ತಿದ್ದೀಯೆ. ಇತರರ ಹೆಂಡಂದಿರನ್ನು ಬಯಸುವವರಿಗೆ ದುಷ್ಕೀರ್ತಿಯುಂಟಾಗುವುದಲ್ಲದೆ, ತೇಜಸ್ಸು ಬಲಗಳು ಉಡುಗಿ, ವಂಶವೇ ನಾಶವಾಗುತ್ತದೆ. ನೀನೊಬ್ಬನು ಮಾಡುವ ಪಾಪದಿಂದ ನಿನ್ನ ನಗರ, ಕುಲಗೋತ್ರಗಳು ನಿರ್ನಾಮವಾಗುತ್ತವೆ, ನೀನಂತೂ ನರಕಕ್ಕೆ ಇಳಿಯುತ್ತೀಯೆ. ನಿನ್ನ ಬಲಪೌರುಷಗಳ ಬಗ್ಗೆ ಬೊಗಳುತ್ತಿದ್ದೀಯಲ್ಲ, ಆದರೆ ಕಾಡಿನಲ್ಲಿ ಸನ್ಯಾಸಿವೇಷದಲ್ಲಿ ಬಂದು ರಾಮಲಕ್ಷ್ಮಣರಿಲ್ಲದಾಗ ಕಳ್ಳತನದಿಂದ ಆಕಾಶಮಾರ್ಗದಲ್ಲಿ ನನ್ನನ್ನು ಹೊತ್ತು ತಂದೆ ತಾನೇ!

ವಿಷವನ್ನೇ ಅಮೃತವೆಂದು ಭಾವಿಸಿಕೊಂಡಿರುವ ಮತಿಹೀನ ನೀನು. ಕೇಳಲವೋ, ನರಿಯು ಸಿಂಹಕ್ಕೆ ಸಮನಾಗುವುದೇ? ಕೀಳು ಹಕ್ಕಿಯು ಗರುಡನಿಗೆ ಸಾಟಿಯಾಗಬಲ್ಲುದೇ? ನಾಯಿಗಳು ಶರಭಗಳಿಗೆ ಎಣೆಯೇ? ನೀನು ಹೆಂಡದ ಅಮಲಿನಿಂದ ಸೊಕ್ಕಿ ಏನೇನೋ ಒದರುತ್ತಿದ್ದೀಯೆ. ಎಂದೆಂದೂ ದೊರೆಯದುದನ್ನು ಬಯಸಿ ನೀನು ಕೆಡುತ್ತೀಯೆ!

''ಸೂರ್ಯವಂಶೋದ್ಭವನ ಬಾಣದ ಹೊಡೆತಕ್ಕೆ ಸಿಕ್ಕಿ ದುರುಳ ರಕ್ಕಸರೆಲ್ಲರೂ ತಲೆ ಕಾಲುಗಳನ್ನು ಹರಿದುಕೊಂಡು ನೆಲದಲ್ಲಿ ಬಿದ್ದು ಒದ್ದಾಡುತ್ತಿರಲು, ಅವರ ಹೆಂಡಂದಿರು ತಲೆ ಕೆದರಿಕೊಂಡು ಗೋಳಿಡುವುದನ್ನೂ, ಮುಳ್ಳುಮುತ್ತುಗವು ಹೂಬಿಟ್ಟಂತೆ ನಿನ್ನ ಮೈಯೆಲ್ಲ ಗಾಯದಿಂದ ಕೂಡಿ ರಕ್ತವು ಹರಿಯುವುದನ್ನೂ ನಾನು ಮುಂಗಾಣುತ್ತಿದ್ದೇನೆ.

ಮುಂದುವರಿಯುವುದು...

# ಅನಿಕಾ - ಐಶಾನಿ ಕಲಾವಿದೆದ್ವಯರ ಮನಮೋಹಕ ನೃತ್ಯಾರ್ಪಣೆ





**ಕಲಾ ಸಾಹಿತ್ಯ**

**ವೈ.ಕೆ. ಸಂಧ್ಯಾ ಶರ್ಮ**
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಕು. ಅನಿಕಾ ನಟ್ಟಮ್ಮೆ ಮತ್ತು ಕು. ಐಶನಿ ಕಾಮತ್ ಉದಯೋನ್ಮುಖ ಭರತನಾಟ್ಯ ಕಲಾವಿದೆಯರಿಬ್ಬರು, ಅಮೆರಿಕೆಯಲ್ಲಿದ್ದರೂ ಭಾರತೀಯ ಸಂಸ್ಕೃತಿಯ ಮೇಲೆ ಅಪಾರ ಒಲವುಳ್ಳ ಇವರು, ಅಮೇರಿಕಾದ ಒಹಾಯೋ ವೆಸ್ಟ್ ಚೆಸ್ಟರ್ನಲ್ಲಿರುವ 'ನೃತ್ಯಾರ್ಪಣ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್'- ಖ್ಯಾತ ನೃತ್ಯಸಂಸ್ಥೆಯ ಹೆಸರಾಂತ ನೃತ್ಯಗುರು ಮತ್ತು ನೃತ್ಯಕಲಾವಿದೆ - ಸಂಯೋಜಕಿಯಾಗಿರುವ ಶ್ರೀಮತಿ ಅನುಪಮ ರಾವ್ ಮಿರ್ಲೆ ಅವರ ನುರಿತ ಗರಡಿಯಲ್ಲಿ ಕಳೆದ 14 ವರ್ಷಗಳಿಂದ ಬಹು ಬದ್ಧತೆಯಿಂದ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಈಗಾಗಲೇ ಇವರಿಬ್ಬರೂ ಯಶಸ್ವಿಯಾಗಿ ತಮ್ಮ ರಂಗಪ್ರವೇಶಗಳನ್ನು ಪೂರೈಸಿಕೊಂಡಿದ್ದು, ಇಬ್ಬರೂ ಜೊತೆಯಾಗಿ ಹಲವಾರು ವೇದಿಕೆಗಳ ಮೇಲೆ ಜುಗಲ್ಬಂದಿ ಪ್ರದರ್ಶನಗಳನ್ನು ನೀಡುತ್ತಿರುವ ಈ ಇಬ್ಬರೂ ಬಹುಮುಖ ಪ್ರತಿಭೆಗಳು. ಈ ಜೋಡಿ ಇದೀಗ ದಿ. 23 ಶನಿವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ವಾಡಿಯಾ ರಸ್ತೆಯಲ್ಲಿರುವ ದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ತಮ್ಮ ಭರತನಾಟ್ಯದ 'ಸಮರ್ಪಣಾ' ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ. ಅವರ ಮನಮೋಹಕ ಕಲಾನೈಪುಣ್ಯವನ್ನು ವೀಕ್ಷಿಸಲು ಎಲ್ಲ ಕಲಾರಸಿಕರಿಗೂ ಹಾರ್ದಿಕ ಸುಸ್ವಾಗತ.

> **ಮೋಹಕ ಜುಗಲ್ಬಂದಿ ನರ್ತನ**

ಕು, ಅನಿಕಾ ಮತ್ತು ಕು. ಐಶಾನಿಗೆ ನೃತ್ಯ ಅವರ ಬಾಲ್ಯದ ಒಲವು. ಉತ್ತಮ ನೃತ್ಯಗುರುವೆಂದು ಖ್ಯಾತರಾಗಿದ್ದ ಶ್ರೀಮತಿ ಅನುಪಮಾ ಮಿರ್ಲೆ ಅವರ ಬಳಿ ಈಗ 14 ವರ್ಷಗಳ ಹಿಂದೆ ನೃತ್ಯ ಕಲಿಯಲು ಸೇರಿ ರಂಗಪ್ರವೇಶ ನೆರವೇರಿಸಿಕೊಳ್ಳುವವರೆಗೂ ಸತತ ಅಭ್ಯಾಸ ಮಾಡಿ ಪ್ರೇಕ್ಷಕರ ಸಮ್ಮುಖ ತಮ್ಮ ಪ್ರತಿಭಾ ಪ್ರದರ್ಶನ ಮಾಡಿ ಮೆಚ್ಚುಗೆ ಗಳಿಸಿದರು. ಇಬ್ಬರಿಗೂ ನೃತ್ಯ ಬಿಡದ ನಂಟು. ನೃತ್ಯಕ್ಷೇತ್ರದಲ್ಲಿ ಸಾಧನೆ ಮಾಡುವ ಕನಸು. ಶಾಸ್ತ್ರೀಯ ಕಲೆಗಳಲ್ಲಿನ ಅವರ ಸಮರ್ಪಣೆ ಮತ್ತು ಶ್ರೇಷ್ಠತೆಯನ್ನು ಗುರುತಿಸಿ ಒಹಾಯೋ ಆರ್ಟ್ಸ್ ಕೌನ್ಸಿಲ್ ಅವರನ್ನು ಹಲವು ಬಾರಿ 'ಸಾಂಪ್ರದಾಯಿಕ ಕಲೆಗಳ ಅಪ್ರೆಂಟಿಸ್‌ಗಳು' ಎಂದು ಗೌರವಿಸಿದೆ. ಕಲೈಮಾಮಣಿ ಮಧುರೈ ಆರ್. ಮುರಳೀಧರನ್ ಅವರ ಕಾರ್ಯಾಗಾರಗಳಲ್ಲಿ ಪಾಲ್ಗೊಂಡಿದ್ದ ಇವರು ಗಿನ್ನಿಸ್ ವಿಶ್ವ ದಾಖಲೆಯ ಪ್ರಮಾಣಪತ್ರವನ್ನೂ ಪಡೆದಿದ್ದಾರೆ.

ತಮ್ಮ ಗುರುವಿನ ಶಾಲೆಯಾದ 'ನೃತ್ಯಾರ್ಪಣ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್'ನಲ್ಲಿ ತರಗತಿಗಳನ್ನು ನಡೆಸಿಕೊಡುವ ಅವಕಾಶವೂ ಇವರಿಗೆ ಲಭಿಸಿದೆ. ಅನಿಕಾ ಮತ್ತು ಐಶಾನಿ ನೃತ್ಯದಲ್ಲಿ ಹಲವು ಮೈಲಿಗಲ್ಲುಗಳನ್ನು ಜೊತೆಯಾಗಿ ಹಂಚಿಕೊಂಡಿದ್ದರೂ, ಇಬ್ಬರೂ ನೃತ್ಯದ ಹೊರತಾಗಿ ತಮ್ಮದೇ ಆದ ಆಸಕ್ತಿ ಮತ್ತು ಆಶಯಗಳನ್ನು ಬೆಳೆಸಿಕೊಂಡಿದ್ದಾರೆ.

ಕು. ಅನಿಕಾ ಕಳೆದ ಹತ್ತು ವರ್ಷಗಳಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿದ್ದು, ತನ್ನ ಮೊದಲ ಏಕವ್ಯಕ್ತಿ ಗಾಯನ 'ಮಾರ್ಗಂ' ಪ್ರದರ್ಶನವನ್ನು ನೀಡಿರುವ ವೈಶಿಷ್ಟ್ಯ ಇವಳದು. ಗಾಯನದ ಜೊತೆಗೆ ಪಿಯಾನೋ ಮತ್ತು ಕೊಳಲು ನುಡಿಸುವ ಕಲೆಯನ್ನೂ ಇವಳು, ಕರಗತ ಮಾಡಿಕೊಂಡಿದ್ದು, ಬಿಡುವಿನ ವೇಳೆಯಲ್ಲಿ ಹವ್ಯಾಸವಾಗಿ ನೇಲ್ ಆರ್ಟ್, ಅಡುಗೆ ಮಾಡುವುದಲ್ಲದೆ ಅಥ್ಲೇಟಿಕ್ ಆಗಿರುವ ವಿಶೇಷತೆ ಪಡೆದಿದ್ದಾಳೆ. ಪ್ರಸ್ತುತ ಇವಳು ಸಿನ್ಸಿನಟಿ ವಿಶ್ವವಿದ್ಯಾಲಯದಲ್ಲಿ ಹೆಲ್ತ್ ಸೈನ್ಸ್ ವಿಷಯದಲ್ಲಿ ಎರಡನೇ ವರ್ಷದ ವಿದ್ಯಾರ್ಥಿನಿಯಾಗಿ ಅಭ್ಯಾಸ ಮಾಡುತ್ತಿದ್ದಾಳೆ. ನೃತ್ಯಕ್ಷೇತ್ರದಲ್ಲಿ ಅನಿಕಾಳ ಗುರಿಯೆಂದರೆ ಕೇವಲ ಪ್ರದರ್ಶನ ಮತ್ತು ಸ್ಪರ್ಧೆಗಳಿಗೆ ಸೀಮಿತವಾಗದೆ ಶಾಶ್ವತವಾದದ್ದನ್ನು ನಿರ್ಮಿಸಿ, ತನ್ನದೇ ಆದ ಭರತನಾಟ್ಯ ಶಾಲೆ ಅಥವಾ ಕಂಪನಿಯನ್ನು ಸ್ಥಾಪಿಸುವ ಬಯಕೆ ಅವಳದು .

ಕು. ಐಶಾನಿ ಕಾಮತ್ ಸಿನ್ಸಿನಾಟಿ ವಿಶ್ವವಿದ್ಯಾಲಯದಲ್ಲಿ ಆರ್ಕಿಟೆಕ್ಚರಲ್ ಇಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿ ಮೊದಲ ವರ್ಷವನ್ನು ಪೂರೈಸಿದ್ದಾಳೆ. ಅಲ್ಲಿನ ಹಲವಾರು ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ಸಕ್ರಿಯಳಾಗಿದ್ದು, ಮತ್ತು ಮುಂದಿನ ವರ್ಷ 'ಯುಸಿ ಲಯಾ' ತಂಡದ ಪ್ರೊಡಕ್ಷನ್ ಅಧ್ಯಕ್ಷೆಯಾಗಿ ನೇಮಕಗೊಂಡಿದ್ದಾಳೆ.

ಶೈಕ್ಷಣಿಕ ಕೆಲಸಗಳ ನಡುವೆಯೂ ಐಶಾನಿ ತಮ್ಮ ಗುರುವಿನ ಶಾಲೆಯಲ್ಲಿ ಪಾಠ ಮಾಡುವುದು ಅವರಿಗೆ ಕಿರಿಯ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡುವುದರಿಂದ ಅವಳಲ್ಲಿ ಆತ್ಮವಿಶ್ವಾಸ, ಶಿಸ್ತು ಹಾಗೂ ನೃತ್ಯದ ಬಗ್ಗೆ ಪ್ರೀತಿಯನ್ನು ಬೆಳೆಸಿಕೊಳ್ಳಲು ಸಹಾಯಕವಾಗಿದೆ. ಚಿತ್ರಕಲೆ ಮತ್ತು ಡ್ರಾಯಿಂಗ್ ಹವ್ಯಾಸವುಳ್ಳ ಇವಳು, ಕಳೆದ 13 ವರ್ಷಗಳಿಂದ ಪಿಯಾನೋ ನುಡಿಸುತ್ತಾಳೆ. ಭವಿಷ್ಯದಲ್ಲಿ ನೃತ್ಯ ಶಾಲೆ ಸ್ಥಾಪಿಸುವ ಕನಸು ಅವಳದಾಗಿದೆ.

# ಹ್ಯಾಂಟವೈರಸ್ 6 ವರ್ಷಗಳ ಕಾಲ ವೀರ್ಯದಲ್ಲಿ

**ಹ್ಯಾಂಟವೈರಸ್‌ಗಳು ಇಲಿಗಳಿಂದ ಹರಡುವಂತಹ ಕಾಯಿಲೆ. ಜನರು ಸಾಮಾನ್ಯವಾಗಿ ಇಲಿಯ ಮೂತ್ರ, ಮಲ ಅಥವಾ ಲಾಲಾರಸದಿಂದ ಕಲುಷಿತಗೊಂಡ ಕಣಗಳನ್ನು ಉಸಿರಾಡುವ ಮೂಲಕ ಸೋಂಕಿಗೆ ಒಳಗಾಗುತ್ತಾರೆ. ವೈರಸ್ ಶ್ವಾಸಕೋಶವನ್ನು ತಲುಪಿದ ನಂತರ, ಅದು ಬೇಗನೆ ಕೆಟ್ಟದಾಗಬಹುದು, ಹ್ಯಾಂಟವೈರಸ್ ಪಲ್ಮನರಿ ಸಿಂಡ್ರೋಮ್ ಆಗಿ ಬದಲಾಗಬಹುದು.**

ಯಾವುದೇ ಇತರ ಜ್ವರದಂತೆ ಇದರ ಲಕ್ಷಣಗಳೂ ಪ್ರಾರಂಭವಾಗುತ್ತವೆ. ಜ್ವರ, ಸ್ನಾಯು ನೋವು, ಬಳಲಿಕೆ, ವಾಕರಿಕೆ, ತಲೆನೋವು, ತೀವ್ರತರವಾದ ಪ್ರಕರಣಗಳಲ್ಲಿ, ಉಸಿರಾಟದ ತೊಂದರೆ ಮತ್ತು ಶ್ವಾಸಕೋಶದ ವೈಫಲ್ಯಕ್ಕೆ ಕಾರಣವಾಗುತ್ತವೆ. ಹೆಚ್ಚಿನ ತಳಿಗಳು ವ್ಯಕ್ತಿಯಿಂದ ವ್ಯಕ್ತಿಗೆ ಹರಡುವುದಿಲ್ಲ. ಆದರೆ ಮುಖ್ಯವಾಗಿ ಚಿಲಿ ಮತ್ತು ಅರ್ಜೆಂಟೀನಾದಲ್ಲಿ ಕಂಡುಬರುವ ಆಂಡಿಸ್ ವೈರಸ್ ಅಪರೂಪದ್ದಾಗಿದ್ದು. ವಿಜ್ಞಾನಿಗಳು ಮಾನವ ಹರಡುವಿಕೆಯನ್ನು ಗಮನಿಸಿದ್ದಾರೆ, ಹೆಚ್ಚಾಗಿ ಕುಟುಂಬ ಅಥವಾ ಪಾಲುದಾರರಂತಹ ನಿಕಟ ಸಂಪರ್ಕಗಳ ನಡುವೆ ಇದು ಬೇಗನೇ ಹರಡುತ್ತದೆ.

ದೇಹದ ಹೊರಗೆ, ಹ್ಯಾಂಟವೈರಸ್ ದಿನಗಳವರೆಗೆ ಬದುಕಬಲ್ಲದು, ವಿಶೇಷವಾಗಿ ತಂಪಾದ ಒಳಾಂಗಣ ಪ್ರದೇಶಗಳಲ್ಲಿ, ಇಲಿಗಳ ಹಿಕ್ಕೆಗಳಿಂದ ಕೊಳಕಾಗಿರುತ್ತದೆ. ಪರಿಸ್ಥಿತಿಗಳನ್ನು ಅವಲಂಬಿಸಿ, ಅಮೇರಿಕನ್ ಲಂಗ್ ಅಸೋಸಿಯೇಷನ್ ನಾಲ್ಕು ದಿನಗಳವರೆಗೆ ಹೇಳುತ್ತದೆ.




ಮಾನವರ ಒಳಗೆ, ವಿಷಯಗಳು ಜಟಿಲವಾಗುತ್ತವೆ. ಹೆಚ್ಚಿನವರಿಗೆ, ವೈರಸ್ ಚೇತರಿಸಿಕೊಂಡ ನಂತರ ರಕ್ತ ಮತ್ತು ಶ್ವಾಸಕೋಶದ ಮಾದರಿಗಳಿಂದ ಬೇಗನೆ ಕಣ್ಮರೆಯಾಗುತ್ತದೆ. ಆದರೆ ಹೊಸ ಸಂಶೋಧನೆಯ ಪ್ರಕಾರ, ಆಂಡಿಸ್ ವೈರಸ್ ಜೀನೋಮ್‌ನ ತುಣುಕುಗಳು ಆರಂಭಿಕ ಸೋಂಕಿನ ವರ್ಷಗಳ ನಂತರ ಸಂತಾನೋತ್ಪತ್ತಿ ಅಂಗಾಂಶದಲ್ಲಿ ಉಳಿಯಬಹುದು ಎಂದು ಹೇಳಲಾಗಿದೆ. ದೇಹದಲ್ಲಿ ವೈರಲ್ ಆರ್‌ಎನ್‌ಎ ಇರುವುದು ಸಾಂಕ್ರಾಮಿಕ ಎಂದು ಅರ್ಥವಲ್ಲ ಎಂದು ತಜ್ಞರು ಎಚ್ಚರಿಸುತ್ತಾರೆ. ಸಾಂಕ್ರಾಮಿಕ ವೈರಸ್ ಹೋದ ನಂತರವೂ ಬಹಳಷ್ಟು ರೋಗಗಳು ಆನುವಂಶಿಕ ತುಣುಕುಗಳನ್ನು ಬಿಡುತ್ತವೆ. ಆದರೂ, ಈ ದೀರ್ಘಕಾಲೀನ ವೈರಲ್ ಕುರುಹುಗಳು ಅಪರೂಪದ ಅಥವಾ ವಿಳಂಬವಾದ ಪ್ರಸರಣಕ್ಕೆ ಕಾರಣವಾಗಬಹುದೇ ಎಂದು ಕಂಡುಹಿಡಿಯಲು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

**ವೈರಸ್ ಲೈಂಗಿಕವಾಗಿ ಹರಡಬಹುದೇ?:** ಈಗ, ವಿಜ್ಞಾನಿಗಳು ಅವರು ಆನುವಂಶಿಕ ವಸ್ತುವನ್ನು ಕಂಡುಕೊಂಡಿದ್ದಾರೆ, ಅಗತ್ಯವಾಗಿ ಜೀವಂತ ವೈರಸ್ ಅಲ್ಲ ಎಂದು ಹೇಳಿದ್ದಾರೆ. ಆವಿಷ್ಕಾರವು ಚೇತರಿಸಿಕೊಂಡ ರೋಗಿಗಳು ಸಂಪೂರ್ಣವಾಗಿ ಗುಣಮುಖರಾದ ನಂತರವೂ ದೀರ್ಘಕಾಲದವರೆಗೆ ವೈರಸ್ ಅನ್ನು ಲೈಂಗಿಕವಾಗಿ ಹರಡಬಹುದೇ? ಎನ್ನುವ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ವೃಷಣಗಳು ರೋಗನಿರೋಧಕ-ಸವಲತ್ತು ಕ್ಕೆ ಪ್ರಸಿದ್ಧವಾಗಿವೆ, ಆದ್ದರಿಂದ ಕೆಲವು ವೈರಸ್‌ಗಳು ದೇಹದ ರಕ್ಷಣೆಯಿಂದ ಸುರಕ್ಷಿತವಾಗಿ ಅಲ್ಲಿ ಅಡಗಿಕೊಳ್ಳಬಹುದು. ನಾವು ಇದನ್ನು ಮೊದಲು ಎಬೋಲಾ ಮತ್ತು ಜಿಕಾದೊಂದಿಗೆ ನೋಡಿದ್ದೇವೆ. ಇಲ್ಲಿಯವರೆಗೆ ಯಾವುದೇ ದೃಢೀಕೃತ ಹ್ಯಾಂಟವೈರಸ್ ಲೈಂಗಿಕ ಪ್ರಸರಣಗಳಿಲ್ಲ.

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಡಾ: ಗಿರೀಶ್ ಕಾರ್ನಾಡ್ ರವರ

# 88 ನೇ ವರ್ಷದ ಜನ್ಮಜಯಂತಿ



**ಕಲಾ ಸಾಹಿತ್ಯ**

**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಡಾಕ್ಟರ್: ಗಿರೀಶ್ ಕಾರ್ನಾಡ್ ಅವರು 1938 ಮೇ 19 ರಂದು ಮಹಾರಾಷ್ಟ್ರದ ಮತೇರನ್ ಎಂಬಲ್ಲಿ ಜನಿಸಿದರು. ತಂದೆ ರಘುನಾಥ್ ಕಾರ್ನಾಡ್ ತಾಯಿ ಕೃಷ್ಣಾಬಾಯಿ. ಧಾರವಾಡದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದು ಕರ್ನಾಟಕ ವಿಶ್ವವಿದ್ಯಾಲಯ ವಿದ್ಯಾರ್ಥಿಯಾಗಿ ಪದವೀಧರರಾದರು. ಆ ಬಳಿಕ ಮುಂಬೈ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ನಡೆಸಲು ಪ್ರತಿಷ್ಠಿತ ರೋಡ್ಸ್ ವಿದ್ಯಾರ್ಥಿ ವೇತನ ದೊರೆಯಿತು.


ಆಕ್ಸ್‌ಫರ್ಡ್ ನಲ್ಲಿ ತತ್ವಶಾಸ್ತ್ರ, ರಾಜ್ಯಶಾಸ್ತ್ರ ಹಾಗೂ ಅರ್ಥಶಾಸ್ತ್ರದಲ್ಲಿ ಎಂ ಎ ಪದವಿ ಪಡೆದರು. ನಂತರ ಆಕ್ಸ್‌ಫರ್ಡ್ ಯೂನಿಯನ್ ಸೊಸೈಟಿ ಅಧ್ಯಕ್ಷರಾದರು.

ಭಾರತಕ್ಕೆ ಹಿಂತಿರುಗಿದ ನಂತರ ಮದ್ರಾಸಿನಲ್ಲಿದ್ದ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ನಲ್ಲಿ ಕೆಲಕಾಲ ಮೆನೇಜರ್ ಆಗಿ ಕೆಲಸ ಮಾಡಿ ಇದೇ ವೇಳೆಯಲ್ಲಿ ಮದ್ರಾಸಿನ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಹೆಚ್ಚಿನ ಅನುಭವಗಳಿಸಿದರು. ಇಟಲಿ ರಷ್ಯಾ ಹಾಗೂ ಅಮೆರಿಕ ದೇಶಗಳ ಪ್ರಸಿದ್ಧ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿದ್ದರು. ಕಾರ್ನಾಡರು ಮೊದಲು ಬರೆದ ನಾಟಕ ಮಾನಿಷಾದ ರೇಡಿಯೋ ನಾಟಕವಾಗಿ ಪ್ರಸಾರವಾಯಿತು. ಆ ಬಳಿಕ ಇವರು ಕ್ರಮವಾಗಿ ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನಹುಂಜ , ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಹಾಗೂ ಟಿಪ್ಪು ಸುಲ್ತಾನ್ ಕಂಡ ಕನಸು ಎಂಬ ನಾಟಕಗಳನ್ನು ರಚಿಸಿದರು.

ಕಾರ್ನಾಡ್ ರವರು ಪ್ರತಿಭಾವಂತ ನಾಟಕಕಾರ, ಕಲಾವಿದ, ನಿರ್ದೇಶಕರಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

ಜನಪದ ರಂಗಭೂಮಿಯ ತಂತ್ರಗಳಲ್ಲಿ ಸೃಜನಾತ್ಮಕ ವೈವಿಧ್ಯಗಳನ್ನು ತಂದ ಇವರಿಗೆ ಹೋಮಿ ಬಾಬಾ ಫೆಲೋಷಿಪ್ ದೊರಕಿದೆ. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಭಾರತ ಸರ್ಕಾರ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

> **ಗಿರೀಶ್ ಕಾರ್ನಾಡ್ ರವರು ವೈಚಾರಿಕ, ವೈಜ್ಞಾನಿಕ ಮತ್ತು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಜೀವನವನ್ನು ರೂಪಿಸಿಕೊಂಡು, ಸಕಾರಾತ್ಮಕ ಚಿಂತನೆಯೊಂದಿಗೆ, ಸಾಧಕ-ಬಾದಕಗಳನ್ನು ಅರ್ಥಮಾಡಿಕೊಂಡು ಸ್ವಶಕ್ತಿಯಿಂದ ಬದ್ಧತೆಯಲ್ಲಿ ಬದುಕಿದ ಜೀವ.**



ಸಂಗೀತ ನಾಟಕ ಅಕಾಡೆಮಿಯ ಫೆಲೋ ಎಂಬ ಗೌರವ ಇವರಿಗೆ ಸಂದಿದೆ.ಕರ್ನಾಟಕ ಸರ್ಕಾರ ಗುಬ್ಬಿ ವೀರಣ್ಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಮಧ್ಯಪ್ರದೇಶ ಸರ್ಕಾರ ಕಾಳಿದಾಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ. ಕಾರ್ನಾಡರ ತಲೆದಂಡ ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. 1998 ರಲ್ಲಿ ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ.

ಕನ್ನಡದ ನಾಟಕ ಸಾಹಿತ್ಯ ಪ್ರಕಾರಕ್ಕೆ ಅಮೂಲ್ಯ ಕೊಡುಗೆ ನೀಡಿ, ರಂಗಭೂಮಿ,ಚಲನಚಿತ್ರ ಕ್ಷೇತ್ರಗಳಲ್ಲಿ ಅನನ್ಯಸಾಧನೆ ಮಾಡಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿದ ಗಿರೀಶ್ ಕಾರ್ನಾಡರವರು ಕನ್ನಡಿಗರ ಹೆಮ್ಮೆ ಎನಿಸಿದ್ದಾರೆ.

ಅವರಿಗೆ ಆಡಂಬರಗಳ ಬಗ್ಗೆ ಆಸ್ಥೆ ಇರಲಿಲ್ಲ, ಸನಾತನ ಸಂಪ್ರದಾಯಗಳ ಕುರಿತು ಭ್ರಮೆಗಳಿರಲಿಲ್ಲ,ಸಾವಿನ ನಂತರದ ಸ್ವರ್ಗ-ನರಕಗಳ ಕಲ್ಪನೆಗಳ ಕುರಿತು ನಂಬಿಕೆ ಗಳಿರಲಿಲ್ಲ, ಇರುವವರೆಗೆ ಎಲ್ಲಾ,ಸತ್ತ ಮೇಲೆ ಏನೂ ಇಲ್ಲಾ ಎಂದು ಅರಿತಿದ್ದರು.

ಹಾಗಾಗಿ ಸಾವಿಗೆ ಮುನ್ನವೇ, ಸತ್ತ ನಂತರ ಯಾವುದೇ ಧಾರ್ಮಿಕ ವಿಧಿವಿಧಾನಗಳನ್ನು ಮಾಡಕೂಡದು,ಸತ್ತ ಶವದ ಮೆರವಣಿಗೆ, ವೈಭವೀಕರಣಗಳು ಆಗಕೂಡದು, ಸರ್ಕಾರಿ ಗೌರವಾದರಗಳು ನಡೆಯಕೂಡದು, ಎಂದು ತಮ್ಮ ಮಗನಿಗೆ ಕಟ್ಟಾಜ್ಞೆ ಮಾಡಿ ತಮ್ಮ ಪಾಡಿಗೆ ಅವರು ಜಗದ ಯಾತ್ರೆಯನ್ನು ದಿನಾಂಕ: 10-06-2019 ರಂದು ಮುಗಿಸಿ ಮತ್ತೆ ಮರಳಿ ಬಾರದ ಶೂನ್ಯದತ್ತ ಹೊರಟರು. ಒಬ್ಬ ಮನುಷ್ಯ ಕಲೆಯಾಗಿ ಅರಳಿ, ಸಂಸ್ಕೃತಿಯಾಗಿ ರೂಪ ತೋರಿ,ಕಡೆಗೆ ಸಾಹಿತ್ಯಕವಾಗಿ ಮುಡಿಏರಬೇಕು. ಅಂತಹ ಉತ್ತಮ ಹಾಗೂ ಅತ್ಯುತ್ತಮವಾದ ವ್ಯಕ್ತಿತ್ವವನ್ನುಗಳಿಸಿಕೊಂಡವರ ಪೈಕಿ ಒಬ್ಬರಾಗಿರುತ್ತಾರೆ.

ಸನ್ಮಾನ್ಯರ ಇಂದು 88 ನೇ ವರ್ಷದ ಜನ್ಮ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಿ ಅವರನ್ನು ಸ್ಮರಿಸಿ ನೆನೆಯುತ್ತಾ ಅವರು ಬಿಟ್ಟು ಹೋಗಿರುವ ವೈಚಾರಿಕ, ವೈಜ್ಞಾನಿಕ, ಸೈಧ್ಯಾಂತಿಕ ಹಾಗೂ ಆದರ್ಶ ಮನೋಭಾವಗಳನ್ನ ಕನ್ನಡ ಮನಸ್ಸುಗಳಾದ ನಾವುಗಳು ನಮ್ಮ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡೋಣ.

**ಭಾರತೀಯ ಮಣ್ಣಿನ ಕುಸ್ತಿ ಕೇವಲ ಸ್ನಾಯುಬಲದ ಅಬ್ಬರವಲ್ಲ; ಅದು ದೇಹದ ನಮ್ಯತೆ ಮತ್ತು ಬುದ್ಧಿವಂತಿಕೆಯ ಅಪೂರ್ವ ಸಂಗಮವಾಗಿದೆ. ಗರಡಿ ಮನೆಯ ಅಖಾಡದಲ್ಲಿ ಕೇಸರಿ ಮಣ್ಣಿನ ಸುವಾಸನೆಯ ನಡುವೆ ಜಟ್ಟಿಗಳು ಹೊಡೆಯುವ ಗಿರಕಿ(ಫ್ರೆಂಟ್ ರೋಲ್), ಕೇವಲ ಪ್ರಾಥಮಿಕ ತಾಲೀಮಲ್ಲ; ಅದೊಂದು ಅಗಾಧವಾದ ಶಾರೀರಿಕ ವಿಜ್ಞಾನ. ಒಬ್ಬ ಸಾಧಾರಣ ಕಸರತ್ತುಪಟುವನ್ನು ರಣರಂಗದ ಶೂರನನ್ನಾಗಿ ಪರಿವರ್ತಿಸುವಲ್ಲಿ ಈ ಉರುಳು ಕಲೆಯು ಬಲವಾದ ಅಡಿಪಾಯವಾಗಿ ಕೆಲಸ ಮಾಡುತ್ತದೆ.**

# ಗರಡಿ ಗಿರಕಿ: ಮಲ್ಲರ ಗೆಲುವಿನ ಗುಟ್ಟು



**ಅಂತರಂಗದ ಮಾತು**

**ಡಾ.ಸುಧಾಕರ.ಜಿ. ಲಕ್ಕವಳ್ಳಿ**
ಲೇಖಕರು
ಸಾಮಾಜಿಕ ಚಿಂತಕರು



ಮುಂದಕ್ಕೆ ಮಗುಚುವ ಈ ಅಭ್ಯಾಸವು ಶರೀರದ ಅಕ್ಷಸ್ತಂಭವಾದ ಬೆನ್ನುಮೂಳೆಗೆ ಅದ್ಭುತವಾದ ಸ್ಥಿತಿಸ್ಥಾಪಕತ್ವವನ್ನು ನೀಡುತ್ತದೆ. ಬಿದಿರಿನ ಪಟ್ಟಿಯಂತೆ ಬಾಗುವ ಗುಣವನ್ನು ಬೆನ್ನಿನ ಮೂಳೆಗಳು ಈ ಕಾಯಕದಿಂದ ಮೈಗೂಡಿಸಿಕೊಳ್ಳುತ್ತವೆ. ಇದರಿಂದ ಪ್ರತಿಸ್ಪರ್ಧಿಯ ಯಾವುದೇ ಜಟಿಲ ಬಂಧನಕ್ಕೆ ಸಿಲುಕಿದರೂ, ಕ್ಷಣಾರ್ಧದಲ್ಲಿ ಶರೀರವನ್ನು ತಿರುಗಿಸಿ ಪಾರಾಗುವ ಅಸಾಧಾರಣ ಕಸುವು ಲಭಿಸುತ್ತದೆ.

ಇದು ಶರೀರಕ್ಕೆ ಉಕ್ಕಿನ ಕಾಠಿಣ್ಯದ ಜೊತೆಗೆ ಹತ್ತಿಯ ಮೃದುತ್ವವನ್ನೂ ನೀಡುವ ಚಮತ್ಕಾರ. ಗಿರಕಿ ಹೊಡೆಯುವ ಪ್ರಕ್ರಿಯೆಯು ಮಿದುಳು ಮತ್ತು ನರಮಂಡಲದ ನಡುವೆ ಮಿಂಚಿನ ವೇಗದ ತನ್ಮಯತೆಯನ್ನು ವೃದ್ಧಿಸುತ್ತದೆ. ಶರೀರವು ಗಾಳಿಯಲ್ಲಿ ಉರುಳುವ ಆ ಘಳಿಗೆಯಲ್ಲಿ ಪೈಲ್ವಾನನಿಗೆ ತನ್ನ ಗುರುತ್ವಾಕರ್ಷಣೆಯ ನಿಖರ ಅರಿವು ಉಂಟಾಗುತ್ತದೆ. ಈ ಶಾರೀರಿಕ ಸ್ಥಿರತೆಯು ಎದುರಾಳಿಯನ್ನು ಅಪ್ಪಳಿಸುವಾಗ ಅಥವಾ ರಕ್ಷಣಾತ್ಮಕವಾಗಿ ನೆಲಕ್ಕೆ ಬೇರೂರುವಾಗ ಜಟ್ಟಿಗೆ ಅದಮ್ಯ ಛಲವನ್ನು ದಯಪಾಲಿಸುತ್ತದೆ.

ಸಮರಕಲೆಯಲ್ಲಿ ಪತನದ ಮರ್ಮ ಕರಗತ ಮಾಡಿಕೊಳ್ಳುವುದು ದೊಡ್ಡ ಸವಾಲು. ನಿರಂತರವಾಗಿ ಗಿರಕಿ ನಡೆಸಿದ ಪೈಲ್ವಾನನಿಗೆ ಈ ಕಲೆ ಸಿದ್ಧಿಸಿರುತ್ತದೆ. ಭೂಮಿಗೆ ಅಪ್ಪಳಿಸುವ ಮುನ್ನ ಶರೀರವನ್ನು ಸುರುಳಿ ಸುತ್ತಿಕೊಳ್ಳುವ ಮೂಲಕ ಪೆಟ್ಟಿನ ತೀವ್ರತೆಯನ್ನು ಹಂಚಿಹಾಕಬಹುದು. ಈ ತಂತ್ರವು ಕುತ್ತಿಗೆ ಮತ್ತು ಬೆನ್ನಿಗೆ ಸಂಭವಿಸಬಹುದಾದ ಗಂಭೀರ ಹಾನಿಯನ್ನು ತಪ್ಪಿಸಿ, ಬಿದ್ದ ತಕ್ಷಣವೇ ಸ್ಪ್ರಿಂಗ್‌ನಂತೆ ಮೇಲೆದ್ದು ನಿಲ್ಲುವ ಕೆಚ್ಚನ್ನು ನೀಡುತ್ತದೆ.

ವೈಜ್ಞಾನಿಕವಾಗಿ ಈ ಕ್ರಿಯೆಯು ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಮಿದುಳಿಗೆ ರಕ್ತದ ಹರಿವನ್ನು ಸುಗಮಗೊಳಿಸಿ ಏಕಾಗ್ರತೆಯನ್ನು ತೀಕ್ಷ್ಣಗೊಳಿಸುತ್ತದೆ. ಅಲ್ಲದೆ, ಇದು ಜೀರ್ಣಕ್ರಿಯೆಯನ್ನು ಪ್ರಚೋದಿಸಿ, ಪೈಲ್ವಾನರು ಸೇವಿಸುವ ಸಾತ್ವಿಕ ಆಹಾರವು ಸಮರ್ಪಕವಾಗಿ ಶರೀರದ ಶಕ್ತಿಯಾಗಿ ಪರಿವರ್ತನೆ ಆಗಲು ಸಹಕರಿಸುತ್ತದೆ.

ಹೋರಾಟದಲ್ಲಿ ಬಲಕ್ಕಿಂತಲೂ ಕ್ಷಿಪ್ರತೆಯೇ ವಿಜಯದ ಹಾದಿ. ಅಖಾಡದಲ್ಲಿ ಹರಿಯುವ ಮೀನಿನಂತೆ ಸದಾ ಸಕ್ರಿಯವಾಗಿರಲು ಮತ್ತು ಅನಿರೀಕ್ಷಿತ ದಾಳಿ ನಡೆಸಲು ಈ ಉರುಳು ಕಸರತ್ತು ಮಲ್ಲರಿಗೆ ಅದ್ವಿತೀಯ ಶಕ್ತಿಯನ್ನು ಧಾರೆ ಎರೆಯುತ್ತದೆ.

ನಮ್ಯತೆ, ವೇಗ ಮತ್ತು ರಕ್ಷಣೆಯ ತ್ರಿವೇಣಿ ಸಂಗಮವಾಗಿರುವ ಈ ಕಸರತ್ತು ಜಾಗತಿಕ ಕ್ರೀಡಾ ಲೋಕಕ್ಕೆ ಭಾರತೀಯ ಗರಡಿ ಮನೆಗಳು ನೀಡಿದ ಅನನ್ಯ ಕಾಣಿಕೆ. ಕೆಮ್ಮಣ್ಣಿನೊಂದಿಗೆ ಮಮಕಾರ ಬೆಳೆಸಿಕೊಂಡು ಉರುಳಿದವನು ಮಾತ್ರ, ಅಖಾಡದ ಅಸಲಿ ಮಲ್ಲನಾಗಿ ಎದ್ದು ನಿಲ್ಲಬಲ್ಲ.

### ಒಳಮೀಸಲಾತಿಯಲ್ಲಿ ಮಾದಿಗ ಸಮುದಾಯ ಮತ್ತು ಅದರ ಒಳ ಪಂಗಡಗಳಿಗೆ ಅನ್ಯಾಯವಾಗಿದೆ: ಕಾರಜೋಳ

# ಒಳ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯ, ಉಗ್ರ ರೂಪದ ಹೋರಾಟಕ್ಕೆ ಸಿದ್ದರಾಗಿ

• **ಉದಯವಾಹಿನಿ, ಕಮಲಾಪೂರ**

ಭಾರತ ದೇಶಕ್ಕೆ ಸಂವಿಧಾನ ನೀಡಿದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ನೀಡಿ ದಲಿತರಿಗೆ 10 ವರ್ಷ ಮೀಸಲಾತಿ ಅವಕಾಶ ನೀಡಿದ್ದರು. ಆ ಮೀಸಲಾತಿಯನ್ನು ನಿರಂತರವಾಗಿ ಮುಂದುವರಿಸುವಲ್ಲಿ ಹಸಿರು ಕ್ರಾಂತಿಯ ಪಿತಾಮಹ ಡಾ. ಜಗಜೀವನ್ ರಾಮ್ ಅವರ ಪರಿಶ್ರಮ ಸಾಕಷ್ಟಿದೆ.


ಒಳಮೀಸಲಾತಿಯಲ್ಲಿ ಮಾದಿಗ ಸಮುದಾಯ ಮತ್ತು ಅದರ ಒಳ ಪಂಗಡಗಳಿಗೆ ಅನ್ಯಾಯವಾಗಿದೆ. ನ್ಯಾಯ ಸಿಗಬೇಕೆಂದರೆ ಹೋರಾಟ ಅನಿವಾರ್ಯವಾಗಿದೆ. ಒಳ ಮೀಸಲಾತಿಗಾಗಿ ಸಮಾಜದ ಮುಖಂಡರು ಉಗ್ರರೂಪದ ಹೋರಾಟಕ್ಕೆ ಸಿದ್ದರಾಗಿ ಎಂದು ಸಂಸದ ಗೋವಿಂದ ಕಾರಜೋಳ ಕರೆ ನೀಡಿದರು.

**ಸಂಸದ ಗೋವಿಂದ ಕಾರಜೋಳ ಕರೆ**

ತಾಲ್ಲೂಕಿನ ಆಕೃತಿ ಕಲ್ಯಾಣ ಮಂಟಪದಲ್ಲಿ ದಿ. ಜಿ. ರಾಮಕೃಷ್ಣ ಅವರ ವೇದಿಕೆಯಲ್ಲಿ ಭಾನುವಾರ ತಾಲ್ಲೂಕು ಜಯಂತ್ಯೋತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ನಾನು ಬುದ್ಧ,ಬಸವ,ಅಂಬೇಡ್ಕರ ತತ್ವದಲ್ಲಿ ನಂಬಿಕೆ ಹೊಂದಿದವನು ಸರ್ವರಿಗೂ ಸಮಬಾಳು ಸಮಪಾಲು ತತ್ವದ ಅಡಿಯಲ್ಲಿ ನಂಬಿಕೆ ಇಟ್ಟವನು ನಾವು ಯಾರ ಹಕ್ಕು ಕಸಿಯುತ್ತಿಲ್ಲ ಸಂವಿಧಾನ ಬದ್ಧ ಹಕ್ಕು ಕೇಳುತ್ತಿದ್ದೇವೆ ಎಂದರು.

ನಂತರ ಕೆಪಿಸಿಸಿ ಸದಸ್ಯ ವಿಜಯಕುಮಾರ ರಾಮಕೃಷ್ಣ ಮಾತನಾಡಿ, ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ಧಿ ಪರ ಮನೋಭಾವ ಬೆಳೆಸಿಕೊಳ್ಳೋಣ. ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ಧಿ ಪರ ಮನೋಭಾವ ಬೆಳೆಸಿಕೊಳ್ಳೋಣ. ಸ್ಥಳೀಯವಾಗಿ ದಿವಂಗತ ಜಿ ರಾಮಕೃಷ್ಣ ಅವರ ಅವಧಿಯಲ್ಲಿ ಹಲವಾರು ಬಗೆಯ ಅಭಿವೃದ್ಧಿ ಕಾಮಗಾರಿಗಳು ಮಾಡಿದ್ದು ಸ್ಮರಿಸುತ್ತೇನೆ. ನನಗೆ ಟಿಕೆಟ್ ನೀಡದಿದ್ದರೂ ಕಾಂಗ್ರೇಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ ಎಂದರು. ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ರಾಜ್ಯಾಧ್ಯಕ್ಷ ರವಿ ಬಿರಾದಾರ, ಮಾಜಿ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಮಲ್ಲಿನಾಥ ಪಾಟೀಲ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ವಿಠಲ ಕಾಂಬ್ಳೆ ಅಧ್ಯಕ್ಷತೆ ವಹಿಸಿದ್ದರು. ನಿರಗುಡಿ ಶ್ರೀ ಹವಾ ಮಲ್ಲಿನಾಥ ಮುತ್ಯಾ, ಪ್ರಮುಖರಾದ ಶಿವಶೆಟ್ಟಿ ಪಾಟೀಲ, ಅನೀಲಕುಮಾರ ಬೆಳಕೇರಿ,ಲಿಂಗರಾಜ ತಾರಫೈಲ, ರಾಜು ವಾಡೇಕರ,ಸಿ.ಎ.ಪಾಟೀಲ,ಶ್ಯಾಮ ನಾಟೀಕಾರ, ಗುರುಪಾದಪ್ಪ ಮಾಟೂರ,ತಾಜೋದ್ದಿನ ಪಟೇಲ್, ಅಬ್ದುಲ ಸತ್ತಾರ, ಶಿವಕುಮಾರ ದೊಶೆಟ್ಟಿ, ಸುಖಾನಂದ ಸಿಂಗೆ, ಮಂಜುನಾಥ ನಾಲವಾರಕರ,ದಶರಥ ಕಲಗುರ್ತಿ, ಪ್ರದೀಪ ಭಾವೆ, ನಿಂಗಪ್ಪ ಪ್ರಬುದ್ದಕರ,ಹಣಮಂತ ಹೊಸಮನಿ, ಹಣಮಂತ ಕಟ್ಟಿಮನಿ,ಅರುಣ ದಮ್ಮೂರ, ಅಶೋಕ ಸಿಂಗೆ,ಮನೋಹರ ಚಕ್ರಕರ್,ನಿಜಪ್ಪ ಮಡಕಿ, ಶಿವರಾಜ ಮೂಕಿ, ರಾಜು ಭೂಂಯ್ಯಾರ,ಪಂಡಿತ ಸಿಂಗೆ, ವಿಶ್ವ ಜೈರಾಜ ಕಿಣಗಿಕರ್,ಆನಂದ ಕಪನೂರ ಮತ್ತಿತರರಿದ್ದರು. ಡಾ. ಚಂದ್ರಕಾಂತ ಸ್ವಾಗತಿಸಿದರು. ಡಾ.ಗೀತಾಂಜಲಿ ನಿರೂಪಿಸಿದರು.



ಉದಯವಾಹಿನಿ ಚಿತ್ರ

> ಡಾ.ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ದಿ ಪರ ಮನೋಭಾವ ಬೆಳೆಸಿಕೊಳ್ಳೊಣ.ಬಾಬೂಜಿಯವರ ಹೋರಾಟ ಮನೋಭಾವ ಸಂಘಟನೆ ಮತ್ತು ಅಭಿವೃದ್ಧಿ ಪರ ಮನೋಭಾವ ಬೆಳೆಸಿಕೊಳ್ಳೋಣ. ಸ್ಥಳೀಯವಾಗಿ ದಿವಂಗತ ಜಿ ರಾಮಕೃಷ್ಣ ಅವರ ಅವಧಿಯಲ್ಲಿ ಹಲವಾರು ಬಗೆಯ ಅಭಿವೃದ್ಧಿ ಕಾಮಗಾರಿಗಳು ಮಾಡಿದ್ದು ಸ್ಮರಿಸುತ್ತೇನೆ. ನನಗೆ ಟಿಕೆಟ್ ನೀಡದಿದ್ದರೂ ಕಾಂಗ್ರೇಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ ಎಂದರು.
> -ವಿಜಯಕುಮಾರ ಜಿ ರಾಮಕೃಷ್ಣ , ಕೆಪಿಸಿಸಿ ಸದಸ್ಯ

> ಡಾ.ಬಾಬು ಜಗಜೀವನ್ ರಾಮ್ ಅವರು ದೇಶದ ಆಡಳಿತದಲ್ಲಿ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲೇ ನಾವೆಲ್ಲರೂ ಶ್ರಮಿಸೋಣ. ಜಯಂತ್ಯುತ್ಸವ ಹೆಸರಲ್ಲಿ ಸಮಾಜವನ್ನು ಎರಡು ಬಣ್ಣಗಳಾಗಿ ಒಡೆಯದೆ ಎಲ್ಲರೂ ಒಗ್ಗಟ್ಟಾಗಿ ಜಯಂತಿ ಆಚರಿಸಬೇಕು. -ಬಸವರಾಜ್ ಮತ್ತಿಮಡು
> ಮಾತ್ತಿಮಡು, ಶಾಸಕ

> ಡಾ. ಬಾಬು ಜಗಜೀವನರಾಂ ಅವರು ನಡೆದು ಬಂದ ದಾರಿ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ಬಾಬು ಜಗಜೀವನರಾಂ ಅವರು ಪ್ರಬುದ್ಧ ರಾಜ ನೀತಿ ತಜ್ಞರಾಗಿದ್ದರು.ಜೊತೆಗೆ ಅವರು ಬದುಕು ಆದರ್ಶ.ಅವರ ಜೀವನವೇ ನಮಗೆಲ್ಲ ದಾರಿ ದೀಪವಾಗಿದೆ ಎಂದರು. ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ. ಮಾನವೀಯತೆ ನಮ್ಮನ್ನು ಬದುಕಿಸುತ್ತದೆ ಎಂದರು. ಡಾ.ಬಾಬು ಜಗಜೀವನರಾಮ್ ಅವರು ಈ ದೇಶದ ಆಹಾರ ಸಚಿವರಾಗಿ, ಭಾರತದ ಜನತೆಗೆ ಹಸಿರು ಕ್ರಾಂತಿ ಯೋಜನೆ ಜಾರಿಗೊಳಿಸುವ ಮೂಲಕ ಈ ದೇಶದ ಜನತೆ ಹಸಿವಿನಿಂದ ಬಳಲದಂತೆ ನೋಡಿಕೊಂಡ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು. -ಅನೀಲಕುಮಾರ ಬೆಳಕೇರಿ ಗೌರವಾಧ್ಯಕ್ಷರು 119ನೇ ಡಾ.ಬಾಬು ಜಗಜೀವನರಾಂ ಜಯಂತೋತ್ಸವ ಸಮಿತಿ ಕಮಲಾಪೂರ ತಾಲ್ಲೂಕು

---

## ತೆಂಗಿನಕಾಯಿ ದರದಲ್ಲಿ ಇಳಿಕೆ: ಭಕ್ತರು, ಹೋಟೆಲ್ ಮಾಲೀಕರಿಗೆ ಖುಷಿ

• **ಉದಯವಾಹಿನಿ, ಬಾಗಲಕೋಟೆ**

ಅಮಾವಾಸ್ಯೆ, ಹುಣ್ಣಿಮೆ ಸೇರಿದಂತೆ ಹಬ್ಬ ಹರಿದಿನಗಳಲ್ಲಿ ತೆಂಗಿನಕಾಯಿ ಖರೀದಿಸಲು ಹಿಂದೆ ಮುಂದೆ ನೋಡುವಂತಹ ಸ್ಥಿತಿ ಇತ್ತು. ಏಕೆಂದರೆ ಕಾಯಿಯ ದರವೇ ಅಷ್ಟು ಏರಿಕೆಯಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಇಳಿಕೆಯಾಗುತ್ತ ಸಾಗಿರುವುದು ಜನರಿಗೆ ನೆಮ್ಮದಿ ಮೂಡಿಸಿದೆ.

ಕಳೆದ ಫೆಬ್ರವರಿಯಲ್ಲಿ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ತೆಂಗಿನಕಾಯಿ ಬೆಲೆ ಕನಿಷ್ಠ ಎಂದರೂ 30 ರೂ. ದಿಂದ ಆರಂಭವಾಗಿ ಗರಿಷ್ಠ 60 ರೂ. ವರೆಗೆ ಮಾರಾಟವಾಗಿತ್ತು. ದರ ಕೇಳಿ ಜನರು ಎರಡು ತೆಂಗಿನಕಾಯಿ ಬದಲು ಒಂದು ಖರೀದಿಸುತ್ತಿದ್ದರು. ಆದರೆ ಈಗ ಗುಣಮಟ್ಟದ ಮತ್ತು ಗಾತ್ರದಲ್ಲಿ ದೊಡ್ಡದಿರುವ ತೆಂಗಿನಕಾಯಿಯೂ 30 ರೂ.ಗೆ ಸಿಗುವಂತಾಗಿದೆ.

ಮಧ್ಯಪ್ರಾಚ್ಯದ ಬಿಕ್ಕಟ್ಟಿನಿಂದ ತೆಂಗು ಹಾಗೂ ತೆಂಗಿನ ಉತ್ಪನ್ನಗಳು ವಿದೇಶಕ್ಕೆ ಆಗುವುದು ಕಡಿಮೆಯಾಗಿರುವುದು ಕೂಡ ತೆಂಗಿನಕಾಯಿ ಬೆಲೆ ಇಳಿಯಲು ಕಾರಣ ಎಂಬ ಮಾತುಗಳು ಕೇಳಿಬಂದಿವೆ. ಕೆಲ ತಿಂಗಳ ಹಿಂದೆ ತೆಂಗಿನಕಾಯಿ ಬೆಲೆ ಹೆಚ್ಚಳದಿಂದ ಬೆಳೆದ ರೈತರಿಗೆ ಆರ್ಥಿಕವಾಗಿ ಅನುಕೂಲವಾಗಿತ್ತು. ಆದರೆ ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿತ್ತು. ತೆಂಗಿನಕಾಯಿ ಬೆಲೆ ಏರಿಕೆ ಸಾರ್ವಕಾಲಿಕ ದಾಖಲೆ ಬರೆದಿತ್ತು. ಬೆಲೆ ಹೆಚ್ಚಳದಿಂದಾಗಿ ಜನಸಾಮಾನ್ಯರು ಜತೆಗೆ ಹೋಟೆಲ್ ಉದ್ಯಮಿಗಳೂ ಸಮಸ್ಯೆ ಎದುರಿಸಿದ್ದರು. ಆದರೆ ಬೇಸಿಗೆ ಆರಂಭದಿಂದಲೂ ಎಳನೀರು ದರ ಏರಿಕೆಯಾಗುತ್ತಲೇ ಸಾಗಿದ್ದು, 40, 50 ಮತ್ತು 60 ರೂ. ವರೆಗೆ ಮಾರಾಟವಾಗುತ್ತಿದೆ.

**ಈಗಿನ ದರ ಎಷ್ಟು?:** ಪ್ರಸ್ತುತ ಚಿಲ್ಲರೆ ಮಾರುಕಟ್ಟೆಯಲ್ಲಿ ತೆಂಗಿನ ದರ 20 ರೂ. ದಿಂದ ಆರಂಭವಾಗಿ 30 ರೂ. ವರೆಗೂ ಮಾರಾಟವಾಗುತ್ತಿದೆ. ಕಾಯಿಯ ಗಾತ್ರದ ಮೇಲೆ ದರ ನಿಗದಿಯಾಗುತ್ತದೆ. ಖರೀದಿದಾರರಿಗೆ ಬೆಲೆ ಇಳಿಕೆ ಖುಷಿ ನೀಡಿದ್ದರೆ, ಇತ್ತ ಕೆಲ ಮಾರಾಟಗಾರರು ಹೆಚ್ಚಿನ ದರದಲ್ಲಿ ಖರೀದಿಸಿ ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಣೆ ಮಾಡಿಕೊಂಡಿದ್ದು, ಅಂತಹವರು ಕೈ ಸುಟ್ಟುಕೊಳ್ಳುತ್ತಿದ್ದಾರೆ.

**20 ರೂ.ದಿಂದ ಆರಂಭ:** ಇತ್ತೀಚೆಗೆ ತೆಂಗಿನಕಾಯಿ ಬೆಲೆ ಇಳಿಕೆಯಾಗುತ್ತ ಸಾಗಿದೆ. ನಾದೇ ಕೆಲ ತಿಂಗಳ ಹಿಂದೆ 40, 50 ರೂ.ಗೆ ಮಾರಿದ್ದೇವೆ. ಈಗ 25 ಮತ್ತು 30 ರೂ.ಗೆ ಮಾರುತ್ತಿದ್ದೇವೆ,'' ಎನ್ನುತ್ತಾರೆ ವ್ಯಾಪಾರಸ್ಥರು.

ಎಳನೀರಿಗೆ ಬೇಸಿಗೆಯಾಗಿದ್ದರಿಂದ ಭಾರಿ ಡಿಮ್ಯಾಂಡ್ ಉಂಟಾಗಿದೆ. ನಗರ ಪ್ರದೇಶಗಳಲ್ಲಿ 70–75 ರೂಪಾಯಿವರೆಗೂ ತೆಂಗಿನಕಾಯಿ ಮಾರಾಟ ಆಗುತ್ತಿದೆ. ಇತರ ಜಿಲ್ಲೆಗಳಲ್ಲಿಯೂ ಒಂದು ಎಳನೀರಿಗೆ 60–65 ರೂಪಾಯಿ ಬೆಲೆ ಇದೆ. ಎಳನೀರಿಗೆ ಬೇಡಿಕೆ ಹೆಚ್ಚಾದಲ್ಲಿ ಮುಂದೆ ತೆಂಗಿನಕಾಯಿಗೆ ಕೊರತೆ ಉಂಟಾಗಿ ಮತ್ತೆ ಬೆಲೆ ಏರಿಕೆ ಆಗುವ ಸಾಧ್ಯತೆಯೂ ಇದೆ. ಆದರೆ ಈ ನಡುವೆ ಮಳೆಗಾಲ ಆರಂಭ ಆಗಲಿದ್ದು, ಮಳೆ ಹೆಚ್ಚಾದರೆ ಎಳನೀರು ಬೇಡಿಕೆ ಕುಸಿಯಲಿದೆ.



ಉದಯವಾಹಿನಿ ಚಿತ್ರ

**ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ರಫ್ತು ಪ್ರಮಾಣ ಕುಸಿತ**

---

## ಮುಳಗುಂದ-ನೀಲಗುಂದ ರಸ್ತೆ ದುರಸ್ತಿಗೆ ಆಗ್ರಹ

• **ಉದಯವಾಹಿನಿ, ಮುಳಗುಂದ**

ಪಟ್ಟಣದಿಂದ ನೀಲಗುಂದ ಗ್ರಾಮಕ್ಕೆ ನೇರವಾಗಿ ಸಂಪರ್ಕ ಕಲ್ಪಿಸುವ ಡಾಂಬರ್ ರಸ್ತೆ ಸಂಪೂರ್ಣ ಹಾಳಾಗಿದ್ದು, ಸುಗಮ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತಿದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ರಸ್ತೆ ಅಭಿವೃದ್ಧಿಪಡಿಸಿ ಸುಮಾರು 8 ವರ್ಷ ಆಗಿದ್ದು, ಹಲವು ದಿನಗಳಿಂದ ರಸ್ತೆ ಹಾಳಾಗಿದೆ. ಆದರೆ ಈ ವರೆಗೂ ದುರಸ್ತಿ ನಡೆದಿಲ್ಲ. ರಸ್ತೆ ಉದ್ದಕ್ಕೂ ಡಾಂಬರ್ ಕಿತ್ತು ಗುಂಡಿಗಳು ಬಿದ್ದಿವೆ, ಕೆಲವು ಭಾಗದಲ್ಲಿ ಮೆಟ್ಟಿಂಗ್ ಹಾಳಾಗಿ ಕಲ್ಲುಗಳು ರಸ್ತೆ ತುಂಬ ಹರಡಿವೆ. ಈ ರಸ್ತೆಯ ಮಧ್ಯ ಹಳ್ಳದ ಹತ್ತಿರ ಅಪಾಯ ಮಟ್ಟದ ತಿರುವಿನಲ್ಲಿ ಸುರಕ್ಷಾ ಗೋಡೆ ನಿರ್ಮಿಸದೇ ಇರುವುದರಿಂದ ಹಲವು ವಾಹನ, ಬೈಕ್ ಸವಾರರು ಗುಂಡಿಗೆ ಬಿದ್ದು ಅಪಘಾತಗಳು ಸಂಭವಿಸಿವೆ. ಮಳೆ ಸುರಿದರೆ ಗುಂಡಿಗಳು ತುಂಬಿ ಹೊಂಡವಾಗುತ್ತಿವೆ. ಕೆಲವು ಭಾಗದಲ್ಲಿ ಇಕ್ಕಟಾದ ರಸ್ತೆ ಇದ್ದು, ಇನ್ನಷ್ಟು ವಿಸ್ತರಿಸಿ ರಸ್ತೆ ನಿರ್ಮಿಸಬೇಕಿದೆ. ಚಿಂಚಲಿ ಮತ್ತು ಮುಳಗುಂದ ಮುಖ್ಯ ರಸ್ತೆಯಿಂದ ನೀಲಗುಂದ ಗ್ರಾಮದವರೆಗೆ ಸುಮಾರು 5 ಕಿ.ಮೀ ರಸ್ತೆ ಹಾಳಾಗಿ ಸಾಕಷ್ಟು ಪ್ರಮಾಣದಲ್ಲಿ ಕಡಿ ಕಿತ್ತು ಹರಡಿಕೊಂಡಿದೆ. ಬಹುತೇಕ ರೈತರೆ ಬಳಸುವ ರಸ್ತೆ ಇದಾಗಿದೆ.



ಉದಯವಾಹಿನಿ ಚಿತ್ರ

ಕಡಿ ಕಿತ್ತಿದ್ದರಿಂದ ಎತ್ತು ಚಕ್ಕಡಿ ಸಂಚಾರಕ್ಕೆ ತೊಂದರೆ ಆಗುತ್ತಿದೆ. ರಸ್ತೆ ದುರಸ್ತಿಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು ಈವರೆಗೂ ದುರಸ್ತಿ ಕಾಮಗಾರಿ ಮಾಡಿಲ್ಲ. ಈಚೆಗೆ ಪಿಡಬ್ಲುಡಿ ಇಲಾಖೆ ವತಿಯಿಂದ ಗುಂಡಿ ಮುಚ್ಚುವ ಕೆಲಸವೂ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವಿನಯ್ ಬಂಗಾರಿ ಆರೋಪಿಸಿದರು. ನೀಲಗುಂದ ಗ್ರಾಮಸ್ಥರಿಗೆ ನಿತ್ಯದ ಕೆಲಸ, ವಾಣಿಜ್ಯ ಉದ್ದೇಶಕ್ಕಾಗಿ ಮುಳಗುಂದಕ್ಕೆ ಬರಲು ನೇರ ಸಂಪರ್ಕಕೊಂಡಿಯಂತೆ ಇದ್ದ ರಸ್ತೆ ತೀರಾ ಹಾಳಾಗಿದೆ. ವಾಹನ ಸಂಚಾರಕ್ಕೆ ಯೋಗ್ಯವಿಲ್ಲದ ಕಾರಣ ಚಿಂಚಲಿ ಮೂಲಕ 12 ಕಿ.ಮೀ ಸುತ್ತಿ ಮುಳಗುಂದಕ್ಕೆ ಬರುವ ಸ್ಥಿತಿ ಇದೆ. ಕೂಡಲೇ ರಸ್ತೆ ಕಾಮಗಾರಿ ಕೈಗೊಳ್ಳಬೇಕು ಎಂದು ಗ್ರಾಮಸ್ತರು ಆಗ್ರಹಿಸಿದ್ದಾರೆ.

---

## ಪ್ರಧಾನಿಯವರ ಕರೆಯ ಹಿಂದಿನ ಸದುದ್ದೇಶವನ್ನು ಪಾಲಿಸೋಣ

• **ಉದಯವಾಹಿನಿ, ಚಿಕ್ಕಮಗಳೂರು**

ಎರಡು ಮಹಾಯುದ್ಧಗಳು ವಸಾಹತುಶಾಹಿಯ ವಿಸ್ತರಣೆಯ ಉದ್ದೇಶದಿಂದಲೇ ನಡೆದ ಯುದ್ಧಗಳು. ಈಗ ಮೂರನೇ ಮಹಾಯುದ್ಧ ನಡೆದರೆ ಅದು ವ್ಯಾವಹಾರಿಕ ಲಾಭಕ್ಕಾಗಿಯೇ ನಡೆಯಲಿದೆ. ಈಗ ಇರಾನ್ – ಅಮೆರಿಕ ಯುದ್ಧದ ಹಿಂದಿರುವುದೂ ಇಂತಹದ್ದೇ ಉದ್ದೇಶ. ಅಗಾಧವಾದ ತೈಲ ನಿಕ್ಷೇಪದ ಮೇಲಿನ ಪಾರಮ್ಯ ಸಾಧಿಸುವ ಸಲುವಾಗಿ, ಜಾಗತಿಕ ಕಾಳಜಿಯಿಲ್ಲದೆ ಇರಾನ್ ಯುದ್ಧ ನಡೆಯುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಡಾ. ರವಿ ಸಿ.ಟಿ ಹೇಳಿದರು. ಅವರು ಚಿಕ್ಕಮಗಳೂರಿನಲ್ಲಿ ಮಾಧ್ಯಮಗಳೊಡನೆ ಮಾತನಾಡುತ್ತಿದ್ದರು. ನಾವು ಈ ಯುದ್ಧದ ಭಾಗವಲ್ಲದಿದ್ದರೂ ಸಂಕಷ್ಟ ಅನುಭವಿಸುವ ಪರಿಸ್ಥಿತಿ ಬಂದಿದೆ. ಇದಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು

ನಾವು ಅನಗತ್ಯವಾಗಿ ವಾಹನಗಳನ್ನು ಉಪಯೋಗಿಸದೆ, ಆಭರಣ ಖರೀದಿಸದೆ ವಿದೇಶೀ ವಿನಿಮಯ ಉಳಿಸಲು ನೆರವಾಗಬೇಕು ಎಂದು ಕರೆ ನೀಡಿದ್ದಾರೆ. ಅದರ ಬದಲಿಗೆ, ಚಿನ್ನದ ಬಾಂಡ್‌ಗಳನ್ನು ಖರೀದಿಸಬಹುದು ಎಂದು ಪ್ರಧಾನಿ ಸಲಹೆ ಮಾಡಿದ್ದು, ಇದರ ಹಿಂದಿರುವ ಸದುದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಭಾರತೀಯರಾಗಿ ಇಂಧನ ಉಳಿತಾಯಕ್ಕೆ ಆದ್ಯತೆ ನೀಡಿ, ದೇಶಭಕ್ತಿಯನ್ನು ಜನಜೀವನದಲ್ಲೂ ಜವಾಬ್ದಾರಿ ಮೆರೆದು ಪ್ರಕಟಿಸಬೇಕು ಎಂದು ರವಿ ಕರೆ ನೀಡಿದರು. ಕಾಂಗ್ರೇಸ್ ಪಕ್ಷಕ್ಕೆ ಎಲ್ಲದನ್ನೂ ವಿರೋಧಿಸುವ, ಅನುಮಾನ ವ್ಯಕ್ತಪಡಿಸುವ ಚಾಳಿ ಆರಂಭವಾಗಿದೆ. ಎಸ್‌ಐಆರ್ ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದಾಗ 1952, 1957ರಲ್ಲಿ, ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಾಗ 1967 ಮತ್ತು 1972ರಲ್ಲಿ ನಡೆದಿದೆ. ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಕ್ರಿಯೆ ಈ ಎಸ್‌ಐಆರ್. ನಮ್ಮಲ್ಲೇ ಇರುವ ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಚುನಾವಣಾ ಕರ್ತವ್ಯದಲ್ಲಿ ಯೋಜನೆಗೊಂಡಿರುವ ಬಿಎಲ್‌ಒಗಳು ಈ ಪ್ರಕ್ರಿಯೆ ನಡೆಸುತ್ತಾರೆ. ಅನರ್ಹರು ಮತದಾರರ ಪಟ್ಟಿಗೆ ಸೇರಬಾರದು, ಅರ್ಹರು ಪಟ್ಟಿಯಿಂದ ಹೋಗಬಾರದು ಎನ್ನುವುದು ಇದರ ಉದ್ದೇಶ ಎಂದರು.

ಸಾರಿಗೆ ಸಂಸ್ಥೆಯ ನೌಕರರು ಬಹುತೇಕ 2 ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ಇಡುತ್ತಲೇ ಇರುತ್ತಾರೆ. ಹಿಂದೆ ಸರ್ಕಾರ ಸಂಬಳ ಪರಿಷ್ಕರಣೆ ಮಾಡುವುದಾಗಿ ಹೇಳಿದ್ದಕ್ಕೆ ಚಳುವಳಿ ಹಿಂಪಡೆದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿರೋಧ ಪಕ್ಷದಲ್ಲಿದ್ದಾಗ ಯಾವ ರೀತಿ ಸಾರಿಗೆ ಸಂಸ್ಥೆಯ ನೌಕರರ ಪರವಾಗಿ ಮಾತನಾಡಿದ್ದಿರೋ, ಅದನ್ನೇ ಅನುಷ್ಠಾನಕ್ಕೆ ತನ್ನಿ. ಅನಗತ್ಯವಾಗಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ, ಸಾರಿಗೆ ನೌಕರರ ಕುರಿತು ಸಹಾನುಭೂತಿ ಇರಲಿ ಎಂದು ಆಗ್ರಹಿಸಿದರು.

> ಕಾಂಗ್ರೇಸ್‌ಗೆ ಅಕ್ರಮ ಬಾಂಗ್ಲಾದೇಶಿ ನಾಗರಿಕರೂ ಮತದಾರರ ಪಟ್ಟಿಯಲ್ಲಿರಬೇಕು. ಇದನ್ನು ಒಪ್ಪಲು ಸಾಧ್ಯವಿಲ್ಲ. ಬಿಜೆಪಿ ಚುನಾವಣೆ ಗೆದ್ದಾಗ ಅದಕ್ಕೆ ಕಾರಣ ಎಸ್‌ಐಆರ್ ಎನ್ನುತ್ತಾರೆ. ಆದರೆ, ಕೇರಳದಲ್ಲಿ ಕಾಂಗ್ರೇಸ್ ಗೆದ್ದಿದ್ದು ಹೇಗೆ? ತಮಿಳುನಾಡಿನಲ್ಲಿ ಟಿವಿಕೆ ಗೆದ್ದಿದ್ದು ಹೇಗೆ? ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಅನ್ನು ಸ್ವತಃ ಸುಪ್ರೀಂ ಕೋರ್ಟ್ ನಿರ್ವಹಿಸಿದ್ದು, ಆಕ್ಷೇಪಣೆಗಳಿದ್ದರೆ ಸಲ್ಲಿಸಲು ಸೂಚಿಸಿದೆ. ಇಷ್ಟೆಲ್ಲ ಆದಮೇಲೂ ಎಸ್‌ಐಆರ್ ಕುರಿತು ಅನುಮಾನ ಸೃಷ್ಟಿಸುತ್ತಿರುವುದು ಸಂವಿಧಾನ, ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಡದಿರುವ ಕಾಂಗ್ರೇಸ್ ಪಕ್ಷ ಮಾತ್ರ. - ಡಾ. ರವಿ ಸಿ.ಟಿ



---

## ಬ್ಲ್ಯಾಕ್ ಮೇಲ್ ಮಾಡುವ ಸಂಸ್ಕೃತಿ ನನ್ನದಲ್ಲ

• **ಉದಯವಾಹಿನಿ, ವಿಜಯಪುರ**

ಬ್ಲ್ಯಾಕ್ಮೇಲ್ ಮಾಡುವ ಸಂಸ್ಕೃತಿ ನನ್ನದಲ್ಲ. ಬ್ಲ್ಯಾಕ್ಮೇಲ್ ಮಾಡಿದ್ದರೆ ಎಂದೋ ಸಚಿವನಾಗಿರುತ್ತಿದ್ದೆ. ಮಾಜಿ ಸಿಎಂ ಯಡಿಯೂರಪ್ಪನವರ ಸಾಕಷ್ಟು ಭ್ರಷ್ಟಾಚಾರ ನನ್ನ ಬಳಿ ಇದ್ದವು. ಪಕ್ಷದ ಹಿತ ದೃಷ್ಟಿಯಿಂದ ಬ್ಲಾಕ್ಮೇಲ್ ಮಾಡಲಿಲ್ಲ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಚಿವ ಎಂ.ಬಿ. ಪಾಟೀಲರಿಗೆ ಟಾಂಗ್ ನೀಡಿದರು. ಟಿಕೆಟ್‌ಗಾಗಿ ಯತ್ನಾಳ ಬಿಜೆಪಿಗೆ ಬ್ಲ್ಯಾಕಮೇಲ್ ಮಾಡುತ್ತಿದ್ದಾರೆ ಎಂಬ ಸಚಿವ ಎಂ. ಬಿ. ಪಾಟೀಲರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ಯತ್ನಾಳ ಸುದ್ದಿಗಾರರ ಜೊತೆಗೆ ಮಾತನಾಡಿದರು.

ಯಡ್ಡಿ ಕುರಿತು ಹೈಕಮಾಂಡ್ ಗಮನಕ್ಕೆ ತರಲು ಪ್ರಯತ್ನಿಸಿದೆ. ಅದರಿಂದಲೇ ಅವರ ಉಚ್ಚಾಟನೆಯಾಯಿತು ಎಂದರು. ನಾನು ಹೊಸ ಪಕ್ಷ ಕಟ್ಟಿದರೆ ಹಿಂದೂಗಳ ವೋಟು ವಿಭಜನೆಯಾಗುತ್ತವೆ ಎಂಬುದು ಎಂ.ಬಿ. ಪಾಟೀಲ್ ಹಾಗೂ ಕಾಂಗ್ರೇಸ್ ಲೆಕ್ಕಾಚಾರ. ಮುಸ್ಲಿಂ ಮತಗಳ ಮೇಲೆ ಸರ್ಕಾರ ಮಾಡುವ ಉದ್ದೇಶವಿದೆ.

ತಮಿಳುನಾಡಿನ ಟಿವಿಕೆ ಪಕ್ಷದ ವಿಜಯ್ ನಂತೆ ರಾಜ್ಯದ ಹಿಂದೂಗಳು ಒಂದಾಗಬೇಕು. ಆಗ ನಮ್ಮ ಪಕ್ಷ ಅಧಿಕಾರಕ್ಕೆ ಬರುತ್ತದೆ. ಕಾರಣ ಹಿಂದೂಗಳನ್ನು ಒಂದು ಮಾಡುವ ಕೆಲಸ ನಾನು ಮಾಡುತ್ತಿರುವೆ. ಎಲ್ಲಾ ಜಿಲ್ಲೆಗಳಲ್ಲಿ ಓಡಾಡುತ್ತಿರುವೆ. ಕೊಲ್ಹಾರದ ಕುರುಮಲೆ ಗಣೇಶನ, ಆಂಜನೇಯನ ಆಶೀರ್ವಾದವಾಗಿದೆ ಎಂದು ಹೇಳಿದರು. ರಾಜ್ಯದ ಹಿಂದೂಗಳ ಅಭಿಪ್ರಾಯ ತೆಗೆದುಕೊಳ್ಳುತ್ತೇನೆ. ಬಿಜೆಪಿ ಕಾಂಗ್ರೇಸ್‌ನಲ್ಲಿರುವವರು ಹೊಂದಾಣಿಕೆ ಇದ್ದಾರೆ. ವಿಜಯೇಂದ್ರ ಯಾವುದೇ ವಿಚಾರಕ್ಕೂ ಪ್ರತಿಕ್ರಿಯೆ ಇಲ್ಲ ಎಂದರು. ಸಚಿವ ಜಮೀರ್ 2346 ಕೋಟಿ ಜಿಎಸ್‌ಟಿ ಹಗರಣ ಹೊರ ಬಂದಿದೆ. ಇದಕ್ಕೆ ವಿಜಯೇಂದ್ರ ಪ್ರತಿಕ್ರಿಯೆ ನೀಡಿಲ್ಲ. ಮೆಟ್ರೋದಲ್ಲಿ ವಿಜಯೇಂದ್ರ ಪ್ರಯಾಣ ಮಾಡಿದ್ದೇ ದೊಡ್ಡ ಸುದ್ದಿಯಾಗುತ್ತದೆ. ಮೆಟ್ರೋ ಸ್ಟೇಷನ್‌ಗೆ ವಿಜಯೇಂದ್ರ ಹೇಗೆ ಬಂದ. ಪಾದಯಾತ್ರೆ ಮಾಡುತ್ತಾ ಬಂದನಾ? ನಂತರ ಹೇಗೆ ಹೋದಾ ಎಂದು ವ್ಯಂಗ್ಯವಾಡಿದರು.

> **ಎಲ್ಲಾ ಹಿಂದೂಗಳು ಒಂದಾಗಬೇಕು**
> ಮುಸ್ಲಿಂ ಉದ್ದಾರವೇ ಅವರ ಉದ್ದೇಶ. ಇದರಲ್ಲಿ ಎಂ.ಬಿ. ಪಾಟೀಲರ ಸಹಕಾರ ಎಲ್ಲಿಂದ ಬರುತ್ತದೆ ಎಂದು ಯತ್ನಾಳ ಟಾಂಗ್ ಕೊಟ್ಟರು. ವಾರ್ಷಿಕ 10 ಸಾವಿರ ಕೋಟಿ ನೀಡಬೇಕು, ಮತಾಂತರ ಕಾಯ್ದೆ ವಾಪಸ್ಸು, ಮೀಸಲಾತಿಗೆ ಮುಸ್ಲಿಂಮರು ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದಾರೆ. ಮತ್ತೊಂದೆಡೆ ಯತ್ನಾಳ ಕಾಂಗ್ರೇಸ್ ಏಜೆಂಟ್ ಎಂದು ವಿಜಯೇಂದ್ರನ ಚೇಲಾಗಳು ಹೇಳುತ್ತಿದ್ದಾರೆ. ರಾಜ್ಯದ ಎಲ್ಲಾ ಹಿಂದೂಗಳು ಒಂದಾಗಬೇಕು. ಎಲ್ಲಾ ಪಕ್ಷಗಳ ಹಿಂದೂಗಳು ಒಂದಾಗಬೇಕಿದೆ ಎಂದರು.



---

## ಮಿನಿ ನ್ಯೂಸ್

### ವಿಜಯೇಂದ್ರ ಮೆಟ್ರೋ ಪ್ರಯಾಣ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯ

• **ಉದಯವಾಹಿನಿ, ಕಲಬುರಗಿ**

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮೆಟ್ರೋ ಹತ್ತಿರುವ ಬಗ್ಗೆ ಮಾಧ್ಯಮಗಳು ಪದೇ ಪದೇ ಸುದ್ದಿ ಬಿತ್ತರಿಸುತ್ತಿವೆ. ಆದರೆ, ಈ ಪರಿಸ್ಥಿತಿಗೆ ಯಾರು ಕಾರಣ ಎಂದು ಯಾಕೆ ಕೇಳುತ್ತಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು. ಮಾಡಬೂಳ ಗ್ರಾಮದ ಬಳಿ ನಿರ್ಮಾಣವಾಗಿರುವ ನೂತನ ಮೃಗಾಲಯ ಉದ್ಘಾಟನೆ ನೆರವೇರಿಸಿದ ನಂತರದ ಮಾಧ್ಯಮದ ಪ್ರತಿನಿಧಿಗಳೊಂದಿಗೆ ಅವರು ಮಾತನಾಡುತ್ತಿದ್ದರು. ಮೋದಿ ವಿದೇಶದಿಂದ ತಂದ ಪ್ರಾಣಿಗಳು ಸತ್ತು ಹೋದವು. ಈಗ ನಾವು ತರುವ ಪ್ರಾಣಿಗಳನ್ನು ಸರಿಯಾಗಿ ನಿರ್ವಹಣೆ ಮಾಡಿ ಸಂರಕ್ಷಿಸಲಾಗುವುದು ಎಂದು ಪ್ರಿಯಾಂಕ್ ಹೇಳಿದರು.

ದೇಶ ಕಷ್ಟದ ಸ್ಥಿತಿಯಲ್ಲಿದ್ದಾಗ ಮೋದಿ ವಿದೇಶಕ್ಕೆ ಹೋಗುತ್ತಾರೆ. ಆರ್ಥಿಕಸ್ಥಿತಿಗತಿ, ಪೆಟ್ರೊಲಿಯಂ ಬೆಲೆ ಏರಿಕೆ ಬಗ್ಗೆ ಸಂಸತ್ತಿನಲ್ಲೇ ಹೇಳಬೇಕಿತ್ತು ನೆದರ್ ಲ್ಯಾಂಡ್ಸ್ ಗೆ ಯಾಕೆ ಹೋಗಬೇಕಿತ್ತು ಎಂದು ಖರ್ಗೆ ಕುಟುಕಿದರು. ಬೆಲೆ ಏರಿಕೆ ವಿಷಯ ಮರೆಮಾಚಲು ಮೋದಿ ಚಿನ್ನ ಖರೀದಿ ಮಾಡಬೇಡಿ ಎಂದು ಜನರಿಗೆ ಕರೆ ಕೊಡುತ್ತಾರೆ. ನೀಟ್ ಅಕ್ರಮ ಬಗ್ಗೆ ಮೋದಿ ಯಾಕೆ ಮಾತನಾಡುವುದಿಲ್ಲ. 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ಇದಕ್ಕೆ ಯಾರು ಕಾರಣ? ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನ ಇನ್ನೂ ಸಚಿವರಾಗಿ ಮುಂದುವರೆಸಿದ್ದಾರೆ ಯಾಕೆ ಎಂದು ಅರಣ್ಯ ಸಚಿವ ಪ್ರಶ್ನಿಸಿದರು.

### ಘನತಾಜ್ಯ ನಿರ್ವಹಣೆ ನಿಯಮ ಪಾಲಿಸಿ

• **ಉದಯವಾಹಿನಿ, ಕುಕನೂರು**

ಇಲ್ಲಿನ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅಧಿಸೂಚನೆ ಜಾರಿಗೆ ಬಂದಿವೆ. ಘನ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮತ್ತು ನಿರ್ವಹಣೆ ಮಾಡದಿರುವುದು ಪರಿಸರ ಹಾಗೂ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಪಟ್ಟಣದ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸಾರ್ವಜನಿಕರು ಹಸಿತ್ಯಾಜ್ಯ, ಒಣತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯಗಳನ್ನು ಹಾಗೂ ವಿಶೇಷ ರೀತಿಯ ತ್ಯಾಜ್ಯಗಳನ್ನು ವಿಂಗಡಣೆ ಮಾಡಬೇಕು. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಉದ್ದಿಮೆದಾರರು, ಕಲ್ಯಾಣ ವ್ಯವಸ್ಥಾಪಕರು, ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರು ಮತ್ತು ಇತರೆ ಉದ್ದಿಮೆದಾರರಿಗೆ ಈ ಮೂಲಕ ಸೂಚಿಸಲಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ನಾಗೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಂಚೆ ಕಚೇರಿ ಸ್ಥಳಾಂತರಕ್ಕೆ ವಿರೋಧ

• **ಉದಯವಾಹಿನಿ, ಸಂಡೂರು**

ತಾಲ್ಲೂಕಿನ ತೋರಣಗಲ್ಲು ಗ್ರಾಮದ ಅಂಚೆ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರ ಮಾಡುವುದನ್ನು ವಿರೋಧಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಪಕ್ಷದ ಮುಖಂಡರು ಶನಿವಾರ ತೋರಣಗಲ್ಲು ಗ್ರಾಮ ಪಂಚಾಯಿತಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಪಕ್ಷ ತಾಲ್ಲೂಕು ಘಟಕದ ಕಾರ್ಯದರ್ಶಿ ಎ. ಸ್ವಾಮಿ ಮಾತನಾಡಿ, ಈ ಕಚೇರಿ ಸ್ಥಳವನ್ನು ಬೇರೆ ಕೆಲಸಗಳಿಗೆ ಬಳಸಿಕೊಳ್ಳುವ ನೆಪದಲ್ಲಿ ಅಂಚೆ ಕಚೇರಿಯನ್ನು ಸ್ಥಳಾಂತರಿಸಲಾಗುತ್ತಿದೆ. ಕಟ್ಟಡಕ್ಕೆ ಅವಶ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ, ಇಲ್ಲಿಯೇ ಉಳಿಸಿಕೊಳ್ಳಬೇಕು' ಎಂದು ಒತ್ತಾಯಿಸಿದರು. ಡಿವೈಎಫ್‌ಐ ಕಾರ್ಯದರ್ಶಿ ಎಚ್. ಸ್ವಾಮಿ, ಸಣ್ಣ ಹುಲಿಗೆಮ್ಮ, ಹುಲಿಗೆಮ್ಮ, ಹೊನ್ನೂರಮ್ಮ, ಯಂಕಮ್ಮ, ಹುಸೇನ್ ಬಿ, ಮಾರುತಮ್ಮ, ರಂಗಮ್ಮ, ಸೋಮಕ್ಕ, ನೀಲಮ್ಮ, ತಿಪ್ಪಮ್ಮ, ಗಂಗಮ್ಮ ಇದ್ದರು.

### ರೂ.40 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಕಳವು, ಲಾಕರ್ ಸಮೇತ ಪರಾರಿ

• **ಉದಯವಾಹಿನಿ, ಹಾನಗಲ್**

ತಾಲ್ಲೂಕಿನ ಚಿಕ್ಕಾಂಶಿ ಹೊಸೂರು ಗ್ರಾಮದಲ್ಲಿರುವ ಶಾರದಾ ಜ್ಯುವೆಲರ್ಸ್ ಚಿನ್ನಾಭರಣ ಅಂಗಡಿಯಲ್ಲಿ ಕಳ್ಳತನವಾಗಿದ್ದು, ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳಿದ್ದ ಲಾಕರ್ ಸಮೇತ ಕಳ್ಳರು ಪರಾರಿಯಾಗಿದ್ದಾರೆ.


ಗ್ರಾಮದ ಮುಖ್ಯ ರಸ್ತೆಯಲ್ಲಿ ಅಣ್ಣಪ್ಪ ಭಜಂತ್ರಿ ಎಂಬುವವರು ಶಾರದಾ ಜ್ಯುವೆಲರ್ಸ್ ಚಿನ್ನದ ಅಂಗಡಿ ಇಟ್ಟುಕೊಂಡಿದ್ದಾರೆ. ಅದೇ ಅಂಗಡಿಯಲ್ಲಿ ಮೇ 16ರ ತಡರಾತ್ರಿ ಕಳ್ಳತನವಾಗಿದೆ' ಎಂದು ಪೊಲೀಸರು ತಿಳಿಸಿದರು. ಮುಖಗವಸ ಧರಿಸಿಕೊಂಡು ಶಟರ್ ಮುರಿದು ಅಂಗಡಿಗೆ ನುಗ್ಗಿದ್ದ ಕಳ್ಳರು, ಎಲ್ಲಾ ಕಡೆಯೂ ಹುಡುಕಾಡಿದ್ದಾರೆ. ಕೈಗೆ ಸಿಕ್ಕ ವಸ್ತುಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾರೆ. ಆರೋಪಿಗಳ ಕೃತ್ಯವು ಅಂಗಡಿಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದರು.

20 ಕೆ.ಜಿ. ಬೆಳ್ಳಿ ಮತ್ತು 20 ತೊಲೆ ಬಂಗಾರದ ಅಭರಣ ಇಟ್ಟಿದ್ದ ಲಾಕರ್ ಎತ್ತಿಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ. ರೂ. 40 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಆಭರಣ ಕಳ್ಳತನವಾಗಿರುವುದಾಗಿ ಅಂದಾಜಿಸಲಾಗಿದೆ ಎಂದರು. ಕಳವು ನಡೆದ ಸ್ಥಳಕ್ಕೆ ಜಿಲ್ಲಾ ಪೊಲೀಸ್ ಎಸ್.ಪಿ. ಯಶೋಧಾ ವಂಟಗೋಡಿ, ಹೆಚ್ಚುವರಿ ಎಸ್.ಪಿ. ಎಲ್. ವೈ. ಶಿರಕೋಳ ಅವರು ಭೇಟಿ ನೀಡಿ ಪರಿಶೀಲಿಸಿದರು.

### ಬಿರುಗಾಳಿ: ಕೃಷಿಗೆ ಅಪಾರ ಹಾನಿ

• **ಉದಯವಾಹಿನಿ ಹಳೇಬೀಡು**

ಇಲ್ಲಿನ ರಾಜನಶಿರಿಯೂರು ಹಾಗೂ ಆಸುಪಾಸಿನಲ್ಲಿ ಬಿರುಗಾಳಿಯಿಂದ ಹಲವು ವಿದ್ಯುತ್ ಕಂಬ ಹಾಗೂ ಮರಗಳಿಗೆ ಹಾನಿಯಾಗಿದ್ದು, ಸುಮಾರು 10 ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ದಟ್ಟಿಸಿದ ಮೋಡಗಳು ಗಾಳಿಗೆ ಚದುರಿ ಹೋಗಿದ್ದು, ಮಳೆಯ ನಿರೀಕ್ಷೆಯಲ್ಲಿದ್ದ ರೈತರಲ್ಲಿ ಬೇಸರ ಮೂಡಿಸಿದೆ. ರಾಜನಶಿರಿಯೂರಿನ ಹನಿಕೆ, ಚಿಕ್ಕಮಳೂರು ರಸ್ತೆಯಲ್ಲಿ ವಿದ್ಯುತ್ ಪರಿವರ್ತಕ ಜೋಡಿ ಕಂಬದೊಂದಿಗೆ ಬುಡಸಮೇತ ನೆಲಕ್ಕೆ ಬಿದ್ದಿದೆ. 27 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಫಸಲು ಬಿಡುತ್ತಿದ್ದ 30 ತೆಂಗಿನ ಮರಗಳು ಬುಡ ಸಮೇತ ಬಿದ್ದು ಹೋಗಿವೆ. ಕೆಲವು ಮರಗಳು ಗಾಳಿಯ ಹೊಡೆತಕ್ಕೆ ನುಜ್ಜುಗುಜ್ಜಾಗಿವೆ. ಹೊಂಬಾಳೆ, ಕಾಯಿ ಕಟ್ಟ ಬೇಕಾದ ಕುರುಬು, ಸೋಗೆಗಳು ಉದುರು ಹೋಗಿವೆ. ಇಂತಹ ಮರಗಳು ಫಸಲು ಕೊಡಲು ವರ್ಷಗಳೇ ಬೇಕಾಗುತ್ತದೆ ಎಂದು ರೈತರು ಅಳಲು ತೋಡಿಕೊಂಡರು. ಫಸಲು ಬಿಟ್ಟಿದ್ದ 4 ಮಾವಿನ ಮರಗಳು ಧರೆಗುರುಳಿವೆ. ಬಲಿತ ಮಾವಿನ ಕಾಯಿಗಳು ಉದುರಿ ಹೋಗಿವೆ. 5 ಹುಣಸೆ ಮರಗಳು ಬಿದ್ದು ಹೋಗಿವೆ. 10 ತೇಗ, 5 ಬೇವಿನ ಮರಗಳು ಸಹ ಬಿದ್ದು ಹೋಗಿವೆ. ಕಂದಾಯ ಇಲಾಖೆಯವರು ಮಹಜರ್ ನಡೆಸಿ ಸರ್ಕಾರದಿಂದ ಪರಿಹಾರ ಕೊಡಿಸಬೇಕು ಎಂದು ರೈತ ಕಲ್ಲೇಶಪ್ಪ ತಿಳಿಸಿದರು. ಸುಮಾರು ಹತ್ತು ಎಕರೆ ಟೊಮೆಟೊ ಬೆಳೆ ನೆಲಕ್ಕೆ ಮುಗುಚಿದೆ. ಗಿಡಗಳನ್ನು ಎತ್ತಿಕಟ್ಟಲು ರೈತರು ಹರಸಾಹಸಪಟ್ಟ ದೃಶ್ಯ ಕಂಡು ಬಂತು.ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಮರಗಳನ್ನು ರೈತರು, ವಿದ್ಯುತ್ ಕಂಬಗಳನ್ನು ಸೆಸ್ಕ್ ಸಿಬ್ಬಂದಿ ತೆರವು ಮಾಡಿ ಸುಗಮ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸಿದರು.



ಉದಯವಾಹಿನಿ ಚಿತ್ರ

---

# ಕ್ರೀಡಾ ಚಟುವಟಿಕೆಗಳಿಂದ ಜಿಲ್ಲೆಗೆ ಹೊಸ ಔಟ್‌ಲುಕ್:ಎಂಬಿಪಿ

### ಯುವಪ್ರತಿಭೆಗಳು ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು

• **ಉದಯವಾಹಿನಿ ವಿಜಯಪುರ**


ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಶನ್ ವತಿಯಿಂದ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟವನ್ನು ವಿಜಯಪುರದಲ್ಲಿ ಆಯೋಜಿಸುವ ಮೂಲಕ ಈ ಬೃಹತ್ ಕ್ರೀಡಾಕೂಟವು ಜಿಲ್ಲೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಯೋಜನೆಗೊಂಡಿದ್ದು, ವಿಜಯಪುರ ನಗರಕ್ಕೆ ಹೊಸ ಔಟ್‌ಲುಕ್ ನೀಡಿದೆ ಎಂದು ಬೃಹತ್ ಮತ್ತು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದಲ್ಲಿ ಆರಂಭವಾದ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ರಾಜ್ಯ ಮಟ್ಟದ ಪಂದ್ಯಾಟಗಳನ್ನು ಆಯೋಜಿಸುವುದರಿಂದ ವಿಜಯಪುರ ಜಿಲ್ಲೆಯ ಕೀರ್ತಿ ಹೆಚ್ಚುತ್ತದೆ. ಇದರಿಂದ ವಿಜಯಪುರ ನಗರಕ್ಕೆ ಹೊಸ ಔಟಲುಕ್ ಲಭ್ಯವಾಗಲಿದೆ ಎಂದರು.

ಜೊತೆಗೆ ರಾಷ್ಟ ಮಟ್ಟದಲ್ಲಿನ ಕ್ರೀಡಾ ಕ್ಷೇತ್ರದಲ್ಲಿ ಪ್ರೋತ್ಸಾಹ ಸಿಗುತ್ತದೆ. ಯುವಪ್ರತಿಭೆಗಳು ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು ಎಂದು ಆಶಿಸಿದ ಸಚಿವರು, ಮುಂದೊಂದು ದಿನ ರಾಷ್ಟ್ರ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟ ವಿಜಯಪುರದಲ್ಲಿ ನಡೆಯಲಿ ಎಂದರು. ಈ ರೀತಿಯ ಪಂದ್ಯಾಟಗಳನ್ನು ಆಯೋಜಿಸುವುದರಿಂದ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾಕೂಟದಲ್ಲಿ ಮಹತ್ವ ಸಿಗಲಿದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಂಪೂರ್ಣ ಸಹಕಾರ ನೀಡುತ್ತೇವೆ ಎಂದರು.

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅ ವರು ಬ್ಯಾಡ್ಮಿಂಟನ್ ಆಟಗಾರರಾಗಿದ್ದರು. ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ಅದೇ ಮೊದಲ ಬಾರಿಗೆ ಶಾಸಕನಾಗಿದ್ದೆ. ಅವರು ಬ್ಯಾಡ್ಮಿಂಟನ್‌ಗೆ ಹೆಚ್ಚು ಒತ್ತು ನೀಡಿದ್ದರು. ಈಗ ಅವರ ಪುತ್ರ ಕುಮಾರ ಬಂಗಾರಪ್ಪನವರು ಯುವ ತಂಡ ಕಟ್ಟಿಕೊಂಡು ಬ್ಯಾಡ್ಮಿಂಟನ್ ಆಟೋಟಗಳನ್ನು ಮುನ್ನಡೆಸುತ್ತಿರುವುದನ್ನು ಸಚಿವರು ಪ್ರಶಂಸಿಸಿದರು.

ಇಂದಿನಿಂದ ಆರಂಭವಾಗಿರುವ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟ ಯಶಸ್ವಿಯಾಗಲಿ. ಮುಂಬರುವ ದಿನಗಳಲ್ಲಿ ವಿಜಯಪುರದಲ್ಲಿ ರಾಷ್ಟ್ರೀಯ ಬ್ಯಾಡ್ಮಿಂಟನ್ ಕ್ರೀಡಾಕೂಟ ಆಯೋಜಿಸಿದರೆ, ನಾನು ಸೇರಿದಂತೆ ಜಿಲ್ಲೆಯ ಶಾಸಕರು ಹಾಗೂ ಅಧಿಕಾರಿಗಳು ಸಕಲ ಸಹಕಾರ ನೀಡುತ್ತೇವೆ ಎಂದು ಭರವಸೆ ನೀಡಿದರು.ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಶನ್ ಅಧ್ಯಕ್ಷರು , ಮಾಜಿ ಸಚಿವ ಕುಮಾರ ಬಂಗಾರಪ್ಪ ಅವರು ಮಾತನಾಡಿ, ಮೊದಲ ಬಾರಿಗೆ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟವನ್ನು ಬೃಹತ್ ಪ್ರಮಾಣದಲ್ಲಿ ಆಯೋಜಿಸಿದ್ದೇವೆ ಎಂದರು.




ಉದಯವಾಹಿನಿ ಚಿತ್ರ

**ಬ್ಯಾಡ್ಮಿಂಟನ್ ಪಂದ್ಯಾಟಕ್ಕೆ ಚಾಲನೆ**

**ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ಜಿಲ್ಲೆಗೆ ಹೆಮ್ಮೆ ಹಾಗೂ ಕೀರ್ತಿ**

**ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಂಪೂರ್ಣ ಸಹಕಾರ**

> ಈ ಹಿಂದೆ ವಿಜಯಪುರ ಜಿಲ್ಲೆ ಹಿಂದುಳಿದ ಹಾಗೂ ಬರಗಾಲ ಜಿಲ್ಲೆ ಎಂಬ ಕುಖ್ಯಾತಿಗೊಳಗಾಗಿತ್ತು. ಈಗ ವಿಜಯಪುರ ಬದಲಾಗಿದೆ. ಜಿಲ್ಲೆಯಲ್ಲಿ ನೀರಾವರಿಯಾಗಿದ್ದರಿಂದ ಭೂಮಿ ಹಚ್ಚ ಹಸಿರಿನಿಂದ ನಳನಳಿಸುತ್ತಿದೆ. ಇಂಥ ಜಿಲ್ಲೆಯಲ್ಲಿ ಈಗ ಕ್ರೀಡಾ ಚಟುವಟಿಕೆಗಳು ಗರಿಗೆದರಿವೆ. ಕ್ರೀಡಾ ಚಟುವಟಿಕೆಗಳು ಹೊಸ ಸ್ವರೂಪ ಸಿಕ್ಕಂತಾಗಿದೆ. ಹೊಸ ಔಟ್ ಲುಕ್ ಸಿಕ್ಕಂತಾಗಿದೆ ಎಂದು ಕ್ರೀಡಾಕೂಟ ಆಯೋಜಿಸಿದ ಅಸೋಸಿಯೇಶನ್‌ನವರನ್ನು ಬಣ್ಣಿಸಿದರು. ಇಂತಹ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ಜಿಲ್ಲೆಗೆ ಹೆಮ್ಮೆ ಹಾಗೂ ಕೀರ್ತಿಯನ್ನು ತಂದಿದೆ. ವಿಜಯಪುರ ಜಿಲ್ಲೆಯು ಸೈಕ್ಲಿಂಗ್ ಸೇರಿದಂತೆ ವಿವಿಧ ಕ್ರೀಡೆಗಳಿಗೆ ಈಗಾಗಲೇ ಹೆಸರುವಾಸಿಯಾಗಿದೆ.
> -ಎಂ.ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

# ಇಡೀ ಗಲ್ಫ್ ಪ್ರದೇಶಕ್ಕೆ ಅಮೆರಿಕದ ರಾಷ್ಟ್ರೀಯ ಧ್ವಜ ಹೊದಿಸಿದ ಟ್ರಂಪ್

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಯುದ್ಧದ ಅಸ್ತವ್ಯಸ್ತತೆಯನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ಮುಂದಾಗುತ್ತಿಲ್ಲ. ಅದರಲ್ಲೂ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಯುದ್ಧ ನಿಲ್ಲಿಸುವ ಯಾವುದೇ ಇರಾದೆ ಇದ್ದಂತಿಲ್ಲ. ಒಂದು ಕಡೆ ಶಾಮತಿ ಮಾತುಕತೆಗಳನ್ನು ಪ್ರಸ್ತಾಪಿಸುವ ಅವರು, ಮತ್ತೊಂದೆಡೆ ಇಡೀ ಇರಾನ್ ಸರ್ವನಾಶ ಮಾಡುವ ಹೇಳಿಕೆ ನೀಡುತ್ತಾರೆ.

ಇದಕ್ಕೆ ಪುಷ್ಠಿ ಎಂಬಂತೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಡೀ ಗಲ್ಫ್ ಪ್ರದೇಶಕ್ಕೆ ಅಮೆರಿಕದ ರಾಷ್ಟ್ರೀಯ ಧ್ವಜವನ್ನು ಹೊದಿಸಿದ ಎಐ ಫೋಟೋವೊಂದನ್ನು ತಮ್ಮ ಟ್ರೂತ್ ಸೋಶಿಯಲ್ ಮಿಡಿಯಾದಲ್ಲಿ ಪೋಸ್ಟ್ ಮಾಡಿದ್ದಾರೆ. ಕೇವಲ ಇಷ್ಟೇ ಆಗಿದ್ದರೆ, ಏನೋ ಅವರ ಆಸೆ ಎಂದು ಸುಮ್ಮನಾಗಬಹುದಿತ್ತು. ಆದರೆ ಟ್ರಂಪ್ ಅವರು ಹಾರ್ಮುಜ್ ಜಲಸಂಧಿ ಗಸ್ತು ತಿರುಗುತ್ತಿರುವ ಇರಾನ್‌ನ ದೋಣಿಗಳ ಮೇಲೆ ಕ್ಷಿಪಣಿ ದಾಳಿಗಳು, ಬಾಹ್ಯಾಕಾಶ ಯುದ್ಧದ ರಚಿತ ಫೋಟೋಗಳನ್ನು ಹಂಚಿಕೊಂಡು ಯುದ್ಧದ ತೀವ್ರತೆಯನ್ನು ಹೆಚ್ಚಿಸಿದ್ದಾರೆ. ಕೆಲವೇ ಗಂಟೆಗಳಲ್ಲಿ




ಡೊನಾಲ್ಡ್ ಟ್ರಂಪ್ ಅವರು ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ 20ಕ್ಕೂ ಹೆಚ್ಚು ಎಐ-ರಚಿತ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಇದು ಇರಾನ್ ಮೇಲೆ ಯುಎಸ್ ಮಿಲಿಟರಿ ಕ್ರಮದ ಬೆದರಿಕೆಯೊಡ್ಡುವ ಸಂದೇಶವಾಗಿದೆ. ಅಮೆರಿಕ ನಾಯಕ ಪೋಸ್ಟ್ ಮಾಡಿದ ಒಂದು ಚಿತ್ರದಲ್ಲಿ ಗಲ್ಫ್ ನಕ್ಷೆಯ ಮೇಲೆ ಅಮೆರಿಕದ ರಾಷ್ಟ್ರೀಯ ಧ್ವಜವನ್ನು ಹೊದಿಸಲಾಗಿದ್ದು, ಬಾಣಗಳು ಎಲ್ಲಾ ಕಡೆಯಿಂದ ಇಸ್ಲಾಮಿಕ್ ಗಣರಾಜ್ಯವಾದ ಇರಾನ್ ಮೇಲೆ ಹಾರುತ್ತಿರುವಂತೆ ತೋರಿಸಲಾಗಿದೆ.

ಮತ್ತೊಂದು ಚಿತ್ರದಲ್ಲಿ ಬೈ ಬೈ, ಫಾಸ್ಟ್ ಬೋಟ್ಸ್ ಎಂಬ ಶೀರ್ಷಿಕೆ ಬರೆಯಲಾಗಿದ್ದು, ಇರಾನ್‌ನ ವೇಗದ ದೋಣಿಗಳನ್ನು ಹೊಡೆದುರುಳಿಸುವ ಅಮೆರಿಕದ ಡ್ರೋನ್ ಫೋಟೋ ತೋರಿಸಲಾಗಿದೆ. ಅಮೆರಿಕದ ಯುದ್ಧ ನೌಕೆಯೊಂದು ಇರಾನ್‌ನ ವಿಮಾನವನ್ನು ಗುರಿಯಾಗಿಸಿಕೊಂಡು ದಾಳಿ ಮಾಡುತ್ತಿರುವ ವಿಡಿಯೋವನ್ನು ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ.

ಅಮೆರಿಕ ಅಧ್ಯಕ್ಷರು ಹಂಚಿಕೊಂಡಿರುವ ಈ ಎಐ ಪೋಸ್ಟ್‌ಗಳು ಯುದ್ಧದ ತೀವ್ರತೆಯನ್ನು ಹೆಚ್ಚಿಸುವ ಆತಂಕವಿದೆ. ಏಕೆಂದರೆ ಇಂಧನ ಅಭದ್ರತೆ ನಿವಾರಣೆಗೆ ನಡೆಯುತ್ತಿರುವ ಜಾಗತಿಕ ಪ್ರಯತ್ನಗಳ ನಡುವೆಯೇ, ಹಾರ್ಮುಜ್ ಜಲಸಂಧಿ ದಾಟಲು ಟೋಲ್‌ಕಟ್ಟುವಂತೆ ಇರಾನ್ ಒತ್ತಾಯ ಮಾಡಿದೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗೆ ಜಾಗತಿಕ ಪ್ರಯತ್ನ ನಡೆಯುತ್ತಿರುವಾಗ, ಡೊನಾಲ್ಡ್ ಟ್ರಂಪ್ ಯುದ್ಧವನ್ನು ತೀವ್ರಗೊಳಿಸುವ ಸುಳಿವು ನೀಡುತ್ತಿದ್ದಾರೆ.

ಸ್ಪೇಸ್ ಫೋರ್ಸ್ ಎಂಬ ಶೀರ್ಷಿಕೆಯ ಅಡಿಯಲ್ಲಿ ಬಾಹ್ಯಾಕಾಶದಲ್ಲಿ ತಮ್ಮನ್ನು ತಾವು ಚಿತ್ರಿಸಿಕೊಳ್ಳುವ ಫೋಟೋವೊಂದನ್ನು, ಡೊನಾಲ್ಡ್ ಟ್ರಂಪ್ ಪೋಸ್ಟ್ ಮಾಡಿದ್ದಾರೆ. ಇದರಲ್ಲಿ ಟ್ರಂಪ್ ಅವರು ಉಪಗ್ರಹಗಳಿಂದ ಸುತ್ತುವರೆದಿದ್ದು, ಕಕ್ಷೆಯಿಂದ ಕ್ಷಿಪಣಿ ದಾಳಿಗಳನ್ನು ಮೇಲ್ವಿಚಾರಣೆ ಮಾಡುತ್ತಿರುವಂತೆ ತೋರಿಸಲಾಗಿದೆ. ಇನ್ನೊಂದು ಚಿತ್ರದಲ್ಲಿ ಅವರು ಬಾಹ್ಯಾಕಾಶ ನೌಕೆಯಲ್ಲಿ ಕಿಲ್ ಬಟನ್ ಒತ್ತುವುದನ್ನು ನೋಡಬಹುದು.

ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಚೀನಾ ಪ್ರವಾಸ ವಿಫಲ ಆದಂತೆ ಕಂಡುಬರುತ್ತಿದೆ. ಇರಾನ್‌ಗೆ ಸೇನಾ ನೆರವು ನೀಡುವುದನ್ನು ನಿಲ್ಲಿಸುವಂತೆ ಅಮೆರಿಕ ಅಧ್ಯಕ್ಷರು ಮಾಡಿಕೊಂಡ ಮನವಿಗೆ ಚೀನಾ ಅಧ್ಯಕ್ಷ ಕ್ಸಿ-ಜಿನ್‌ಪಿಂಗ್ ಸೊಪ್ಪು ಹಾಕಿಲ್ಲ. ಇದರಿಂದ ಅವಮಾನಕ್ಕೆ ಗುರಿಯಾದಂತೆ ಕಂಡುಬರುತ್ತಿರುವ ಟ್ರಂಪ್, ಚೀನಾದಿಂದ ವಾಪಸ್ಸಾಗುತ್ತಿದ್ದಂತೇ ಇರಾನ್‌ಗೆ ಹೊಸದಾಗಿ ಎಚ್ಚರಿಕೆ ನೀಡಿದ್ದಾರೆ. ಇರಾನ್‌ಗೆ ಗಡಿಯಾರದ ಸಮಯ ಮೀರುತ್ತಿದೆ. ಅವರು ವೇಗವಾಗಿ ನಿರ್ಧಾರಕ್ಕೆ ಬರುವುದು ಉತ್ತಮ. ಇಲ್ಲದಿದ್ದರೆ ಅವರ ಬಳಿ ಏನೂ ಉಳಿಯುವುದಿಲ್ಲ ಎಂದು ಡೊನಾಲ್ಡ್ ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ ಗಂಭೀರ ಎಚ್ಚರಿಕೆ ನೀಡಿದ್ದಾರೆ.

## ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಲು ಒಮ್ಮತದಿಂದ ಕೆಲಸ: ರೇವಂತ ರೆಡ್ಡಿ



**ಹೈದರಾಬಾದ್:** ಕಾಂಗ್ರೆಸ್ ಆಡಳಿತ ಇರುವ ರಾಜ್ಯಗಳ ಮುಖ್ಯಮಂತ್ರಿಗಳು, ಪಕ್ಷದ ಹಿರಿಯ ನಾಯಕರು ಸೇರಿ ರಾಹುಲ್ ಗಾಂಧಿಯವನ್ನು ಪ್ರಧಾನಮಂತ್ರಿ ಮಾಡಲು ಒಮ್ಮತದಿಂದ ಕೆಲಸ ಮಾಡುತ್ತೇವೆ ಎಂದು ತೆಲಂಗಾಣ ಸಿಎಂ ರೇವಂತ ರೆಡ್ಡಿ ಹೇಳಿದ್ದಾರೆ. ಕೇರಳಂ ಮುಖ್ಯಮಂತ್ರಿಯಾಗಿ ವಿ.ಡಿ ಸತೀಶನ್ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗಿಯಾದ ಅವರು, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖೀಂದರ್ ಸಿಂಗ್, ಛತ್ತೀಸಗಢ ಮಾಜಿ ಸಿಎಂ ಭೂಪೇಶ್ ಬಘೇಲ್, ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸೇರಿ ಹಲವು ನಾಯಕರನ್ನು ಭೇಟಿಯಾದರು. ತೆಲಂಗಾಣ ಉಪಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ಕೂಡ ಕಾರ್ಯಕ್ರಮದಲ್ಲಿ ಹಾಜರಿದ್ದರು. ಕಾರ್ಯಕ್ರಮದ ಚಿತ್ರಗಳನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ರೆಡ್ಡಿ, 'ಸ್ನೇಹಿತರು ಹಾಗೂ ಸಹೋದ್ಯೋಗಿಗಳ ಪುನರ್‌ಮಿಲನ' ಎಂದು ಬರೆದುಕೊಂಡಿದ್ದಾರೆ. 'ಭರವಸೆ, ಶಕ್ತಿ ಮತ್ತು ಉತ್ಸಾಹ ಎದ್ದು ಕಾಣುತ್ತಿದೆ. ನಮ್ಮ ನಾಯಕರಾದ ರಾಹುಲ್ ಗಾಂಧಿ ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ದಿನಕ್ಕಾಗಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಿದಾಗ ಈ ಶಕ್ತಿ ಮತ್ತಷ್ಟು ಬಲಗೊಳ್ಳಲಿದೆ' ಎಂದು ಅವರು ಹೇಳಿದ್ದಾರೆ.

## ಸಾಮಾಜಿಕ ಮಾಧ್ಯಮ ಬಳಸಿ ಚುನಾವಣೆ ಗೆದ್ದ ಟಿವಿಕೆ: ಡಿಎಂಕೆ ಮುಖ್ಯಸ್ಥ ಸ್ಟಾಲಿನ್

**ತಂಜಾವೂರು:** ಸಿಎಂ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ತಮಿಳುನಾಡು ವಿಧಾನಸಭಾ ಚುನಾವಣೆಗೂ ಮುನ್ನ ಯಾವುದೇ ರೀತಿಯಲ್ಲಿ ಕ್ಷೇತ್ರಕಾರ್ಯಗಳನ್ನು ಮಾಡಿಲ್ಲ. ಕೇವಲ ಸಾಮಾಜಿಕ ಮಾಧ್ಯಮವನ್ನು ಬಳಸಿಕೊಂಡು ಜನರ ಮೇಲೆ ಪ್ರಭಾವ ಬೀರುವ ಮೂಲಕ ಚುನಾವಣೆ ಗೆದ್ದಿದ್ದಾರೆ ಎಂದು ಡಿಎಂಕೆ ಮುಖ್ಯಸ್ಥ ಎಂ.ಕೆ ಸ್ಟಾಲಿನ್ ಹೇಳಿದ್ದಾರೆ. ತಂಜಾವೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಮಾತನಾಡಿದ ಸ್ಟಾಲಿನ್, ಡಿಎಂಕೆ ರೀತಿಯಲ್ಲಿ ಅವರು ಯಾವುದೇ ಕ್ಷೇತ್ರಕಾರ್ಯವನ್ನು ಮಾಡದೆ ಗೆದ್ದಿದ್ದಾರೆ. ಅವರು ಅನೇಕ ಮತಗಟ್ಟೆಗಳಲ್ಲಿ ಏಜೆಂಟ್‌ಗಳನ್ನು ಸಹ ನೇಮಿಸಿರಲಿಲ್ಲ ಎಂದು ನೇರವಾಗಿ ಟಿಎಂಕೆಯನ್ನು ಹೆಸರಿಸದೆ ಆರೋಪಿಸಿದ್ದಾರೆ. ಟಿವಿಕೆಯು ಸಾಮಾಜಿಕ ಜಾಲತಾಣಗಳ ಮೂಲಕ ಯುವ ಮತದಾರರನ್ನು ಸೆಳೆದುಕೊಂಡರು, ನಂತರ ಅವರ ಮೂಲಕ ಕುಟುಂಬ ಸದಸ್ಯರ ಮೇಲೆ ಪ್ರಭಾವ ಬೀರಲಾಗಿದೆ ಎಂದು ಹೇಳಿದ್ದಾರೆ.

### ಟಿವಿ ಶೋನಲ್ಲಿ ರೈಫಲ್ ಹಿಡಿದು ತರಬೇತಿ ನೀಡ್ತಿರೋ ಇರಾನ್ ಆಂಕರ್ಸ್

# ಮಹಿಳೆ, ಮಕ್ಕಳ ಕೈಯಲ್ಲೂ ಬಂದೂಕು

**ಟೆಹ್ರಾನ್:** ಮಧ್ಯಪ್ರಾಚ್ಯದಲ್ಲಿ ಅಮೆರಿಕಾ-ಇರಾನ್ ನಡುವೆ ಶಾಂತಿ ಒಪ್ಪಂದ ವಿಳಂಬವಾಗುತ್ತಿದ್ದು, ಪ್ರಾದೇಶಿಕವಾಗಿ ಯುದ್ಧದ ಕಾವು ಹೆಚ್ಚುತ್ತಲೇ ಇದೆ. ಈ ನಡುವೆ ಅಮೆರಿಕಾ ಇರಾನ್ ಮೇಲೆ ಮತ್ತೆ ದಾಳಿಗೆ ಸಿದ್ದವಾಗುತ್ತಿದೆ ಎಂಬ ವರದಿಗಳ ನಡುವೆ ಇಲ್ಲಿನ ನಾಗರಿಕರು ಯುದ್ಧಕ್ಕೆ ಸನ್ನದ್ಧವಾಗುವಂತೆ ಇರಾನ್ ಆಡಳಿತ ಕ್ರಮವಹಿಸಿದ್ದು, ಇರಾನ್‌ನ ರಾಜ್ಯ ಮಾಧ್ಯಮದಲ್ಲಿನ ನಿರೂಪಕರು ನಾಗರಿಕರಿಗೆ ಬಂದೂಕು ತರಬೇತಿ ಕಾರ್ಯಕ್ರಮಗಳನ್ನು ಬಹಿರಂಗವಾಗಿ ಪ್ರಸಾರ ಮಾಡಲು ಪ್ರಾರಂಭಿಸಿದ್ದಾರೆ.

**ಏನಿದು ಯುದ್ಧ ಸನ್ನದ್ಧತೆ?**

**ಇರಾನ್ ರಾಜ್ಯ ಮಾಧ್ಯಮಗಳಲ್ಲಿ ನಿರೂಪಕರಿಂದ ರೈಫಲ್ ಬಳಸುವ ಪಾಠ:** ಪ್ರಾದೇಶಿಕವಾಗಿ ಯುದ್ಧ ಉಲ್ಬಣವಾದಲ್ಲಿ ಇದನ್ನು ಎದುರಿಸಲು ಸಿದ್ದವಾಗುವಂತೆ ರಾಷ್ಟ್ರವ್ಯಾಪಿ ಸನ್ನದ್ಧತೆ ಮತ್ತು ರಕ್ಷಣಾ ಅಭಿಯಾನ ಎಂದು ಅಧಿಕಾರಿಗಳು ವಿವರಿಸುವ ಭಾಗವಾಗಿ ದೇಶಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಸಾಮಾನ್ಯ ನಾಗರಿಕರು ಮತ್ತು ಹದಿಹರೆಯದವರನ್ನು ಒಳಗೊಂಡ ಸಮಾನಾಂತರ ಶಸ್ತ್ರಾಸ್ತ್ರ ಕವಾಯತುಗಳನ್ನು ನಡೆಸುತ್ತಿರುವ ಭಾಗವಾಗಿ ಇರಾನ್ ರಾಜ್ಯ ಮಾಧ್ಯಮದ ಆಂಕರ್‌ಗಳು ಕಾರ್ಯಕ್ರಮಗಳಲ್ಲಿ ಇರಾನ್ ಮಿಲಿಟರಿಯ ಬೋಧಕರು ಆಕ್ರಮಣಕಾರಿ ರೈಫಲ್‌ಗಳನ್ನು ಹೇಗೆ ನಿರ್ವಹಿಸಬೇಕು ಎಂದು ತರಬೇತಿ ನೀಡುತ್ತಿದ್ದಾರೆ. ಸದ್ಯ ಈ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

**ಬಂದೂಕು ತರಬೇತಿ ವೇಳೆ UAE ಧ್ವಜವನ್ನು ಗುರಿಯಾಗಿಸಿ ನಿರೂಪಕ** ಈ ವಿಡಿಯೋಗಳಲ್ಲಿ 7.6239mm ಬುಲೆಟ್‌ಗಳನ್ನು AK-47 ರೈಫಲ್‌ನ ರೂಪಾಂತರವಾಗಿರುವ ಈಸ್ಟ್ ಜರ್ಮನ್ MPi-KMS ಅಸಾಲ್ಟ್ ರೈಫಲ್‌ಗಳಂತೆ ಕಾಣುವ ಗನ್‌ಗಳನ್ನು ಹಿಡಿದು, ಮಿಲಿಟರಿ ತಜ್ಞರು ತೋರಿಸಿಕೊಡುವ ವಿಚಾರಗಳನ್ನು ಇರಾನಿನ ರಾಜ್ಯ ಮಾಧ್ಯಮಗಳ ಪ್ರಸಾರಕರು ಅದನ್ನು ಅನುಸರಿಸುತ್ತಾ ಗುಂಡು ಹಾರಿಸುತ್ತಿರುವುದು ಕಂಡುಬಂದಿದೆ. ಇಲ್ಲಿ ಗಮನಸೆಳೆದ ಮತ್ತೊಂದು ಅಂಶವೆಂದರೆ, ಟಿವಿಯಲ್ಲಿ ಈ ರೀತಿಯಾಗಿ



- ಯುದ್ಧಕ್ಕೆ ಸಿದ್ದವಾಗಿರಲು ಇರಾನ್ ಸಾರ್ವಜನಿಕರಿಗೆ ಬಂದೂಕು ನಿರ್ವಹಣೆಯ ತರಬೇತಿ ನೀಡುತ್ತಿರುವ ಇರಾನ್ ಆಡಳಿತ
- ಮಿಲಿಟರಿ ತಜ್ಞರೊಂದಿಗೆ ಸೇರಿ ಟಿವಿಯಲ್ಲಿ ರೈಫಲ್ ಬಳಕೆಯ ತರಬೇತಿ ನೀಡುತ್ತಿರುವ ಇರಾನಿನ ರಾಜ್ಯಮಾಧ್ಯಮದ ನಿರೂಪಕರು, ಯುಎಇ ಧ್ವಜವನ್ನು ಟಾರ್ಗೆಟ್ ಮಾಡಿದ ಆಂಕರ್
- ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳು, ಮಹಿಳೆಯರು, ಪುರಷರು ಎಲ್ಲರ ಕೈಗೂ ಬಂದೂಕಿಟ್ಟು ಇರಾನ್ ಟ್ರೈನಿಂಗ್!

ನಿರೂಪಕರು ಮಿಲಿಟರಿ ತಜ್ಞರ ಮಾರ್ಗದರ್ಶನವನ್ನು ಪಾಲಿಸುತ್ತಾ ಬಂದೂಕನ್ನು ನಿರ್ವಹಿಸಿದ್ದು, ಈ ವೇಳೆ, ನಿರೂಪಕನು ಯುಎಇ ಧ್ವಜವನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ್ದಾನೆ.

**ಮಹಿಳೆಯರ ಕೈಯಲ್ಲೂ ಬಂದೂಕು ಇಟ್ಟ ಇರಾನ್:** ಇನ್ನು, ಇರಾನ್‌ನ ಸಾರ್ವಜನಿಕ ಸ್ಥಳಗಳಲ್ಲೂ ನಾಗರಿಕರಿಗೆ ಬಂದೂಕಿನ ತರಬೇತಿ ನೀಡುತ್ತಿದ್ದು, ಟೆಹ್ರಾನ್‌ನ ತಾಜ್ರಿಶ್ ಸ್ಕ್ವೇರ್‌ನ ದೃಶ್ಯಗಳು ಸಾರ್ವಜನಿಕ ಶಸ್ತ್ರಾಸ್ತ್ರ ತರಬೇತಿ ನಡೆಸಿದ್ದು, ಇದರಲ್ಲಿ ಪುರುಷರು ಮತ್ತು ಮಹಿಳೆಯರು, ಯುವಕರು ಮತ್ತು ಹಿರಿಯರು ಭಾಗವಹಿಸಿದ್ದಾರೆ. ಇದರಲ್ಲಿ ಗಮನಾರ್ಹವೆಂದರೆ, ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಹೆಚ್ಚಿನ ಮಾನ್ಯತೆ ನೀಡದ ಇರಾನ್‌ನಲ್ಲಿ ಯುದ್ಧದ ಸಮಯದಲ್ಲಿ ರೈಫಲ್ ಮಹಿಳೆಯರನ್ನು ತೊಡಗಿಸಿಕೊಂಡಿದ್ದಾರೆ.

ಟ್ರಂಪ್‌ಗೆ ಇರಾನ್ ಸೈಲೆಂಟ್ ಹೊಡೆತ, ಅಮೆರಿಕಕ್ಕೆ ಎಷ್ಟೆಲ್ಲಾ ಹಾನಿಯಾಗಿದೆ ಗೊತ್ತಾ?, ಸಾಕ್ಷಿ ಸಮೇತ ಸತ್ಯ ರಿವೀಲ್ ಮುಂದುವರೆದು ಇದು ಜಿಹಾದ್, ಪ್ರತಿರೋಧ ಮತ್ತು ರಕ್ಷಣೆಯ ಪರಿಕಲ್ಪನೆಗಳನ್ನು ಕಲಿಸಲು ಉದ್ದೇಶಿಸಲಾಗಿದ್ದು, ಸಮಾಜವು ಸಂಘರ್ಷಕ್ಕೆ ಸಿದ್ಧವಾಗಿರಬೇಕು, ಸಾರ್ವಜನಿಕರು ಸಾಮೂಹಿಕ ಸಿದ್ಧತೆ, ಜವಾಬ್ದಾರಿಯೊಂದಿಗೆ ಗುರುತಿಸಿಕೊಳ್ಳಬೇಕು ಎಂಬುದನ್ನು ತಿಳಿಸುವ ಗುರಿಯನ್ನು ಆಂಕರ್‌ಗಳು ಶಸ್ತ್ರಾಸ್ತ್ರಗಳನ್ನು ನಿರ್ವಹಿಸುವುದನ್ನು ತೋರಿಸುವ ಮೂಲಕ ಈ ಕ್ರಮವನ್ನು ಸಾಮಾನ್ಯವಾಗಿಸುವ ನಿರ್ಧಾರ ಮಾಡಲಾಗಿದೆ ಎಂದಿದ್ದಾರೆ.

**ಇರಾನ್ ರಾಜ್ಯಮಾಧ್ಯಮದ ಅಧಿಕಾರಿಗಳು ಹೇಳಿದ್ದೇನು?**

ಇರಾನ್‌ನಲ್ಲಿ ಸಾರ್ವಜನಿಕವಾಗಿ TV, ಪ್ರಮುಖ ಸ್ಥಳಗಳಲ್ಲಿ ಬಂದೂಕಿನ ತರಬೇತಿ ನೀಡುತ್ತಿರುವ ಕುರಿತು ಪ್ರತಿಕ್ರಿಯೆ ನೀಡಿದ ಇರಾನ್‌ನ ರಾಜ್ಯ ದೂರದರ್ಶನ ಜಾಲ IRIB ಯ ಉಪ ಮುಖ್ಯಸ್ಥ ಮೊಹ್ಸೆನ್ ಬರ್ಮೆಹ್ನಿ ಇದನ್ನು ಸಮರ್ಥಿಸಿಕೊಂಡಿದ್ದು, US ಹಾಗೂ ಇಸ್ರೇಲ್ ದೇಶಗಳನ್ನು ನೇರವಾಗಿ ಉಲ್ಲೇಖಿಸದೆ, ಪ್ರಮುಖ ಶಕ್ತಿ ಮತ್ತು ಜಾಗತಿಕ ದಬ್ಬಾಳಿಕೆಯನ್ನು ಇರಾನ್ ಎದುರಿಸುತ್ತಿದ್ದು, ಈ ಸಮಯದಲ್ಲಿ ಶಸ್ತ್ರಾಸ್ತ್ರಗಳ ಪರಿಚಿಯ ಮಾಡಿಸುವುದು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ನೈತಿಕ ತರಬೇತಿಯ ಭಾಗವಾಗಿ ನಡೆಸಲಾಗುತ್ತಿದೆ ಎಂದಿದ್ದಾರೆ.

## ಮಿನಿ ನ್ಯೂಸ್

### ಉತ್ತರ ಪ್ರದೇಶದಲ್ಲಿ ಭೀಕರ ರಸ್ತೆ ಅಪಘಾತ, 8 ಮಂದಿ ಸಾವು

**ಲಖಿಂಪುರ್ ಖೇರಿ:** ಉತ್ತರ ಪ್ರದೇಶದ ಸಿಸಯ್ಯ, ಲಖಿಂಪುರ್‌ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ ಎಂಟು ಮಂದಿ ಮೃತಪಟ್ಟಿದ್ದಾರೆ. ಲಖಿಂಪುರ್‌ನಿಂದ ಸಿಸಯ್ಯ ಕಡೆಗೆ ತೆರಳುತ್ತಿದ್ದ ವ್ಯಾನ್, ಉಂಚಗಾಂವ್ ಮತ್ತು ಭರೆಹ್ತಾ ಗ್ರಾಮಗಳ ಮಧ್ಯೆ ಟ್ರಕ್‌ಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಧೌರಹ್ರಾ ವಲಯಾಧಿಕಾರಿ ಶಂಶೇರ್ ಬಹುದ್ದೂರ್ ಸಿಂಗ್ ತಿಳಿಸಿದ್ದಾರೆ.

### ಏರ್ ಶೋ ವೇಳೆ ಆಗಸದಲ್ಲೇ ಯುದ್ಧ ವಿಮಾನಗಳ ಡಿಕ್ಕಿ : ಪಾರಾದ ಪೈಲಟ್‌ಗಳು

**ವಾಷಿಂಗ್ಟನ್:** ಏರ್ ಶೋ ವೇಳೆ ಅಮೆರಿಕದ ಎರಡು ಯುದ್ಧ ವಿಮಾನಗಳು ಆಗಸದಲ್ಲೇ ಡಿಕ್ಕಿಯಾಗಿ ಪತನಗೊಂಡಿದ್ದು, ವಿಮಾನಗಳಲ್ಲಿ ಇದ್ದ ನಾಲ್ಕು ಸಿಬ್ಬಂದಿಗಳು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆ ಅಮೆರಿಕದ ಮೌಂಟೇನ್ ಹೋಮ್ ವಾಯುನೆಲೆಯಲ್ಲಿ ಸಂಭವಿಸಿದೆ. ಘಟನೆ ಸಂಭವಿಸುತ್ತಿದ್ದಂತೆ ವಾಯುಪ್ರದೇಶವನ್ನು ತಕ್ಷಣವೇ ಲಾಕ್‌ಡೌನ್ ಮಾಡಲಾಗಿದೆ. ವಿಪರೀತ ಗಾಳಿಯಿಂದ ನಿಯಂತ್ರಣ ತಪ್ಪಿ ಎರಡು ಇಎ-18ಜಿ ಗ್ರೋಲರ್‌ಒಂದು ಯುದ್ಧ ವಿಮಾನಗಳು ಪರಸ್ಪರ ಡಿಕ್ಕಿ ಹೊಡೆದುಕೊಂಡಿವೆ. ತಕ್ಷಣವೇ ವಿಮಾನ ಹಾನಿಗೀಡಾಗಿ ಆಕಾಶದಲ್ಲಿ ಬೆಂಕಿ ಉಂಡೆಗಳು ಚಿಮ್ಮಿವೆ ಎರಡು ವಿಮಾನಗಳು ಅಮೆರಿಕದ ವಾಯುನೆಲೆಯಿಂದ ಸುಮಾರು 2 ಮೈಲಿಗಳಷ್ಟು ದೂರದಲ್ಲಿ ಅಪಘಾತಕ್ಕೀಡಾಗಿವೆ ಘಟನೆ ಸಂಭವಿಸುತ್ತಿದ್ದಂತೆ ವಾಯು ಪಡೆಯ ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, ಘಟನೆಯನ್ನು ಮೇಲ್ವಿಚಾರಣೆ ನಡೆಸಯುತ್ತಿವೆ. ಜೊತೆಗೆ ವಿಮಾನ ಅಪಘಾತಕ್ಕೆ ನಿಖರ ಕಾರಣವೇನೆಂಬುದನ್ನ ಪತ್ತೆ ಮಾಡುತ್ತಿವೆ.

ಆಕಾಶದಲ್ಲೇ ಉರಿದ ವಿಮಾನ, ಪೈಲಟ್ ಸೇಫ್ಇನ್ನೂ ಫೈಟರ್ ಜೆಟ್‌ಗಳು ಪರಸ್ಪರ ಡಿಕ್ಕಿ ಹೊಡೆದುಕೊಂಡು ಆಗಸದಲ್ಲೇ ಹೊತ್ತಿ ಉರಿದರೂ, ಫೈಟರ್ ಪೈಲಟ್ ಸೇರಿ ನಾಲ್ವರು ಸಿಬ್ಬಂದಿ ಪವಾಡ ಸದೃಶ್ಯವಾಗಿ ಬದುಕುಳಿದಿದ್ದಾರೆ. ಮೌಂಟೇನ್ ಹೋಮ್ ವಾಯುನೆಲೆಯಲ್ಲಿ ಯುದ್ಧ ವಿಮಾನಗಳು ಅಪಘಾತಕ್ಕೀಡಾಗಿರುವುದು ಇದೇ ಮೊದಲೇನಲ್ಲ. 2018 ರಲ್ಲಿ ಹ್ಯಾಂಗ್ ಗ್ಲೈಡರ್ ಪೈಲಟ್ ರನ್‌ವೇಯಲ್ಲಿ ಅಪಘಾತಕ್ಕೀಡಾಗಿ ಸಾವನ್ನಪ್ಪಿದರು, 2003ರಲ್ಲಿ, ಥಂಡರ್‌ಬರ್ಡ್ ಜೆಟ್ ಅಪಘಾತಕ್ಕೀಡಾಗಿತ್ತು. ಆದ್ರೆ ಪೈಲಟ್ ಸುರಕ್ಷಿತವಾಗಿದ್ದರು.

### ಯುಎಇ ಪರಮಾಣು ಸೌಲಭ್ಯದ ಮೇಲಿನ ದಾಳಿಗೆ ಭಾರತ ಖಂಡನೆ



**ನವದೆಹಲಿ:** ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ಬರಾಕಾ ಪರಮಾಣು ಸೌಲಭ್ಯವನ್ನು ಗುರಿಯಾಗಿಸಿಕೊಂಡು ನಡೆದ ಡ್ರೋನ್ ದಾಳಿಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ಅಪಾಯಕಾರಿ ಉಲ್ಬಣವನ್ನು ಸೂಚಿಸಿದ್ದು,ಗಲ್ಫ್ ರಾಷ್ಟ್ರದ ಏಕೈಕ ಪರಮಾಣು ವಿದ್ಯುತ್ ಸ್ಥಾವರದ ಬಳಿ ಜನರೇಟರ್ ಅನ್ನು ಡ್ರೋನ್ ಹೊಡೆದು ಸಂಕೀರ್ಣದ ಪರಿಧಿಯಲ್ಲಿ ಬೆಂಕಿ ಹೊತ್ತಿಕೊಂಡ ಒಂದು ದಿನದ ನಂತರ ನವದೆಹಲಿಯ ಪ್ರತಿಕ್ರಿಯೆ ಬಂದಿದೆ. ದಾಳಿಯ ಜವಾಬ್ದಾರಿಯನ್ನು ಯಾರೂ ಹೊತ್ತುಕೊಂಡಿಲ್ಲ. ಡ್ರೋನ್ ದಾಳಿಯ ಮೂಲವನ್ನು ನಿರ್ಧರಿಸಲು ಕೆಲಸ ಮಾಡುತ್ತಿದೆ ಎಂದು ಯುಎಇಯ ರಕ್ಷಣಾ ಸಚಿವಾಲಯ ತಿಳಿಸಿದೆ.

ಈ ಘಟನೆಯು ಪಶ್ಚಿಮ ಏಷ್ಯಾದಾದ್ಯಂತ ಉದ್ವಿಗ್ನತೆಯಲ್ಲಿ ತೀವ್ರ ಏರಿಕೆಯ ಭಯವನ್ನು ಹುಟ್ಟುಹಾಕಿದೆ. ಯುಎಇಯಲ್ಲಿ ಬರಾಕಾ ಪರಮಾಣು ಸೌಲಭ್ಯವನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಹೇಳಿದೆ. ಇಂತಹ ಕ್ರಮಗಳು ಸ್ವೀಕಾರಾರ್ಹವಲ್ಲ ಮತ್ತು ಅಪಾಯಕಾರಿ ಉಲ್ಬಣವನ್ನು ಪ್ರತಿನಿಧಿಸುತ್ತವೆ. ನಾವು ತುರ್ತಾಗಿ ಸಂಯಮ ಮತ್ತು ಸಂವಾದ ಮತ್ತು ರಾಜತಾಂತ್ರಿಕತೆಗೆ ಮರಳಬೇಕೆಂದು ಕರೆ ನೀಡುತ್ತೇವೆ ಎಂದು ಅದು ಹೇಳಿದೆ.

## ಹಂಗಾಮಿ ಸ್ಪೀಕರ್‌ಗೆ ಸುಧಾಕರನ್ ಹೆಸರು ಶಿಫಾರಸು: ಸಿಎಂ ವಿ.ಡಿ.ಸತೀಶನ್

**ತಿರುವನಂತಪುರ:** ಹಿರಿಯ ಶಾಸಕ ಜಿ. ಸುಧಾಕರನ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸಲು ಸಂಪುಟ ಶಿಫಾರಸು ಮಾಡಿದೆ.



ಶಾಸಕರ ಪ್ರಮಾಣವಚನ, ಸ್ಪೀಕರ್ ಆಯ್ಕೆಗಾಗಿ ವಿಧಾನಸಭೆ ಅಧಿವೇಶನ ಕರೆಯುವಂತೆ ರಾಜ್ಯಪಾಲರನ್ನು ಕೋರಲು ಸಂಪುಟ ಸಭೆ ನಿರ್ಧರಿಸಿತು ಎಂದು ಸಿಎಂ ವಿ.ಡಿ.ಸತೀಶನ್ ತಿಳಿಸಿದರು.

ಇದೇ 21ರಂದು ಶಾಸಕರ ಪ್ರಮಾಣ ವಚನ ಮತ್ತು ಇದೇ 22ರಂದು ಸ್ಪೀಕರ್ ಆಯ್ಕೆ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ.

**ಮರು ತನಿಖೆಗೆ ಎಸ್‌ಐಟಿ ರಚನೆ:** ಆಲಪ್ಪುಳದಲ್ಲಿ 2023ರಲ್ಲಿ ಮಾಜಿ ಸಿಎಂ ಪಿಣರಾಯಿ ವಿಜಯನ್‌ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ನಡೆದ ಪ್ರತಿಭಟನೆ ವೇಳೆ ಇಬ್ಬರು ಯುವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ನಡೆದಿತ್ತು.

ಈ ಪ್ರಕರಣದ ಮರು ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಸಂಪುಟ ಅನುಮೋದನೆ ನೀಡಿದೆ.

ಈ ಪ್ರಕರಣದ ಮರು ತನಿಖೆಗೆ ಆಲಪ್ಪುಳ ಜಿಲ್ಲಾ ನ್ಯಾಯಾಲಯ 2024ರ ನವೆಂಬರ್ 8ರಂದು ಆದೇಶಿಸಿತ್ತು. ಆದರೆ ಹಿಂದಿನ ಸರ್ಕಾರ ಈ ಕುರಿತು ನಿರ್ಲಕ್ಷ್ಯ ತೋರಿತ್ತು ಎಂದು ಸಿ.ಎಂ ದೂರಿದರು.

ರಾಜಕೀಯ ದ್ವೇಷದ ಆರೋಪಗಳನ್ನು ತಿರಸ್ಕರಿಸಿದ ಅವರು, 'ಸರ್ಕಾರ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುತ್ತಿದೆ. ಆದರೆ, ಹಿಂದೆ ನಡೆದದ್ದನ್ನು ನಾವು ಮರೆತಿಲ್ಲ' ಎಂದು ಸೂಚ್ಯವಾಗಿ ಹೇಳಿದರು.

ಸರ್ಕಾರದ ಖಜಾನೆಯ ಆರ್ಥಿಕ ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಲಾಗುವುದು ಎಂದೂ ಅವರು ತಿಳಿಸಿದರು.

## ಚುನಾವಣೋತ್ತರ ಹಿಂಸಾಚಾರ: 181 ಹೊಸ ಎಫ್‌ಐಆರ್ ದಾಖಲು

**ಕೋಲ್ಕತ್ತ :** ಪಶ್ಚಿಮ ಬಂಗಾಳದ 2021ರ ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿ ಅಲ್ಲಿನ ಸಿಐಡಿ, ಹೊಸದಾಗಿ 458 ತನಿಖೆಯನ್ನು ಆರಂಭಿಸಿದ್ದು, ಮತ್ತೆ 181 ಪ್ರಕರಣಗಳನ್ನು ದಾಖಲಿಸಿಕೊಂಡಿದೆ. 'ಈ ಹಿಂದೆ ಅಂತಿಮ ವರದಿ ಸಲ್ಲಿಕೆಯಾಗಿದ್ದ 59 ಪ್ರಕರಣಗಳ ಬಗ್ಗೆಯೂ ಸಿಐಡಿ ಮತ್ತೆ ತನಿಖೆ ಆರಂಭಿಸಿದೆ' ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.




'ಚುನಾವಣೋತ್ತರ ಹಿಂಸಾಚಾರದ ಬಗ್ಗೆ ಬಂದಿರುವ ದೂರುಗಳನ್ನು ಪರಿಗಣಿಸಿ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಸಿಐಡಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 2021ರ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ತೀವ್ರ ರಾಜಕೀಯ ತಿಕ್ಕಾಟಗಳು ನಡೆದಿದ್ದವು.

ಚುನಾವಣಾ ಫಲಿತಾಂಶದ ಬಳಿಕ ಹಲವು ಜಿಲ್ಲೆಗಳಲ್ಲಿ ದಾಳಿಗಳು, ಬೆದರಿಕೆಗಳು ಮತ್ತು ಜನರ ಸ್ಥಳಾಂತದ ಮಾಡಿರುವ ಬಗ್ಗೆ ಆರೋಪಗಳು ಕೇಳಿಬಂದಿದ್ದರಿಂದ ಈ ಬಗ್ಗೆ ಸಿಐಡಿ ತನಿಖೆ ನಡೆಸುತ್ತಿದೆ.

# ಸುಪ್ರೀಂ ಕೋರ್ಟ್‌ಗೆ ಇನ್ನೂ ನಾಲ್ವರು ನ್ಯಾಯಮೂರ್ತಿಗಳ ನೇಮಕಕ್ಕೆ ಸುಗ್ರೀವಾಜ್ಞೆ

**ನವದೆಹಲಿ:** ಸುಪ್ರೀಂಕೋರ್ಟ್‌ಗೆ ನಾಲ್ವರು ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಅಧ್ಯಾದೇಶವನ್ನು ಕೇಂದ್ರ ಸರ್ಕಾರ ಹೊರಡಿಸಿದೆ. ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆ, ನ್ಯಾಯ ವಿತರಣೆಯನ್ನು ವೇಗಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ರಿಂದ 37ಕ್ಕೆ ಹೆಚ್ಚಿಸುವ ಆ ದೇಶವನ್ನು ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದೆ. ಮುಖ್ಯ ನ್ಯಾಯಮೂರ್ತಿಯನ್ನು ಹೊರತುಪಡಿಸಿ ನಾಲ್ವರು ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕಕ್ಕೆ ಈ ಕ್ರಮ ದಾರಿ ಮಾಡಿಕೊಡಲಿದೆ.

ಈ ಸಂಬಂಧ ''ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಅಧ್ಯಾದೇಶ 2026''ಕ್ಕೆ ರಾಷ್ಟ್ರಪತಿ ದ್ರೌಪತಿ ಮುರ್ಮು ಅನುಮೋದನೆ ನೀಡಿದ್ದು, ಗಜೆಟ್‌ಅಧಿಸೂಚನೆ ಹೊರಡಿಸಲಾಗಿದೆ. ಸಂಸತ್ ಅಧಿವೇಶನ ನಡೆಯದಿರುವ ಕಾರಣ ಸಂವಿಧಾನದ 123ನೇ ವಿಧಿಯಡಿ ಕೇಂದ್ರ ಸರ್ಕಾರ ಅಧ್ಯಾದೇಶ ಹೊರಡಿಸದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಕೆಲ ದಿನಗಳ ಹಿಂದೆ ಈ ಪ್ರಸ್ತಾವನೆಗೆ ಅನುಮೋದನೆ ನೀಡಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಈ ವರ್ಷದ ಆರಂಭದಲ್ಲೇ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದರು ಎಂದು ತಿಳಿದುಬಂದಿದೆ. ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ 92 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಉಳಿದಿವೆ. ಸಂವಿಧಾನ ಪೀಠಗಳನ್ನು ನಿಯಮಿತವಾಗಿ ರಚಿಸಲು



ನ್ಯಾಯಮೂರ್ತಿಗಳ ಕೊರತೆ ಅಡ್ಡಿಯಾಗುತ್ತಿದೆ ಎಂಬ ಆತಂಕದ ನಡುವೆ ಈ ನಿರ್ಧಾರ ಮಹತ್ವ ಪಡೆದುಕೊಂಡಿದೆ.

2019ರಲ್ಲಿ ಕೊನೆಯದಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು 30ರಿಂದ 33ಕ್ಕೆ ಹೆಚ್ಚಿಸಲಾಗಿತ್ತು. ಇದೀಗ ಆರು ವರ್ಷಗಳ ಬಳಿಕ ಮತ್ತೆ ಹೆಚ್ಚಳ ಮಾಡಲಾಗಿದೆ. ಸಂವಿಧಾನದ 124(1)ನೇ ವಿಧಿಯ ಪ್ರಕಾರ ಸುಪ್ರೀಂ ಕೋರ್ಟ್‌ಗೆ ಮುಖ್ಯ ನ್ಯಾಯಮೂರ್ತಿ, ಇತರ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಸಂಸತ್ತು ಕಾನೂನಿನ ಮೂಲಕ ನಿಗದಿಪಡಿಸಬಹುದು. ಪ್ರಕರಣಗಳ ಹೆಚ್ಚಳಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಹೆಚ್ಚಿಸುವ ವ್ಯವಸ್ಥೆ ಇದೆ. ನ್ಯಾಯಮೂರ್ತಿಗಳ ಸಂಖ್ಯೆ 37ಕ್ಕೆ ಏರಿಕೆಯಾಗುವುದರಿಂದ, ಮುಂದಿನ ತಿಂಗಳುಗಳಲ್ಲಿ ಹಲವು ಹೊಸ ನೇಮಕಾತಿಗಳು ನಡೆಯಲಿವೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಅವಧಿಯಲ್ಲಿ ಒಟ್ಟು 10 ಹುದ್ದೆಗಳು ಭರ್ತಿಯಾಗಬೇಕಿದೆ ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ ಸುಪ್ರೀಂ ಕೋರ್ಟ್‌ನಲ್ಲಿ ಈ ವರ್ಷ ಹಲವು ನಿವೃತ್ತಿಗಳೂ ಎದುರಾಗಲಿವೆ. ನ್ಯಾಯಮೂರ್ತಿಗಳಾದ ಪಂಕಜ್ ಮಿಥಲ್ ಜೂನ್ 6ರಂದು, ಜೆ.ಕೆ. ಮಹೇಶ್ವರಿ ಜೂನ್ 28ರಂದು, ಸಂಜಯ್ ಕರೋಲ್ ಆಗಸ್ಟ್ 28ರಂದು ಹಾಗೂ ಸತೀಶ್ ಚಂದ್ರ ಶರ್ಮಾ ನವೆಂಬರ್ 29ರಂದು ನಿವೃತ್ತಿಯಾಗಲಿದ್ದಾರೆ. 1950ರ ಜನವರಿ 28ರಂದು ಸ್ಥಾಪನೆಯಾದ ಸುಪ್ರೀಂ ಕೋರ್ಟ್ ಆರಂಭದಲ್ಲಿ ಒಟ್ಟು ಎಂಟು ನ್ಯಾಯಮೂರ್ತಿಗಳೊಂದಿಗೆ ಕಾರ್ಯಾರಂಭ ಮಾಡಿತ್ತು. ನಂತರ 1960, 1977, 1986, 2008 ಹಾಗೂ 2019ರಲ್ಲಿ ಹಂತ ಹಂತವಾಗಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿತ್ತು.

# ಪಾಕಿಸ್ತಾನ-ಚೀನಾ ಸಬ್‌ಮರೀನ್ ಒಪ್ಪಂದ; ಭಾರತಕ್ಕೆ ಕಡಲ್ಗಳ್ಳರ ಸವಾಲು

## ಪಾಕಿಸ್ತಾನಕ್ಕೆ 8 ಹ್ಯಾಂಗೋರ್ ಸಬ್‌ಮರೀನ್ ಕೊಡಲಿದೆ ಚೀನಾ, ಭಾರತದ ವಿರುದ್ಧ ಪಾಕಿಸ್ತಾನವನ್ನು ಎತ್ತಿಕಟ್ಟುವ ಚೀನಾದ ಕುತಂತ್ರ ಫಲಿಸದು

**ಬೀಜಿಂಗ್:** ಭಾರತದ ಗಡಿಯಲ್ಲಿ ಸದಾ ಕ್ಯಾತೆ ತೆಗೆಯುವ ಪಾಕಿಸ್ತಾನ ಮತ್ತು ಚೀನಾ, ಇದೀಗ ಸಮುದ್ರದೊಳಗೂ ತಮ್ಮ ಕುತಂತ್ರದಾಟವನ್ನು ಮುಂದುವರೆಸಿವೆ. ಭಾರತವನ್ನು ಕಟ್ಟಿಹಾಕಲು ಭೂಗಡಿಯಲ್ಲಿ ನಾನಾ ತಂತ್ರಗಳನ್ನು ರೂಪಿಸುತ್ತಿದ್ದ ಈ ಎರಡೂ ರಾಷ್ಟ್ರಗಳು, ಈಗ ಹಿಂದೂ ಮಹಾಸಾಗರ ಮತ್ತು ಅರೇಬಿಯನ್ ಸಮುದ್ರದಲ್ಲಿ ತಮ್ಮ ಪಾರುಪತ್ಯ ಮೆರೆಯಲು ಮುಂದಾಗಿವೆ. ಪಾಕಿಸ್ತಾನಕ್ಕಾಗಿ ಸುಮಾರು 5 ಬಿಲಿಯನ್ ಡಾಲರ್ ವೆಚ್ಚದಲ್ಲಿ ಅತ್ಯಾಧುನಿಕ ಜಲಾಂತರ್ಗಾಮಿಗಳನ್ನು ನಿರ್ಮಿಸುತ್ತಿರುವ ಚೀನಾ, ಹ್ಯಾಂಗೋರ್ ಕ್ಲಾಸ್ ಮಾದರಿಯ ಒಟ್ಟು 8 ಸಬ್‌ಮರೀನ್‌ಗಳನ್ನು ನೀಡಲಿದೆ.

ಈಗಾಗಲೇ ಚೀನಾದಿಂದ 3 ಹ್ಯಾಂಗೋರ್ ಸಬ್‌ಮರೀನ್ ಸ್ವೀಕರಿಸಿರುವ ಪಾಕಿಸ್ತಾನ, ಇನ್ನುಳಿದ 5 ಡೀಸೆಲ್-ಎಲೆಕ್ಟ್ರಿಕ್ ಸಬ್‌ಮರೀನ್‌ಗಳಿಗಾಗಿ ಜಾತಕ ಪಕ್ಷಿಯಂತೆ ಕಾದು ಕುಳಿತಿದೆ. ಪಾಕಿಸ್ತಾನದ ನೌಕಾಪಡೆಯ ಬಲವನ್ನು ಹೆಚ್ಚಿಸಲು ಮತ್ತು ಭಾರತದ ನೌಕಾಪಡೆಗೆ ಸವಾಲೆಸೆಯಲು ಚೀನಾ ಈ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಪಾಕಿಸ್ತಾನಕ್ಕೆ ಚೀನಾ ನೀಡುತ್ತಿರುವ ಈ ಹ್ಯಾಂಗೋರ್ ಕ್ಲಾಸ್ ಜಲಾಂತರ್ಗಾಮಿಗಳು ಭಾರತದ ಪಾಲಿಗೆ ಎಷ್ಟು ಅಪಾಯಕಾರಿ? ಚೀನಾ ಮತ್ತು ಪಾಕಿಸ್ತಾನದ ಈ ಮೆಗಾ ಡೀಲ್ ಹಿಂದಿರುವ ಅಸಲಿ ಉದ್ದೇಶವೇನು? ಬನ್ನಿ ವಿಶ್ಲೇಷಿಸೋಣ.

**ಅಲೆಗಳ ದಿಕ್ಕು ಬದಲಾಗದು**

ಪಾಕಿಸ್ತಾನದ ನೌಕಾಪಡೆಯನ್ನು ಆಧುನೀಕರಣಗೊಳಿಸುವ ನೆಪದಲ್ಲಿ, ಭಾರತವನ್ನು ಹಿಂದೂ ಮಹಾಸಾಗರ ಮತ್ತು ಅರೇಬಿಯನ್ ಸಮುದ್ರದಲ್ಲಿ ಕಟ್ಟಿಹಾಕಲು ಚೀನಾ ಮುಂದಾಗಿದೆ. 2015ರಲ್ಲಿ ಸಹಿ ಹಾಕಲಾದ 5 ಬಿಲಿಯನ್ ಡಾಲರ್ ಮೊತ್ತದ ಈ ಬೃಹತ್ ಒಪ್ಪಂದದ ಅಡಿಯಲ್ಲಿ, ಚೀನಾ ಒಟ್ಟು 8 ಹ್ಯಾಂಗೋರ್ ಕ್ಲಾಸ್ ಸಬ್‌ಮರೀನ್‌ಗಳನ್ನು ಪಾಕಿಸ್ತಾನಕ್ಕೆ ನೀಡಲಿದೆ.

ಇದರಲ್ಲಿ 4 ಜಲಾಂತರ್ಗಾಮಿಗಳನ್ನು ಚೀನಾದ ವುಚಾಂಗ್ ಶಿಪ್‌ಬಿಲ್ಡಿಂಗ್ ಇಂಡಸ್ಟ್ರಿ ಗ್ರೂಪ್ ನಿರ್ಮಿಸುತ್ತಿದ್ದರೆ, ಉಳಿದ 4 ಸಬ್‌ಮರೀನ್‌ಗಳನ್ನು ತಂತ್ರಜ್ಞಾನ ವರ್ಗಾವಣೆ ಒಪ್ಪಂದದ ಅಡಿಯಲ್ಲಿ ಪಾಕಿಸ್ತಾನದ ಕರಾಚಿ ಶಿಪ್‌ಯಾರ್ಡ್ ಆ್ಯಂಡ್ ಇಂಜಿನಿಯರಿಂಗ್ ವರ್ಕ್ಸ್‌ನಲ್ಲಿ ನಿರ್ಮಿಸಲಾಗುತ್ತಿದೆ.



ಈ ಸ್ಟೆಲ್ತ್ ತಂತ್ರಜ್ಞಾನವು ಸಮುದ್ರದೊಳಗಿನ ಯುದ್ಧದಲ್ಲಿ ಪಾಕಿಸ್ತಾನಕ್ಕೆ ದೊಡ್ಡ ಮೇಲುಗೈ ಒದಗಿಸಲಿದೆ. ಬಾಹ್ಯ ವಿನ್ಯಾಸದಲ್ಲಿ ಮಾತ್ರವಲ್ಲದೇ, ಶಸ್ತ್ರಾಸ್ತ್ರಗಳ ವಿಚಾರದಲ್ಲೂ ಈ ಹ್ಯಾಂಗೋರ್ ಜಲಾಂತರ್ಗಾಮಿಗಳು ಅತ್ಯಂತ ಅಪಾಯಕಾರಿ ಆಗಿವೆ. ಇವುಗಳಲ್ಲಿ ಅತ್ಯಾಧುನಿಕ ಸೆನ್ಸಾರ್‌ಗಳು, ಟೋರ್ಪಿಡೊಗಳು, ಆ್ಯಂಟಿ-ಶಿಪ್ ಕ್ಷಿಪಣಿಗಳನ್ನು ಅಳವಡಿಸಲಾಗಿದೆ. ಇದಲ್ಲದೇ ಪಾಕಿಸ್ತಾನದ 'ಬಾಬರ್-3' ಪರಮಾಣು ಕ್ರೂಸ್ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಸಾಮರ್ಥ್ಯವನ್ನೂ ಇವು ಹೊಂದಿವೆ. ಪಾಕಿಸ್ತಾನದ ನೌಕಾಸೇನೆಯ ಬಲ ಹೆಚ್ಚಿಸಿ, ಹಿಂದೂ ಮಹಾಸಾಗರ, ಅರೇಬಿಯನ್ ಸಮುದ್ರದಲ್ಲಿ ಭಾರತವನ್ನು ಬ್ಯುಸಿಯಾಗಿ ಇಡುವುದು ಚೀನಾದ ಉದ್ದೇಶ. ಪಾಕಿಸ್ತಾನವು ದಶಕಗಳಿಂದಲೂ ಫ್ರೆಂಚ್ ನಿರ್ಮಿತ ಹಳೆಯ ಅಗೋಸ್ಟಾ ಜಲಾಂತರ್ಗಾಮಿಗಳನ್ನು ಅವಲಂಬಿಸಿದೆ. ಆದರೆ ಈಗ ಎಂಟು ಹೊಸ ಹ್ಯಾಂಗೋರ್ ಜಲಾಂತರ್ಗಾಮಿಗಳ ಸೇರ್ಪಡೆಯು, ಅರೇಬಿಯನ್ ಸಮುದ್ರದಲ್ಲಿ ಪಾಕಿಸ್ತಾನದ ನೌಕಾ ಸಾಮರ್ಥ್ಯವನ್ನು ಹತ್ತು ಪಟ್ಟು ಹೆಚ್ಚಿಸಲಿದೆ. ಏಷ್ಯನ್ ರಾಷ್ಟ್ರಗಳನಡುವಿನ ಜಲ ಮಾರ್ಗಗಳು, ಅರೇಬಿಯನ್ ಸಮುದ್ರದ ಆಯಕಟ್ಟಿನ ಸ್ಥಳಗಳಲ್ಲಿ ತನ್ನ ನಿಯಂತ್ರಣ ಸಾಧಿಸಲು ಪಾಕಿಸ್ತಾನ ಈ ಜಲಾಂತರ್ಗಾಮಿಗಳನ್ನು ಬಳಸಿಕೊಳ್ಳಲಿದೆ. ಪ್ರಸ್ತುತ ಭೌಗೋಳಿಕ ರಾಜಕೀಯ ಸನ್ನಿವೇಶದಲ್ಲಿ ಕಡಲ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಈ ಜಲಾಂತರ್ಗಾಮಿಗಳು ನಿರ್ಣಾಯಕ ಪಾತ್ರ ವಹಿಸಲಿವೆ.

ಚೀನಾ ತನ್ನ ಬೃಹತ್ ನೌಕಾ ಸಾಮರ್ಥ್ಯ ಮತ್ತು ಆರ್ಥಿಕ ಬಲವನ್ನು ಬಳಸಿ ಪಾಕಿಸ್ತಾನವನ್ನು ಶಸ್ತ್ರಸಜ್ಜಿತಗೊಳಿಸುತ್ತಿರುವುದು ಭಾರತದ ಪಾಲಿಗೆ ದೊಡ್ಡ ತಲೆನೋವಾಗಿದೆ. ಉತ್ತರದಲ್ಲಿ ಹಿಮಾಲಯದ ಗಡಿಯಲ್ಲಿ ಚೀನಾದ ಉಪಟಳ, ಪಶ್ಚಿಮದಲ್ಲಿ ಕಾಶ್ಮೀರ ಗಡಿಯಲ್ಲಿ ಪಾಕಿಸ್ತಾನದ ಕ್ಯಾತೆ, ಈಗ ಇವೆರಡೂ ಸೇರಿ ಸಮುದ್ರದಲ್ಲಿ ಭಾರತವನ್ನು ಸುತ್ತುವರಿಯುವ ಯೋಜನೆ ಘಾತಕವಾಗಿದೆ. ಹೀಗಾಗಿ ಭಾರತವು ಏಕಕಾಲದಲ್ಲಿ ಹಲವು ರಂಗಗಳಲ್ಲಿ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ಇರಬೇಕಾದ ಅನಿವಾರ್ಯತೆ ಎದುರಾಗಿದೆ.

**ಚೀನಾದ ಪ್ಲ್ಯಾನ್ ಏನು?**

ಇನ್ನೊಂದೆಡೆ ಚೀನಾ ತನ್ನ ಸ್ವಾರ್ಥಕ್ಕಾಗಿ ಪಾಕಿಸ್ತಾನವನ್ನು ದಾಳವಾಗಿ ಬಳಸಿಕೊಳ್ಳುತ್ತಿದೆ. ಹಿಂದೂ ಮಹಾಸಾಗರದಲ್ಲಿ ತನ್ನ ನೌಕಾಪಡೆಯ ಉಪಸ್ಥಿತಿಯನ್ನು ವಿಸ್ತರಿಸುವುದು ಚೀನಾದ ಬಹುಕಾಲದ ಕನಸು. ಪಾಕಿಸ್ತಾನಕ್ಕೆ ಇಂತಹ ಅತ್ಯಾಧುನಿಕ ಜಲಾಂತರ್ಗಾಮಿಗಳನ್ನು ನೀಡುವ ಮೂಲಕ, ಚೀನಾ ಪರೋಕ್ಷವಾಗಿ ಭಾರತದ ಕಡಲ ಗಡಿಯಲ್ಲೇ ತನ್ನ ಭದ್ರತಾ ನೆಲೆಗಳನ್ನು ಬಲಪಡಿಸಿಕೊಳ್ಳುವ ಗುರಿ ಹೊಂದಿದೆ. ಭಾರತದ ಗಮನವನ್ನು ಭೂಗಡಿಯಿಂದ ಸಮುದ್ರದತ್ತ ಸೆಳೆಯುವುದು ಮತ್ತು ಭಾರತದ ರಕ್ಷಣಾ ಸಂಪನ್ಮೂಲಗಳನ್ನು ವಿಭಜಿಸುವುದು ಚೀನಾದ ಪ್ರಮುಖ ಕಾರ್ಯತಂತ್ರವಾಗಿದೆ.

ಭಾರತ ಈಗಾಗಲೇ ತನ್ನ ಕಡಲ ಗಡಿಗಳನ್ನು ಸುರಕ್ಷಿತಗೊಳಿಸಲು ಅನೇಕ ಕ್ರಮಗಳನ್ನು ಕೈಗೊಂಡಿದ್ದು, ದೇಶೀಯವಾಗಿ ಅತ್ಯಾಧುನಿಕ ಪರಮಾಣು ಜಲಾಂತರ್ಗಾಮಿಗಳನ್ನು ನಿರ್ಮಿಸುತ್ತಿದೆ. ಪಾಕಿಸ್ತಾನದ ಹೆಗಲ ಮೇಲೆ ಬಂದೂಕಿಟ್ಟು ಗುಂಡು ಹಾರಿಸಲು ಮುಂದಾಗಿರುವ ಚೀನದ ಕುತಂತ್ರಗಳನ್ನು ಭಾರತ ಖಂಡಿತ ಆಗಿಯೂ ಸೋಲಿಸಲಿದೆ. ಹಿಂದೂ ಮಹಾಸಾಗರ ಮತ್ತು ಅರೇಬಿಯನ್ ಸಮುದ್ರದಲ್ಲಿ ಅಲೆಗಳ ದಿಕ್ಕು ಬದಲಾಗದಂತೆ ಭಾರತ ನೋಡಿಕೊಳ್ಳಲಿದೆ.

ಭಾರತದ ನೌಕಾ ಸಾಮರ್ಥ್ಯವನ್ನು ಕಡೆಗಣಿಸುವ ಮಹಾಪರಾಧವನ್ನು ಚೀನಾ ಮತ್ತು ಪಾಕಿಸ್ತಾನ ಖಂಡಿತ ಮಾಡಲಾರವು. ಆದಾಗ್ಯೂ, ಭಾರತ ಎಚ್ಚರಿಕೆಯಿಂದ ಇರಬೇಕಿದೆ. ಈ ನಿಟ್ಟಿನಲ್ಲಿ ಚೀನಾ-ಪಾಕಿಸ್ತಾನ ಹ್ಯಾಂಗೋರ್ ಜಲಾಂತರ್ಗಾಮಿ ಒಪ್ಪಂದದ ಬೆಳವಣಿಗೆಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಒಟ್ಟಿನಲ್ಲಿ ಪಾಕಿಸ್ತಾನದ ಕೈಸೇರುತ್ತಿರುವ ಎಂಟು ಹ್ಯಾಂಗೋರ್ ಜಲಾಂತರ್ಗಾಮಿಗಳು ಭಾರತದ ನೌಕಾಪಡೆಗೆ ಹೊಸ ಸವಾಲನ್ನು ಎಸೆದಿವೆ. ತಂತ್ರಜ್ಞಾನ ಮತ್ತು ಶಸ್ತ್ರಾಸ್ತ್ರಗಳಲ್ಲಿ ಬಲಿಷ್ಠವಾಗಿರುವ ಈ ಜಲಾಂತರ್ಗಾಮಿಗಳನ್ನು ಎದುರಿಸಲು ಭಾರತ ತನ್ನ ನೌಕಾ ನಿಧಿ ಮತ್ತು ಕಣ್ಗಾವಲು ವ್ಯವಸ್ಥೆಯನ್ನು ಮತ್ತಷ್ಟು ಹರಿತಗೊಳಿಸಬೇಕಿದೆ. ಆಪರೇಷನ್ ಸಿಂಧೂರ ಸಮಯದಲ್ಲಿ ಪಾಕಿಸ್ತಾನಕ್ಕೆ ಚೀನಾ ನೆರವು, ಆ ರಾಷ್ಟ್ರಗಳ ನಡುವೆ ಗಟ್ಟಿಗೊಳ್ಳುತ್ತಿರುವ ರಕ್ಷಣಾ ಸಂಬಂಧಕ್ಕೆ ಸಾಕ್ಷಿ ಒದಗಿಸಿದೆ.

**ಹ್ಯಾಂಗೋರ್ ಒಳಗೊಂದು ಸುತ್ತು**

ಹ್ಯಾಂಗೋರ್-ಕ್ಲಾಸ್ ಜಲಾಂತರ್ಗಾಮಿಗಳನ್ನು ಚೀನಾದ ಪ್ರಸಿದ್ಧ ಟೈಪ್ 39 ಯುವಾನ್ ಕ್ಲಾಸ್ ಜಲಾಂತರ್ಗಾಮಿಗಳ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ. ಏರ್-ಇಂಡಿಪೆಂಡೆಂಟ್ ಪ್ರೊಪಲ್ಷನ್ ಇದರ ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆಗಳಲ್ಲಿ ಒಂದು. ಸಾಮಾನ್ಯ ಡೀಸೆಲ್-ಎಲೆಕ್ಟ್ರಿಕ್ ಜಲಾಂತರ್ಗಾಮಿಗಳು ತಮ್ಮ ಬ್ಯಾಟರಿಗಳನ್ನು ಚಾರ್ಜ್ ಮಾಡಲು ಆಗಾಗ್ಗೆ ಸಮುದ್ರದ ಮೇಲ್ಮೈಗೆ ಬರಬೇಕಾಗುತ್ತದೆ. ಆದರೆ ಎಐಪಿ ತಂತ್ರಜ್ಞಾನ ಹೊಂದಿರುವ ಈ ಹ್ಯಾಂಗೋರ್ ಜಲಾಂತರ್ಗಾಮಿಗಳು ಮೇಲ್ಮೈಗೆ ಬಾರದೇ ವಾರಗಳ ಕಾಲ ಸಮುದ್ರದ ಆಳದಲ್ಲಿಯೇ ಅಡಗಿಕೊಳ್ಳಬಲ್ಲವು. ಇದರಿಂದಾಗಿ ಶತ್ರುಗಳ ರೇಡಾರ್ ಮತ್ತು ಸೋನಾರ್ ವ್ಯವಸ್ಥೆಗಳಿಗೆ ಇವು ಸುಲಭವಾಗಿ ಸಿಕ್ಕಿಬೀಳುವುದಿಲ್ಲ.

# ಬ್ರಾಹ್ಮಣರ ಬಗ್ಗೆ ಅನುರಾಗ್ ಅವಹೇಳನಕಾರಿ ಹೇಳಿಕೆ



ಸಾಮಾಜಿಕ ಜಾಲತಾಣಗಳಲ್ಲಿ ಬ್ರಾಹ್ಮಣ ಸಮುದಾಯದ ಕುರಿತು ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ಬಾಲಿವುಡ್‌ನ ಖ್ಯಾತ ನಿರ್ದೇಶಕ ಮತ್ತು ನಟ ಅನುರಾಗ್ ಕಶ್ಯಪ್ ಕಾನೂನು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನುರಾಗ್ ಕಶ್ಯಪ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಗುಜರಾತ್‌ನ ಸೂರತ್ ನ್ಯಾಯಾಲಯವು ಪೊಲೀಸರಿಗೆ ಮಹತ್ವದ ಆದೇಶ ನೀಡಿದೆ. ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು, ಸಾರ್ವಜನಿಕ ಶಾಂತಿಗೆ ಭಂಗ ತರುವುದು, ಉದ್ದೇಶಪೂರ್ವಕ ಅವಮಾನ ಮತ್ತು ದಾರಿ ತಪ್ಪಿಸುವ ಮಾಹಿತಿ ಹರಡುವಿಕೆಗೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ನ್ಯಾಯಾಲಯವು ಅಧಿಕಾರಿಗಳಿಗೆ ಸೂಚನೆ ನೀಡಿದೆ.

ವಿಶ್ವ ಹಿಂದೂ ಪರಿಷತ್ ನಾಯಕ ಮತ್ತು ವಕೀಲ ಕಮಲೇಶ್ ರಾವಲ್ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ ಮ್ಯಾಜಿಸ್ಟ್ರೇಟ್ ಎ.ಎಸ್. ಜಾನಿ ಅವರ ಪೀಠವು ಈ ಆದೇಶವನ್ನು ಹೊರಡಿಸಿದೆ.

ನಿರ್ದೇಶಕರ ಸಾಮಾಜಿಕ ಜಾಲತಾಣದ ಪೋಸ್ಟ್‌ಗಳು ನಿರ್ದಿಷ್ಟ ಸಮುದಾಯದ ಘನತೆಗೆ ಧಕ್ಕೆ ತಂದಿವೆಯೇ ಮತ್ತು ಸಮಾಜದಲ್ಲಿ ಉದ್ವಿಗ್ನತೆ ಸೃಷ್ಟಿಸಲು ಕಾರಣವಾಗಿವೆಯೇ ಎಂಬುದನ್ನು ಪರಿಶೀಲಿಸಲು ಸಾಕಷ್ಟು ಆಧಾರಗಳಿವೆ ಎಂದು ನ್ಯಾಯಾಲಯ ಈ ಸಂದರ್ಭದಲ್ಲಿ ಅಭಿಪ್ರಾಯಪಟ್ಟಿದೆ.

ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಕಮಲೇಶ್ ರಾವಲ್ ಅವರು ಸಲ್ಲಿಸಿದ ದೂರಿನ ಪ್ರಕಾರ, ಅನುರಾಗ್ ಕಶ್ಯಪ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬ್ರಾಹ್ಮಣ ಸಮುದಾಯವನ್ನು ಗುರಿಯಾಗಿಸಿಕೊಂಡು ಆಕ್ಷೇಪಾರ್ಹ ಕಾಮೆಂಟ್‌ಗಳನ್ನು ಮಾಡಿದ್ದಾರೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಬಿಡುಗಡೆಯಾಗಿದ್ದ 'ಫುಲೆ' ಹಿಂದಿ ಸಿನಿಮಾದ ಟ್ರೇಲರ್ ಕುರಿತಾದ ಟೀಕೆಗಳಿಗೆ ಪ್ರತಿಕ್ರಿಯಿಸುವಾಗ ಈ ವಿವಾದ ಆರಂಭವಾಗಿತ್ತು ಎನ್ನಲಾಗಿದೆ.

ತಮ್ಮ ಪೋಸ್ಟ್‌ಗಳಿಗೆ ಆಕ್ಷೇಪ ವ್ಯಕ್ತಪಡಿಸಿದ ಜನರಿಗೆ ಪ್ರತಿಕ್ರಿಯೆ ನೀಡುವಾಗಲೂ ಕಶ್ಯಪ್ ಅವರು ನಿರಂತರವಾಗಿ ಇಂತಹ ಹೇಳಿಕೆಗಳನ್ನು ಮುಂದುವರಿಸಿದ್ದರು ಎಂದು ದೂರುದಾರರು ಆರೋಪಿಸಿದ್ದಾರೆ.



# ಶಿಲ್ಪಾ ಗಣೇಶ್ ಈಗ ಗಾಯಕಿ



ನಿರ್ಮಾಪಕಿಯಾಗಿ ತಮ್ಮದೇ ರೀತಿಯಲ್ಲಿ ಗುರುತಿಸಿಕೊಂಡಿರುವ, ತುಳು ಮತ್ತು ಕನ್ನಡದಲ್ಲಿ ನಿರ್ಮಾಣ ಆಗುತ್ತಿರುವ 'ಪಿಚ್ಚರ್' ಸಿನಿಮಾವನ್ನು ಶಿಲ್ಪಾ ಅವರೇ ನಿರ್ಮಾಣ ಮಾಡಿದ್ದಾರೆ. ಅಲ್ಲದೇ, ಈ ಚಿತ್ರದ ಹಾಡಿಗೆ ಧ್ವನಿ ನೀಡಿದ್ದಾರೆ.

ಆ ಬಗ್ಗೆ ಇಲ್ಲಿದೆ ಮಾಹಿತಿ..

ಸಾಮಾನ್ಯವಾಗಿ ಪ್ರಚಾರದಿಂದ ದೂರವಿರುವ ಶಿಲ್ಪಾ ಗಣೇಶ್ ಅವರು ಈಗ ಸುದ್ದಿಯಲ್ಲಿದ್ದಾರೆ. ತುಳು ಮನೆಮಾತು ಆಗಿರುವ ಶಿಲ್ಪಾ ಅವರಿಗೆ, ತಮ್ಮ ಮಾತೃಭಾಷೆಯಲ್ಲಿ ಸಿನಿಮಾ ನಿರ್ಮಿಸಬೇಕು ಎನ್ನುವ ಹಂಬಲ ಈಗ ಈಡೇರುತ್ತಿದೆ. ಕನ್ನಡದಲ್ಲಿ ನಿರ್ಮಾಪಕಿಯಾಗಿ ತನ್ನದೇ ಆದ ಛಾಪನ್ನು ಮೂಡಿಸಿರುವ ಶಿಲ್ಪಾ ಅದ್ದೂರಿಯಾಗಿ ನಿರ್ಮಿಸಿರುವ ತುಳು ಸಿನಿಮಾ 'ಪಿಚ್ಚರ್' ಜುಲೈ 24ರಂದು ತೆರೆಗೆ ಬರಲಿದೆ. ತುಳು ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಈ ಸಿನಿಮಾ ಸಿದ್ಧವಾಗಿದೆ. ತುಳು ಚಿತ್ರರಂಗಕ್ಕೆ ನಿರ್ಮಾಪಕಿಯಾಗಿ ಮಾತ್ರವಲ್ಲದೆ, ಈ ಸಿನಿಮಾದ ಮೂಲಕ ಶಿಲ್ಪಾ ಗಣೇಶ್ ಅವರು ಗಾಯಕಿಯಾಗಿ ಪರಿಚಯವಾಗುತ್ತಿದ್ದಾರೆ ಎಂಬುದು ವಿಶೇಷ. ಈಗಾಗಲೇ 'ಆನಂದ್ ಆಡಿಯೋ' ಮೂಲಕ ಬಿಡುಗಡೆ ಆಗಿರುವ 'ಗೋಕುಲದ ರಾಧೆ' ಹಾಡಿಗೆ ಶಿಲ್ಪಾ ಗಣೇಶ್ ಅವರು ಧ್ವನಿ ನೀಡಿದ್ದಾರೆ. ಸ್ಯಾಮುವೆಲ್ ಅಬಿ ಸಂಗೀತ ನಿರ್ದೇಶನ ಮಾಡಿದ್ದಾರೆ.

ಜಸ್ಕರಣ್ ಸಿಂಗ್ ಜೊತೆ ಶಿಲ್ಪಾ ಗಣೇಶ್ ಅವರು ಹಾಡಿದ್ದಾರೆ. ಮೊದಲಿಂದಲೂ ಹಾಡುವ ಹವ್ಯಾಸ ಇರುವ ಶಿಲ್ಪಾ ಅವರು ಸಿನಿಮಾಗಾಗಿ ಹಾಡಿರುವುದು ಇದೇ ಮೊದಲು. ಶಿಲ್ಪಾ ಅವರ ಕಂಠಕ್ಕೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಶಿಲ್ಪಾ ಗಣೇಶ್ ಅವರು ಕೇವಲ ನಿರ್ಮಾಣದ ಹಿಂದೆ ಇರುವ ವ್ಯಕ್ತಿಯಲ್ಲ, ಕಲೆಯ ವಿವಿಧ ಆಯಾಮಗಳತ್ತ ಆಸಕ್ತಿ ಹೊಂದಿರುವ ಸೃಜನಶೀಲ ವ್ಯಕ್ತಿ ಎಂದು ಚಿತ್ರತಂಡ ಹೇಳಿದೆ.

# ಮೌನಿ ರಾಯ್‌ಗೆ ಸಿಕ್ಕ ಜೀವನಾಂಶ ಎಷ್ಟು

ಮೌನಿ ರಾಯ್ ಮತ್ತು ಸೂರಜ್ ನಂಬಿಯಾರ್ ವಿಚ್ಛೇದನ ದೃಢಪಟ್ಟಿದೆ. ಜೀವನಾಂಶ ಹಾಗೂ ಮೂರನೇ ವ್ಯಕ್ತಿಯ ಬಗ್ಗೆ ಹಬ್ಬಿದ್ದ ವದಂತಿಗಳು ಸಂಪೂರ್ಣ ಸುಳ್ಳು ಎಂದು ಸೂರಜ್ ಸ್ಪಷ್ಟಪಡಿಸಿದ್ದಾರೆ. ಇದು ಪರಸ್ಪರ ಗೌರವ ಹಾಗೂ ಸಮ್ಮತಿಯಿಂದ ತೆಗೆದುಕೊಂಡ ನಿರ್ಧಾರ. ಮಾಧ್ಯಮಗಳು ಖಾಸಗಿತನಕ್ಕೆ ಗೌರವ ನೀಡಬೇಕು ಎಂದು ದಂಪತಿ ಮನವಿ ಮಾಡಿದ್ದಾರೆ.

ಭಾರತ ಮೂಲದ ದುಬೈ ಉದ್ಯಮಿ ಸೂರಜ್ ನಂಬಿಯಾರ್ ಹಾಗೂ ಬಾಲಿವುಡ್ ನಟಿ ಮೌನಿ ರಾಯ್ ಇಬ್ಬರೂ ಡಿವೋರ್ಸ್ ಪಡೆದಿದ್ದಾರೆ. ಇಬ್ಬರ ಮಧ್ಯೆ ಮೂರನೇ ವ್ಯಕ್ತಿ ಎಂಟ್ರಿ ಆಗಿರುವುದೇ ಡಿವೋರ್ಸ್‌ಗೆ ಕಾರಣ ಎಂಬ ವದಂತಿ ಸೃಷ್ಟಿ ಆಗಿತ್ತು. ಅಲ್ಲದೆ, ನಟಿಗೆ ಸಾಕಷ್ಟು ಜೀವನಾಂಶ ಸಿಕ್ಕಿದೆ ಎಂದು ಕೂಡ ಹೇಳಲಾಗಿತ್ತು. ಈ ಎಲ್ಲಾ ವದಂತಿಗೆ ಸೂರಜ್ ನಂಬಿಯಾರ್ ಸ್ಪಷ್ಟನೆ ನೀಡಿದ್ದಾರೆ. ತಮ್ಮಿಬ್ಬರ ವಿಚ್ಛೇದನದ ಕುರಿತು ವರದಿಯಾಗುತ್ತಿರುವ ಸುದ್ದಿಗಳು ಸಂಪೂರ್ಣ ಸುಳ್ಳು, ಆಧಾರರಹಿತ ಮತ್ತು ದುರುದ್ದೇಶಪೂರಿತ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಪರಸ್ಪರ ಗೌರವ ಮತ್ತು ಒಮ್ಮತದ ನಿರ್ಧಾರದಿಂದಲೇ ತಾವಿಬ್ಬರು ಬೇರೆಯಾಗುತ್ತಿರುವುದಾಗಿ ಸೂರಜ್ ತಿಳಿಸಿದ್ದಾರೆ. ಈ ನಿರ್ಧಾರದ ಹಿಂದೆ ಯಾವುದೇ ಮೂರನೇ ವ್ಯಕ್ತಿಯ ಹಸ್ತಕ್ಷೇಪವಿಲ್ಲ ಎಂದು ಹೇಳಿದ್ದಾರೆ. ಜೀವನಾಂಶ ಅಥವಾ ಇನ್ಯಾವುದೇ ವಿಷಯದ ಬಗ್ಗೆ ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಮಾಧ್ಯಮಗಳಲ್ಲಿ ಬರುತ್ತಿರುವ ಕಟ್ಟುಕಥೆಗಳು ಕೇವಲ ಇಬ್ಬರು ವ್ಯಕ್ತಿಗಳ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಪ್ರಯತ್ನವಷ್ಟೇ ಎಂದು ಅವರು ಬೇಸರ ಹೊರಹಾಕಿದ್ದಾರೆ. ಈ ಮೂಲಕ ಮೌನಿ ರಾಯ್ ಅವರು ಯಾವುದೇ ಜೀವನಾಂಶ ಕೇಳಿಲ್ಲ ಎಂಬುದು ಸ್ಪಷ್ಟವಾಗಿದೆ. ಸಂಬಂಧವಿಲ್ಲದವರನ್ನು ಈ ವಿವಾದಕ್ಕೆ ಎಳೆದು ತರುತ್ತಿರುವುದರ ಬಗ್ಗೆ ಸೂರಜ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಾವಿಬ್ಬರೂ ಈ ಕಠಿಣ ಸಮಯದಲ್ಲಿ ಗೌರವಯುತವಾಗಿ ನಡೆದುಕೊಂಡಿದ್ದು, ಮಾಧ್ಯಮಗಳು ಮತ್ತು ಸಾರ್ವಜನಿಕರು ಕೂಡ ಜವಾಬ್ದಾರಿಯಿಂದ ವರ್ತಿಸಿ ತಮ್ಮ ಖಾಸಗಿತನಕ್ಕೆ ಗೌರವ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ತಿಲಕ್ - ಶ್ರೀಲೀಲಾ ಡೇಟಿಂಗ್ ವದಂತಿಗೆ ಬ್ರೇಕ್



ನಟಿ ಶ್ರೀಲೀಲಾ ಮತ್ತು ಕ್ರಿಕೆಟಿಗ ತಿಲಕ್ ವರ್ಮಾ ಡೇಟಿಂಗ್ ವದಂತಿಗಳನ್ನು ಅವರ ತಾಯಿ ಡಾ. ಸ್ವರ್ಣಲತಾ ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಇಬ್ಬರೂ ಭೇಟಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಶ್ರೀಲೀಲಾ ಸದ್ಯ ಸಿನಿಮಾ ವೃತ್ತಿ ಹಾಗೂ ನೀಟ್ ಪಿಜಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾರೆ. ನೆಟ್ಟಿಗರು ಸಣ್ಣ ವಿಷಯಗಳನ್ನಿಟ್ಟುಕೊಂಡು ಸುಳ್ಳು ಕಥೆಗಳನ್ನು ಹೆಣೆಯುತ್ತಿದ್ದಾರೆ ಎಂದು ಅವರು ತಿಳಿಸಿದ್ದು, ಶ್ರೀಲೀಲಾ ಪ್ರಸ್ತುತ ತಮ್ಮ ಶಿಕ್ಷಣ ಮತ್ತು ಸಿನಿಮಾದತ್ತ ಮಾತ್ರ ಗಮನ ಹರಿಸಿದ್ದಾರೆ.

ಸೆಲೆಬ್ರಿಟಿಗಳು ಸಣ್ಣ ಸಣ್ಣ ವಿಷಯಕ್ಕೂ ಸುದ್ದಿ ಆಗುತ್ತಾರೆ. ಅವರು ಏನೇ ಮಾಡಿದರೂ ಚರ್ಚೆ ಆಗುತ್ತದೆ. ಸಣ್ಣ ಸಣ್ಣ ಕಾಕತಾಳೀಯಗಳೂ ಸಹ ದೊಡ್ಡ ಮಟ್ಟದ ಗಾಸಿಪ್‌ಗಳಾಗಿ ಮಾರ್ಪಡುತ್ತವೆ. ಒಂದೇ ಜಾಗದಲ್ಲಿ ಕಾಣಿಸಿಕೊಂಡರೆ ಸಾಕು, ಅವರಿಬ್ಬರ ನಡುವೆ ಏನೋ ನಡೆಯುತ್ತಿದೆ ಎಂದು ಕಥೆ ಕಟ್ಟುವುದು ನೆಟ್ಟಿಗರಿಗೆ ಅಭ್ಯಾಸವಾಗಿಬಿಟ್ಟಿದೆ. ಈಗ ಇಂತಹದ್ದೇ ಒಂದು ಸುಳ್ಳು ವದಂತಿಗೆ ಸ್ಟಾರ್ ನಟಿ ಶ್ರೀಲೀಲಾ ಸಂತ್ರಸ್ತೆ ಆಗಿದ್ದಾರೆ. ಈಗ ಈ ವಿಷಯವಾಗಿ ಶ್ರೀಲೀಲಾ ತಾಯಿ ಸ್ವರ್ಣಲತಾ ಸ್ಪಷ್ಟನೆ ನೀಡಿದ್ದಾರೆ.

ಮುಂಬೈ ಇಂಡಿಯನ್ಸ್ ತಂಡದ ಯುವ ಆಟಗಾರ ತಿಲಕ್ ವರ್ಮ ಹಾಗೂ ಶ್ರೀಲೀಲಾ ಪರಸ್ಪರ ಡೇಟಿಂಗ್ ಮಾಡುತ್ತಿದ್ದಾರೆ ಎಂಬ ಸುದ್ದಿ ಕಳೆದ ಕೆಲವು ದಿನಗಳಿಂದ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿತ್ತು.

ಆದರೆ, ಈಗ ಈ ಎಲ್ಲಾ ಸುದ್ದಿಗಳಿಗೆ ಶ್ರೀಲೀಲಾ ಅವರ ತಾಯಿ ಡಾ. ಸ್ವರ್ಣಲತಾ ಅವರು ಅಧಿಕೃತವಾಗಿ ತೆರೆ ಎಳೆದಿದ್ದಾರೆ.

# ಬೋಲ್ಡ್ ಆಗಿ ಕಾಣಿಸಿದ ಮೌನ ಗುಡ್ಡೆಮನೆ

ಕಿರುತೆರೆ ನಟಿ ಮೌನ ಗುಡ್ಡೆಮನೆ ತಮ್ಮ ಟ್ರೆಡಿಷನಲ್ ಇಮೇಜ್ ಮೀರಿ 'ಲವ್ ಪಂಚ್' ಎಂಬ ಮೈಕ್ರೋ ಸರಣಿಯಲ್ಲಿ ಅನಿರೀಕ್ಷಿತ ಬೋಲ್ಡ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. 'ರಾಮಾಚಾರಿ' ಹಾಗೂ 'ಕೃಷ್ಣ ರುಕ್ಕು' ಧಾರಾವಾಹಿಗಳಲ್ಲಿ ಸಾದಾ ಸೀದಾ ಪಾತ್ರಗಳಲ್ಲಿ ಕಂಡಿದ್ದ ಮೌನ, ಈ ಹೊಸ ಸರಣಿಯ ವೈರಲ್ ಕ್ಲಿಪ್‌ಗಳಿಂದ ಅಭಿಮಾನಿಗಳನ್ನು ಅಚ್ಚರಿಗೊಳಿಸಿದ್ದಾರೆ. ಶರತ್ ಪದ್ಮನಾಭ್ ಜೊತೆಗಿನ ಅವರ ಹೊಸ ಕೆಮಿಸ್ಟ್ರಿ ಈಗ ಸದ್ದು ಮಾಡುತ್ತಿದೆ.

ಬಹುತೇಕ ಕಿರುತೆರೆ ನಟಿಯರು ತೆರೆಮೇಲೆ ಹೆಚ್ಚು ಟ್ರೆಡಿಷನಲ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ, ತೆರೆಯ ಹಿಂದೆ ಅಥವಾ ಬೇರೆ ಸಿನಿಮಾಗಳಲ್ಲಿ ಅವರು ಹಾಗೆಯೇ ಕಾಣಿಸಿಕೊಳ್ಳಬೇಕು ಎಂಬ ಯಾವುದೇ ಕಂಡೀಷನ್ ಇಲ್ಲ. ಈಗ ಮೌನ ಗುಡ್ಡೆಮನೆ ವಿಷಯದಲ್ಲಿ ಹೀಗೆಯೇ ಆಗಿದೆ. ಕಿರುತೆರೆಯಲ್ಲಿ ಸಖತ್ ಟ್ರೆಡಿಷನಲ್ ಆಗಿ ಕಾಣಿಸಿಕೊಳ್ಳೋ ಅವರು, ಮೈಕ್ರೋ ಸರಣಿಗಾಗಿ ಬೋಲ್ಡ್ ಅವತಾರ ತಾಳಿದ್ದಾರೆ. 'ಲವ್ ಪಂಚ್' ಹೆಸರಿನ ಮೈಕ್ರೋ ಸರಣಿ ಮಾಡಿದ್ದಾರೆ. ಈ ಸರಣಿಯ ಕ್ಲಿಪ್‌ಗಳು ವೈರಲ್ ಆಗುತ್ತಿವೆ.

ಇದನ್ನು ನೋಡಿದ ಫ್ಯಾನ್ಸ್ ಆಶ್ಚರ್ಯಚಕಿತರಾಗಿದ್ದಾರೆ. ಮೌನ ಗುಡ್ಡೆಮನೆ ಅವರು ಈ ಮೊದಲು 'ರಾಮಾಚಾರಿ' ಹೆಸರಿನ ಧಾರಾವಾಹಿ ಮಾಡಿ ಗಮನ ಸೆಳೆದಿದ್ದರು. ಈ ಧಾರಾವಾಹಿಯಲ್ಲಿ ಚಾರುಲತಾ ಹೆಸರಿನ ಪಾತ್ರ ಮಾಡಿದ್ದರು. ಈ ಸೀರಿಯಲ್ ಗಮನ ಸೆಳೆಯಲು ಅವರ ಕೊಡುಗೆಯೂ ಹೆಚ್ಚಿದೆ. ಈಗ 'ಕೃಷ್ಣ ರುಕ್ಕು' ಹೆಸರಿನ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ಈ ಸೀರಿಯಲ್ ಜೀ ಕನ್ನಡದಲ್ಲಿ ಪ್ರಸಾರ ಕಾಣುತ್ತಿದೆ. ಹೀಗಿರುವಾಗಲೇ ಅವರ ಹೊಸ ಸರಣಿ ಸದ್ದು ಮಾಡುತ್ತಿದೆ. 'ಪಾರು' ಧಾರಾವಾಹಿ ಮೂಲಕ ಫೇಮಸ್ ಆಗಿದ್ದ ಶರತ್ ಪದ್ಮನಾಭ್ ಈ ಸರಣಿಗೆ ಹೀರೋ. ಅವರು ಜೀ ಕನ್ನಡದ 'ನಾ ನಿನ್ನ ಬಿಡಲಾರೆ' ಧಾರಾವಾಹಿಯಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ. ಈಗ ಮೌನ ಹಾಗೂ ಶರತ್ ಅವರ ಬೋಲ್ಡ್ ಕೆಮಿಸ್ಟ್ರಿಗೆ ಎಲ್ಲರೂ ಫಿದಾ ಆಗಿದ್ದಾರೆ.

ಯಾವುದು ಈ ಸಿನಿಮಾ





ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ವೈಭವ್ ಸೂರ್ಯವಂಶಿ ಆರ್ಭಟ ಮುಂದುವರೆದಿದೆ. ಈ ಆರ್ಭಟದೊಂದಿಗೆ ಯುವ ಎಡಗೈ ದಾಂಡಿಗ ಭರ್ಜರಿ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಅದು ಕೂಡ ಸಿಡಿಲಬ್ಬರದ ಸರದಾರ ಅಭಿಷೇಕ್ ಶರ್ಮಾ ಹೆಸರಿನಲ್ಲಿದ್ದ ಅಮೋಘ ದಾಖಲೆಯನ್ನು ಮುರಿಯುವ ಮೂಲಕ ಎಂಬುದು ವಿಶೇಷ.

ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಪರ ಆರಂಭಿಕನಾಗಿ ಕಣಕ್ಕಿಳಿದ ವೈಭವ್ ಸೂರ್ಯವಂಶಿ 21 ಎಸೆತಗಳಲ್ಲಿ 3 ಭರ್ಜರಿ ಸಿಕ್ಸರ್ ಹಾಗೂ 5 ಫೋರ್‌ಗಳೊಂದಿಗೆ 46 ರನ್ ಬಾರಿಸಿದ್ದರು.

ಈ ಮೂರು ಸಿಕ್ಸರ್‌ಗಳೊಂದಿಗೆ ವೈಭವ್ ಸೂರ್ಯವಂಶಿ ಐಪಿಎಲ್ ಆವೃತ್ತಿಯೊಂದರಲ್ಲಿ

# ಹಳೆಯ ದಾಖಲೆ ಧೂಳೀಪಟ

ಅತ್ಯಧಿಕ ಸಿಕ್ಸ್ ಸಿಡಿಸಿದ ಭಾರತೀಯ ಬ್ಯಾಟರ್ ಎಂಬ ಭರ್ಜರಿ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಈ ದಾಖಲೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ ಹೆಸರಿನಲ್ಲಿತ್ತು.

2024ರ ಐಪಿಎಲ್ ಸೀಸನ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆರಂಭಿಕನಾಗಿ 16 ಇನಿಂಗ್ಸ್ ಆಡಿದ್ದ ಅಭಿಷೇಕ್ ಶರ್ಮಾ ಬರೋಬ್ಬರಿ 42 ಸಿಕ್ಸ್ ಸಿಡಿಸಿದ್ದರು. ಈ ಮೂಲಕ ಐಪಿಎಲ್ ಸೀಸನ್‌ವೊಂದರಲ್ಲಿ ಅತೀ ಹೆಚ್ಚು ಸಿಕ್ಸ್ ಬಾರಿಸಿದ ಭಾರತೀಯ ಬ್ಯಾಟರ್ ಎನಿಸಿಕೊಂಡಿದ್ದರು.

ಆದರೆ ಈ ಬಾರಿಯ ಐಪಿಎಲ್‌ನಲ್ಲಿ ಆರ್ಭಟಿಸಿರುವ ಬಾಸ್ ಬೇಬಿ ಖ್ಯಾತಿಯ ವೈಭವ್ ಸೂರ್ಯವಂಶಿ ಕೇವಲ 12 ಇನಿಂಗ್ಸ್‌ಗಳ ಮೂಲಕ 43 ಸಿಕ್ಸ್ ಚಚ್ಚಿದ್ದಾರೆ. ಈ ಮೂಲಕ ಐಪಿಎಲ್ ಇತಿಹಾಸದಲ್ಲೇ ಸೀಸನ್‌ವೊಂದರಲ್ಲಿ ಅತ್ಯಧಿಕ ಸಿಕ್ಸ್ ಸಿಡಿಸಿದ ಭಾರತೀಯ ಬ್ಯಾಟ್ಸ್‌ಮನ್ ಎಂಬ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇನ್ನು ಐಪಿಎಲ್ ಇತಿಹಾಸದಲ್ಲಿ ಸೀಸನ್‌ವೊಂದರಲ್ಲಿ ಅತೀ ಹೆಚ್ಚು ಸಿಕ್ಸ್ ಬಾರಿಸಿದ ಅಮೋಘ ದಾಖಲೆ ಕ್ರಿಸ್ ಗೇಲ್ ಹೆಸರಿನಲ್ಲಿದೆ. 2012ರ ಐಪಿಎಲ್ ಸೀಸನ್‌ನಲ್ಲಿ ಆರ್‌ಸಿಬಿ ಪರ ಕಣಕ್ಕಿಳಿದಿದ್ದ ಗೇಲ್ ಬರೋಬ್ಬರಿ 59 ಸಿಕ್ಸ್ ಸಿಡಿಸಿದ್ದರು. 14 ವರ್ಷಗಳ ಹಿಂದೆ ಬರೆದ ಈ ದಾಖಲೆಯನ್ನು ಇಂದಿಗೂ ಯಾರಿಗೂ ಮುರಿಯಲು ಸಾಧ್ಯವಾಗಿಲ್ಲ ಎಂಬುದು ವಿಶೇಷ.

# ದಾಖಲೆಗಳ ಸರದಾರನ ಹೆಸರಿಗೆ ಮತ್ತೊಂದು ವಿಶ್ವ ದಾಖಲೆ



ದಾಖಲೆಗಳ ಸರದಾರನ ಹೆಸರಿಗೆ ಮತ್ತೊಂದು ವಿಶ್ವ ದಾಖಲೆ ಸೇರ್ಪಡೆಯಾಗಿದೆ.

ಈ ಬಾರಿ ಸೇರ್ಪಡೆಯಾಗಿರುವ ಹೊಸ ದಾಖಲೆ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು 50+ ರನ್‌ಗಳ ಜೊತೆಯಾಟ. ಈ ದಾಖಲೆಯೊಂದಿಗೆ ಇಂಗ್ಲೆಂಡ್ ಬ್ಯಾಟರ್ ಅಲೆಕ್ಸ್ ಹೇಲ್ಸ್ ಅವರ ವಿಶ್ವ ದಾಖಲೆಯನ್ನು ವಿರಾಟ್ ಕೊಹ್ಲಿ ಸರಿಗಟ್ಟಿದ್ದಾರೆ.

ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಆರಂಭಿಕನಾಗಿ ಕಣಕ್ಕಿಳಿದ ವಿರಾಟ್ ಕೊಹ್ಲಿ 2ನೇ ವಿಕೆಟ್‌ಗೆ ದೇವದತ್ ಪಡಿಕ್ಕಲ್ ಜೊತೆ 76 ರನ್‌ಗಳ ಜೊತೆಯಾಟವಾಡಿದ್ದರು. ಈ ಜೊತೆಯಾಟದೊಂದಿಗೆ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತೀ ಹೆಚ್ಚು ಬಾರಿ 50+ ರನ್‌ಗಳ ಜೊತೆಯಾಟವಾಡಿದ ಏಷ್ಯನ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ವಿಶ್ವ ದಾಖಲೆಯನ್ನು ಕೂಡ ಸರಿಗಟ್ಟಿದ್ದಾರೆ.

ಟಿ20 ಕ್ರಿಕೆಟ್ ಇತಿಹಾಸದಲ್ಲಿ ಅತೀ ಹೆಚ್ಚು ಬಾರಿ 50+ ಸ್ಕೋರ್ ಜೊತೆಯಾಟವಾಡಿದ ವಿಶ್ವ ದಾಖಲೆ ಇಂಗ್ಲೆಂಡ್‌ನ ಅಲೆಕ್ಸ್ ಹೇಲ್ಸ್ ಹೆಸರಿನಲ್ಲಿದೆ. ಈವರೆಗೆ 523 ಟಿ20 ಇನಿಂಗ್ಸ್ ಆಡಿರುವ ಹೇಲ್ಸ್ ಒಟ್ಟು 210 ಬಾರಿ 50+ ಜೊತೆಯಾಟದಲ್ಲಿ ಪಾಲುದಾರರಾಗಿದ್ದಾರೆ. ಇದೀಗ ಈ ಸಂಖ್ಯೆಯನ್ನು ಕಿಂಗ್ ಕೊಹ್ಲಿ ಸರಿಗಟ್ಟಿರುವುದು ವಿಶೇಷ.

ಈವರೆಗೆ 410 ಟಿ20 ಇನಿಂಗ್ಸ್ ಆಡಿರುವ ವಿರಾಟ್ ಕೊಹ್ಲಿ ಒಟ್ಟು 210 ಬಾರಿ 50+ ಸ್ಕೋರ್‌ಗಳ ಜೊತೆಯಾಟವಾಡಿದ ಪಾಲುದಾರರಾಗಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತೀ ಹೆಚ್ಚು ಬಾರಿ 50+ ಸ್ಕೋರ್‌ಗಳ ಜೊತೆಯಾಟವಾಡಿದ ಅಲೆಕ್ಸ್ ಹೇಲ್ಸ್ ಅವರ ವಿಶ್ವ ದಾಖಲೆಯನ್ನು ಕಿಂಗ್ ಕೊಹ್ಲಿ ಸರಿಗಟ್ಟಿದ್ದಾರೆ. ಇನ್ನು ಈ ಪಂದ್ಯದಲ್ಲಿ ಬಾರಿಸಿದ 58 ರನ್‌ಗಳೊಂದಿಗೆ ವಿರಾಟ್ ಕೊಹ್ಲಿ ಈ ಬಾರಿಯ ಐಪಿಎಲ್‌ನಲ್ಲಿ 500 ರನ್‌ಗಳನ್ನು ಪೂರೈಸಿದ್ದಾರೆ.

# 'ಐಸಿಸಿ ಹೊಸ ನಿಯಮ'ದ ಕಾರಣ ಹೊರಗುಳಿದ ರಜತ್



ಇಂಡಿಯನ್ ಪ್ರೀಮಿಯರ್ ಲೀಗ್‌ನ 61ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿ ಆಗಿದ್ದವು. ಈ ಪಂದ್ಯದಲ್ಲಿ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್ ಕಾಣಿಸಿಕೊಂಡಿರಲಿಲ್ಲ. ಇದಕ್ಕೆ ಕಾರಣವೇನು ಎಂದು ನೋಡುವುದಾದರೆ... ಸಿಗುವ ಉತ್ತರ ಐಸಿಸಿ ನಿಯಮ.

ಹೌದು, ರಜತ್ ಪಾಟಿದಾರ್ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಿಂದ ಹೊರಗುಳಿಯಲು ಮುಖ್ಯ ಕಾರಣ ಐಸಿಸಿ ನಿಯಮ. ಈ ಪಂದ್ಯಕ್ಕೂ ಮುನ್ನ ಅಂದರೆ, ಮೇ 13 ರಂದು ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದಲ್ಲಿ, ಕೆಕೆಆರ್ ವೇಗಿ ಕಾರ್ತಿಕ್ ತ್ಯಾಗಿ ಎಸೆದ ತೀಕ್ಷ್ಣವಾದ ಬೌನ್ಸರ್ ಬಾಲ್ ರಜತ್ ಪಾಟೀದಾರ್ ಅವರ ಹೆಲ್ಮೆಟ್‌ಗೆ ನೇರವಾಗಿ ಬಡಿದಿತ್ತು.

ಪಂದ್ಯದ ವೇಳೆ ಆರಂಭಿಕ ವೈದ್ಯಕೀಯ ತಪಾಸಣೆಯಲ್ಲಿ ಅವರು ತೇರ್ಗಡೆಯಾಗಿ ಬ್ಯಾಟಿಂಗ್ ಮುಂದುವರಿಸಿದ್ದರು. ಆದರೆ, ಪಂದ್ಯ ಮುಗಿದ ನಂತರ ಅವರಲ್ಲಿ ಮೆದುಳಿನ ಆಘಾತದ ಲಕ್ಷಣಗಳು ಕಾಣಿಸಿಕೊಂಡವು. ಹೀಗಾಗಿ ಆರ್‌ಸಿಬಿ ಟೀಮ್ ಮ್ಯಾನೇಜ್ಮೆಂಟ್ ಪಾಟಿದಾರ್ ಅವರನ್ನು ಪಂಜಾಬ್ ಕಿಂಗ್ಸ್ ತಂಡದ ಪಂದ್ಯದಿಂದ ಹೊರಗಿಟ್ಟಿದ್ದಾರೆ. ಏಕೆಂದರೆ, ಐಸಿಸಿಯ ವೈದ್ಯಕೀಯ ನಿಯಮಗಳ ಪ್ರಕಾರ, ಯಾವುದೇ ಆಟಗಾರನಿಗೆ ಮೆದುಳಿನ ಆಘಾತ ದೃಢಪಟ್ಟರೆ ಅಥವಾ ಅದರ ಲಕ್ಷಣಗಳು ಕಂಡುಬಂದರೆ ಅವರನ್ನು ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಸುವಂತಿಲ್ಲ. ಬದಲಾಗಿ ವಿಶ್ರಾಂತಿ ನೀಡುವುದು ಕಡ್ಡಾಯ. ಒಂದು ವೇಳೆ ಗಂಭೀರ ಲಕ್ಷಣಗಳು ಕಂಡು ಬಂದರೆ ಕಡ್ಡಾಯವಾಗಿ ಕನಿಷ್ಠ 7 ದಿನಗಳ ಕಾಲ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿಯಬೇಕು. ಆದರೆ ರಜತ್ ಪಾಟಿದಾರ್ ಅವರ ಗಾಯ ಗಂಭೀರವಲ್ಲ. ಇದಾಗ್ಯೂ, ಐಸಿಸಿ ನಿಯಮವನ್ನು ಪಾಲಿಸುವ ಸಲುವಾಗಿ ರಜತ್ ಪಾಟಿದಾರ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

# ನಮಗೆ ಅರ್ಹತೆಯೇ ಇಲ್ಲ ರಿಯಾನ್ ಪರಾಗ್ ಬೇಸರ..!

ಇಂಡಿಯನ್ ಪ್ರೀಮಿಯರ್ ಲೀಗ್‌ನ 62ನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ ಸೋಲನುಭವಿಸಿದೆ. ದೆಹಲಿಯ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ್ ರಾಯಲ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 193 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ 19.2 ಓವರ್‌ಗಳಲ್ಲಿ 197 ರನ್ ಬಾರಿಸಿ 5 ವಿಕೆಟ್‌ಗಳ ಜಯ ಸಾಧಿಸಿದೆ.

ಈ ಸೋಲಿನ ಬಳಿಕ ಮಾತನಾಡಿದ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್, ತಮ್ಮ ತಂಡದ ಕಳಪೆ ಪ್ರದರ್ಶನದ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಈ ಸೋಲಿಗೆ ತಂಡದ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಕಾರಣ ಎಂದಿದ್ದಾರೆ.

**ನಾವು ಅರ್ಹರಲ್ಲ!:** ಪಂದ್ಯದ ಬಳಿಕ ಮಾತನಾಡಿದ ರಿಯಾನ್ ಪರಾಗ್, ''ನಾವು ಇದೇ ರೀತಿ ಆಟ ಮುಂದುವರಿಸಿದರೆ, ಟೂರ್ನಿಯ ಟಾಪ್-4 ಹಂತ ತಲುಪಲು ಖಂಡಿತ ಅರ್ಹರಲ್ಲ, ಪ್ಲೇಆಫ್ ಆಡಲು ನಮಗೆ ಅರ್ಹತೆಯೇ ಇರಲ್ಲ'' ಎಂದು ಪರಾಗ್ ನೇರವಾಗಿಯೇ ಹೇಳಿದ್ದಾರೆ.

ಏಕೆಂದರೆ ರಾಜಸ್ಥಾನ್ ರಾಯಲ್ಸ್ ತಂಡವು 14 ಓವರ್‌ಗಳ ಮುಕ್ತಾಯಕ್ಕೆ 3 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಬಲಿಷ್ಠ ಸ್ಥಿತಿಯಲ್ಲಿತ್ತು. ಆದರೆ 26 ಎಸೆತಗಳಲ್ಲಿ 51 ರನ್ ಗಳಿಸಿದ್ದ ರಿಯಾನ್ ಪರಾಗ್ ಔಟಾದ ಬಳಿಕ ಕೆಳ ಕ್ರಮಾಂಕದ ಬ್ಯಾಟರ್‌ಗಳು ಸಂಪೂರ್ಣ ವೈಫಲ್ಯ ಅನುಭವಿಸಿದರು. ಕೊನೆಯ 7 ಓವರ್‌ಗಳಲ್ಲಿ ತಂಡ ಕೇವಲ 41 ರನ್ ಗಳಿಸಿ 6 ವಿಕೆಟ್ ಕಳೆದುಕೊಂಡಿತು.

220 ಅಥವಾ 230 ರನ್‌ಗಳ ಗುರಿ ನೀಡುವ ಸೂಚನೆ ನೀಡಿದ್ದ ರಾಜಸ್ಥಾನ್ ರಾಯಲ್ಸ್ ತಂಡವು ದಿಢೀರ್ ಕುಸಿತಕ್ಕೊಳಗಾಗಿ ಕೇವಲ 193 ರನ್‌ಗಳಿಗೆ ಇನಿಂಗ್ಸ್ ಅಂತ್ಯಗೊಳಿಸಿದ್ದರು. ಈ ಕಳಪೆ ಬ್ಯಾಟಿಂಗ್ ಅನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದು ರಿಯಾನ್ ಪರಾಗ್ ಬೇಸರ ವ್ಯಕ್ತಪಡಿಸಿದ್ದಾರೆ.



ಇನ್ನು ಫೀಲ್ಡಿಂಗ್ ವೇಳೆ ಕೆ.ಎಲ್. ರಾಹುಲ್ ಶೂನ್ಯ ರನ್ ಗಳಿಸಿದ್ದಾಗ ಯಶ್ ರಾಜ್ ಪುಂಜಾ ಕ್ಯಾಚ್ ಕೈಬಿಟ್ಟಿದ್ದು ದುಬಾರಿಯಾಗಿ ಪರಿಣಮಿಸಿತು. ''ನಾವು ಟ್ರೋಫಿ ಗೆಲ್ಲಬೇಕು ಎಂದರೆ ಇಂತಹ ಕಳಪೆ ಫೀಲ್ಡಿಂಗ್ ಬದಲಾಗಬೇಕು'' ಎಂದು ರಿಯಾನ್ ಪರಾಗ್ ನೇರವಾಗಿ ಹೇಳಿದ್ದಾರೆ.

ಇದೇ ವೇಳೆ ಪಂದ್ಯದ ಕೊನೆಯಲ್ಲಿ 18 ಎಸೆತಗಳಲ್ಲಿ 35 ರನ್ ಬೇಕಾಗಿದ್ದಾಗ, ಅನುಭವಿ ದಸುನ್ ಶಾನಕ ಬದಲಿಗೆ ಪಾರ್ಟ್-ಟೈಮ್ ಆಫ್-ಸ್ಪಿನ್ನರ್ ಡೊನೊವನ್ ಫೆರೇರಾಗೆ ಓವರ್ ನೀಡಿದ ನಿರ್ಧಾರವನ್ನು ಸಮರ್ಥಿಸಿಕೊಂಡ ಪರಾಗ್, ಕ್ರೀಸ್‌ನಲ್ಲಿ ಇಬ್ಬರು ಎಡಗೈ ಬ್ಯಾಟರ್‌ಗಳಿದ್ದ ಕಾರಣ ಈ ರಿಸ್ಕ್ ತೆಗೆದುಕೊಳ್ಳಬೇಕಾಯಿತು ಎಂದಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ರಿಯಾನ್ ಪರಾಗ್ ಅವರ ಈ ನೇರ ನುಡಿಗಳು ತಂಡದಲ್ಲಿನ ಆಂತರಿಕ ಅಸಮಾಧಾನ ಮತ್ತು ಒತ್ತಡವನ್ನು ಎತ್ತಿ ತೋರಿಸುತ್ತವೆ. ಟೂರ್ನಿಯ ಮೊದಲಾರ್ಧದಲ್ಲಿ ಅಬ್ಬರಿಸಿದ್ದ ರಾಜಸ್ಥಾನ್ ರಾಯಲ್ಸ್, ಲೀಗ್ ಹಂತದ ನಿರ್ಣಾಯಕ ಹಂತದಲ್ಲಿ ಸತತ ಸೋಲುಗಳಿಂದ ಕಂಗೆಟ್ಟಿದೆ. ಈಗ ರಾಜಸ್ಥಾನ್ ತಂಡದ ಪ್ಲೇ-ಆಫ್ ಭವಿಷ್ಯ ಅವರದ್ದೇ ಕೈಯಲ್ಲಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,**
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: **udayavahininews@yahoo.com** , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**